# ಅಪರಂಜಿ

ತಿಳಿನಗೆಯ ಕಾರಂಜಿ

ಜುಲೈ 2025




ಬಿಡಿ ಪ್ರತಿ: ರೂ. 10/–

# BSS Construction services

*Building Excellence, Delivered On Time !*

ಪ್ರತಿಯೊಬ್ಬ ಗಂಡಸಿಗೂ ಮನೆ ಮತ್ತು ಹೆಂಡತಿ
ಇರಲೇ ಬೇಕು ... ಸ್ವಂತದ್ದಾದಷ್ಟೂ ಒಳ್ಳೇದು! –© ಬೀchi

---

At BSS, we specialize in delivering top-notch construction services with a focus on quality, reliability, and timely delivery. Whether you're building your dream home or commercial project, we ensure exceptional craftsmanship and seamless execution from start to finish.

## Why Choose Us?

- On-time project completion
- Tailored solutions for every need
- Premium materials & expert craftsmanship
- Affordable pricing with transparent quotes

Contact us today for a consultation and see why we're the trusted choice for all your construction services.

---

**Ph : 080-29731414 Mobile : 9035007003**
**Email: bss1constructions@gmail.com**



" ಶಂಖ ಊದಿ ಪ್ರೈಜ್ ಗೆಲ್ಲಿ "




" ಐ ಪಿ ಎಲ್ಲೂ, ಪಿಕ್ಕಲ್ಲೂ "

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457

www.mallige.com

NABH ACCREDITED – PATIENT SAFETY & QUALITY OF CARE

Certificate No.: MC-2068



Established in 1978 we are a multi-speciality, tertiary care hospital.

CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

ಚಂದಾ ವಿವರ :

ಬಿಡಿ ಪ್ರತಿ : ರೂ. 10/–

ವಾರ್ಷಿಕ ಚಂದಾ : ರೂ. 100/–

ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 42

ಸಂಚಿಕೆ – 10

ಜುಲೈ – 2025

## *ಈ ಸಂಚಿಕೆಯಲ್ಲಿ...*


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಕೆಂಚುಗೂದಲ ಭರಮ | ಶಿವಕುಮಾರ್ | 5 |
| ಮೂಲಂಗಿ ಟ್ಯಾಕ್ಸ್ | ಬೇಲೂರು ರಾಮಮೂರ್ತಿ | 7 |
| ಕೆಂಚನ ವಿಸ್ಡಮ್ಮು | ಅಣಕು ರಾಮನಾಥ್ | 8 |
| ಬರ್ಕಿ ಮೊಲಾ | ವಿಲಾಸ ನಾ ಹುದ್ದಾರ | 9 |
| ತಾವರೆಕೆರೆ | ಬಿ.ಎಸ್. ಶೈಲಜಾ | 11 |
| ಭಿನ್ನಶಕ್ತಿ | ಆರ್. ಎಸ್. ರಾಜಾರಾಂ | 13 |
| ಕೆಂಚು ಕೂದಲ ರ್‍ಯಾಬಿಟ್ ರಾಜ | ವಿ. ವಿಜಯೇಂದ್ರರಾವ್ | 15 |
| ಕೆಂಪ ಕೂದ್ಲಿನ ಮಾರಾಜಾ | ಅರವಿಂದ.ಜಿ.ಜೋಷಿ | 16 |
| ಕೆಂಚುಗೂದಲ ಮೊಲದ ಕತೆ | ಜಿ. ವಿ. ಅರುಣ | 17 |
| ಮೂಲಂಗಿರಾಜಾ ಪ್ರಕರಣ ! | ಚಿತ್ರಾ ರಾಮಚಂದ್ರನ್ | 20 |
| ತುಂತುರು | ದಂನಆ | 25 |
| ಐಪೀಎಲ್ಲೂ, ಪಿಕಲ್ಲೂ | ಅಣಕು ರಾಮನಾಥ್ | 26 |
| ಬೆಂಡು ಖರ್ಜೂರ | ಹೆಚ್.ವಿ. ರಮೇಶ್ | 30 |
| ಶಂಖ ಊದಿ ಪ್ರೈಜು ಗೆಲ್ಲಿ! | ಜಯಶ್ರೀ ದೇಶಪಾಂಡೆ | 33 |
| ಬವಣೂರಿಗೊಂದು ಮಾಸ್ಟರ್ ಪ್ಲಾನ್ | ಹೆಚ್. ಆರ್. ಪ್ರಭಾಕರ | 35 |
| ಕ್ರಿಕೆಟ್ ಜಗತ್ತು ಮತ್ತು ಅಲ್ಲಿನ...... | ಇ.ಆರ್.ರಾಮಚಂದ್ರನ್ | 39 |


**ವ್ಯಂಗ್ಯ ಚಿತ್ರಗಳು : ಹೊರಪುಟ : ಅಶೋಕ್ ಹೆಮ್ಮಿಗೆ**

**ಒಳಪುಟಗಳು : ಅಶ್ವಥ್ ಮತ್ತು ಚಾಟ್ ಜಿಪಿಟಿ**

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



# ಅಪರಂಜಿ ಕಿಡಿ

● ಪ್ರಕಾಶ್

"ವಯಸ್ಕರಲ್ಲಿ ಕಣ್ಣಿನ ಪೊರೆ ಬಹಳ ಹೆಚ್ಚುತ್ತಿದೆ."

–ವೈದ್ಯರ ಕಳವಳ

ಅರೆ, ತಳಮಳವೇಕೆ ?!

* * *

ಚೀನಾಬ್ ಮೇಲಿನ ಕಮಾನು ಸೇತುವೆಯ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ ಮಾಧವಿ ಲತಾ ಅವರಿಗೆ ಅಪರಂಜಿಯ ಶುಭ ಹಾರೈಕೆಗಳು !

* * *

ಮೆಟ್ರೋ ಕೆಂಪು ಮಾರ್ಗಕ್ಕೆ ಕೇಂದ್ರದ ಅನುಮತಿ ಇಲ್ಲ

–ಪತ್ರಿಕೆ

ಕೆಂಪು ಬಣ್ಣ ಬದಲಿಸಿ ಅನುಮತಿ ಕೇಳಬಹುದಲ್ಲ !!

* * *

"ಒಂದು ಅಡಿ ಮೇಲೆ ಕಟ್ಟಿರುವ ಇಂಗು ಗುಂಡಿ"

– ಸುದ್ದಿ

"ಪಾಪ, ನ್ಯೂಟನ್ ಅವರ ಆತ್ಮ ಬೆಚ್ಚಿತಂತೆ !!"

* * *

"ಕಾನೂನು ದುರ್ಬಳಕೆ ಸಲ್ಲ. ಗುರಾಣಿ ಕತ್ತಿಯಾದೀತು !"

–ಹೇಳಿಕೆ

ಆಹಾ ! ಸಮಂಜಸ ಎಚ್ಚರಿಕೆ !!

* * *

ಒಂದೂವರೆ ಲಕ್ಷ ಲಂಚ ಕೇಳಿದ ಸರ್ವೆ ಅಧಿಕಾರಿಯ ಬಂಧನ

–ಪತ್ರಿಕೆ

ಇದೆಲ್ಲಾ ಈಗ ಸರ್ವೆ ಸಾಧಾರಣವಾಗಿದೆ !!!

* * *

ರೆಪೋ ಇಳಿಕೆ ; ಸಾಲ ಅಗ್ಗ

–ಆರ್.ಬಿ.ಐ.

..........ಪಾಲೋಗರುಂಡಂತೆ.........

●

# "ನಮ್ಮ ನಿಮ್ಮಲ್ಲಿ"

ಶಿವಕುಮಾರ್

ಮೇ ತಿಂಗಳ ಸಂಚಿಕೆಯಲ್ಲಿ ನಮ್ಮ ಬಳಗದ ಬರಹಗಾರ ಬರಹಗಾರ್ತಿಯರಿಗೆ ಸೃಜನಶೀಲ ಸವಾಲೊಂದನ್ನು ನೀಡಿದ್ದು ನಿಮಗೆ ನೆನಪಿರಬಹುದು. ಬಾಲಬೋಧೆಯ ಕಥೆಯೊಂದನ್ನು, ನಮ್ಮ ನಾಡಿನ ಹಿರಿಯ ಸಾಹಿತಿಗಳ ಶೈಲಿಯಲ್ಲಿ ಮರು ನಿರೂಪಿಸುವುದೇ ಈ ಸವಾಲು. ಈ ಸ್ಪರ್ಧೆಯ ಉದ್ದೇಶ ಇಷ್ಟೇ. ಎಲ್ಲ ಸಾಹಿತ್ಯಾಸಕ್ತರಿಗೂ ಹಲವು ಆಪ್ತ ಸಾಹಿತಿಗಳಿರುತ್ತಾರೆ. ಅಂತಹ ಸಾಹಿತಿಗಳ ಬರಹದ ಶೈಲಿ ಈ ಓದುಗರಿಗೆ ಅತ್ಯಂತ ಅಪ್ಯಾಯಮಾನ. ತಮ್ಮ ಮೆಚ್ಚಿನ ಸಾಹಿತಿಯ ಶೈಲಿಯನ್ನು ಅನುಕರರಿಸಿ ಬರೆಯುವುದೆಂದರೆ ಆ ಆರಾಧ್ಯ ಸಾಹಿತಿಯನ್ನು ಗೌರವಿಸಿದಂತೆ. ಹಾಗಾಗಿ ಈ "ಶೈಲಿ ಅನುರಕಣೆ" ಪ್ರಯೋಗ, ನಿಜಕ್ಕೂ ಒಂದು ಸೃಜನಶೀಲ ಕಸರತ್ತಾಗುವುದು ಸಾಧ್ಯ. ಹೀಗೆಲ್ಲಾ ಯೋಚಿಸಿ ಮೇ ತಿಂಗಳಲ್ಲಿ ಈ ಸ್ಪರ್ಧೆಯ ವಿವರಗಳನ್ನು ಪ್ರಕಟಿಸಿದೆವು.

ನಮ್ಮ ನಿರೀಕ್ಷೆಗೂ ಮೀರಿ ನಮ್ಮ ಬಳಗದ ಬರಹಗಾರರು ಸ್ಪಂದಿಸಿದ್ದು ನಿಜಕ್ಕೂ ಸಂತಸದ ಸಂಗತಿ. ಸಂಪಾದಕ ಮಂಡಳಿಯ ಸದಸ್ಯರೂ ಸೇರಿದಂತೆ ಒಟ್ಟು ಹತ್ತು ವೈವಿಧ್ಯಮಯ ಲೇಖನಗಳು ಸಂಪಾದಕರ ಮೇಜನ್ನು ತಲುಪಿದವು. ನಮ್ಮ ಉಪ ಸಂಪಾದಕರು ಭೈರಪ್ಪನವರ ಶೈಲಿಯನ್ನು ಮೆಚ್ಚಿ ಅನುಕರಿಸಿದರು. ಸಂಪಾದಕ ಮಂಡಳಿಯ ರಾಮನಾಥರು ಭಾಮಿನಿ ಷಟ್ಪದಿಯಲ್ಲಿ ಕವನವೊಂದನ್ನು ರಚಿಸಿದರು. ನಾನು ಶಿವರಾಮ ಕಾರಂತರ ಭಕ್ತ. ಹಾಗಾಗಿ ಅವರನ್ನು ಬಿಟ್ಟು ಬೇರಾರನ್ನೂ ಆರಿಸುವ ಗೋಜಿಗೆ ಹೋಗಲಿಲ್ಲ. ನಮ್ಮ ಹಿರಿಯ ಲೇಖಕ ವಿಲಾಸ ಹುದ್ದಾರರು, ನಮ್ಮ ಬಳಗದವರೇ ಆಗಿದ್ದ ದಿವಂಗತ ಶ್ರೀನಿವಾಸ ವೈದ್ಯರ ಭಾಷೆಯನ್ನು ತಮ್ಮ ಲೇಖನಕ್ಕೆ ಆರಿಸಿಕೊಂಡಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಟಿ.ಪಿ. ಕೈಲಾಸಂ ಅವರ ಖ್ಯಾತಿ ಯಾರಿಗೆ ತಿಳಿದಿಲ್ಲ. ಹಾಗಾಗಿ ಶ್ರೀಮತಿ ಬಿ.ಎಸ್.ಶೈಲಜಾ, ಹಾಗೂ ಶ್ರೀ ವಿ.ವಿಜಯೇಂದ್ರ ರಾವ್ ಇವರಿಬ್ಬರೂ ಟಿಪಿಕಲ್ ಟೀಪೀಯವರ ಹಾದಿಯನ್ನೇ ತುಳಿಯಲು ನಿರ್ಧರಿಸಿದ್ದಾರೆ. ಶೈಲಜಾ ಅವರು ಹಿಂದೆ ಅನೇಕ ಲೇಖನಗಳನ್ನು ಅಪರಂಜಿಗೆ ನೀಡಿ ಪತ್ರಿಕೆಯನ್ನು ಶ್ರೀಮಂತಗೊಳಿಸಿದ್ದರು. ನಾ. ಕಸ್ತೂರಿಯವರ ಪೌತ್ರ ಶ್ರೀ ರಾಜಾರಾಮ್ ಅವರು ಸಹಜವಾಗಿಯೇ ತಮ್ಮ ತಾತನವರ ಶೈಲಿಯನ್ನು ಅನುಕರಿಸಿ ಬರೆದಿದ್ದಾರೆ. ಶ್ರೀ ಜಿ.ವಿ. ಅರುಣ ಅವರು (ಖ್ಯಾತ ನಿಘಂಟುಕಾರ, ಜಿ ವೆಂಕಟಸುಬ್ಬಯ್ಯವನರ ಪೌತ್ರ) ಕನ್ನಡದ ಆಸ್ತಿ ಎಂದೇ ಹೆಸರಾಗಿದ್ದ ಮಾಸ್ತಿಯವರ ಶೈಲಿಯಲ್ಲಿ ತಮ್ಮ ಲೇಖನವನ್ನು ರೂಪಿಸಿದ್ದಾರೆ. ಶ್ರೀ ಅರವಿಂದ ಜೋಷಿ ಅವರಂತೂ ಬೇಂದ್ರೆಯವರ ಶೈಲಿಯನ್ನಾಧರಿಸಿ ಆ ಹಿರಿಯರಿಗೆ ತಮ್ಮ ನಮನವನ್ನು ಸೂಚಿಸಿದ್ದಾರೆ. ನಮ್ಮ ನಿಲಯದ ಕಲಾವಿದರಾದ (!) ಚಿತ್ರಾ ಅವರು ಶರಲೇಖನ ಭಕ್ತೆ. ಹಾಗಾಗಿ ಅವರ "ಮೂಲಂಗಿರಾಜ ಪ್ರಕರಣ" ನಿರೀಕ್ಷಿಸಿದ್ದೇ ಎನ್ನಬಹುದು.

ಒಟ್ಟಿನಲ್ಲಿ ಕನ್ನಡ ಭಾಷೆಯ ವೈವಿಧ್ಯಮಯ ಶೈಲಿಗಳೆಲ್ಲವನ್ನು ಒಟ್ಟಿಗೆ ನೋಡಿ, ಓದಿ ಆಸ್ವಾದಿಸುವ ಸೌಭಾಗ್ಯ ನಿಮ್ಮದಾಗಿದೆ. ಸ್ಪರ್ಧೆಯ ಮೂಲ ಕತೆಯನ್ನು ಈ ಕೆಳಗೆ ನೀಡಿದೆ. ಒಟ್ಟನಲ್ಲಿ ಈ ಪ್ರಯೋಗ ನಮಗಂತೂ ತುಂಬಾ ಖುಷಿ ಕೊಟ್ಟಿತು. ನಿಮಗೂ ಅಷ್ಟೇ ಸಂತೋಷವಾಗಲಿ ಎಂಬುದೇ ನಮ್ಮ ಹಾರೈಕೆ.

## ಮೂಲ ಕಥೆ

ಬಹಳ ಹಿಂದಿನ ಕಾಲದಲ್ಲಿ ಒಮ್ಮೆ ಬಹಳ ಅನಾವೃಷ್ಟಿ ಉಂಟಾಯಿತು. ಕಾಡಿನಲ್ಲಿರುವ ಆನೆಗಳು ಬಾಯಾರಿಕೆಯಿಂದ ಜಲಾಶಯವನ್ನು ಹುಡುಕುತ್ತಾ ಚಂದ್ರ ಪುಷ್ಕರಣಿ ಎಂಬ ಸರೋವರದ ಬಳಿ ಬಂದು ಅಲ್ಲಿಯೇ ವಸತಿಯನ್ನು ಹೂಡಿದವು. ಸರೋವರದ ಬಳಿ ಒಂದು ಮೊಲಗಳ ಹಿಂಡು ವಾಸವಾಗಿದ್ದವು. ಅವುಗಳಲ್ಲಿ ಅನೇಕ ಮೊಲಗಳು ಈ ಆನೆಗಳ ಕಾಲ್ತುಳಿತಕ್ಕೆ ಸಿಕ್ಕಿ ನಾಶವಾದವು. "ಏನಪ್ಪಾ ಮಾಡೋದೂ? ದುರ್ದೆಶೆ ಬಂತಲ್ಲಾ" ಅಂತ ಎಲ್ಲ ಮೊಲಗಳೂ ಚಿಂತಾಕ್ರಾಂತರಾದಾಗ ಒಂದು ಕೆಂಚು ಕೂದಲಿನ ಮೊಲ "ನೀವೇನೂ ಯೋಚನೆ ಮಾಡಬೇಡಿ. ನಾನೆಲ್ಲಾ ನೋಡ್ಕೋತೇನೆ" ಅಂತ ಹೇಳಿತು.

ಒಂದು ಬೆಳದಿಂಗಳ ರಾತ್ರಿ ಆ ಕೆಂ.ಕೂ. ಮೊಲ ಸರೋವರದ ಬಳಿ ಇದ್ದ ಗುಡ್ಡದ ಶಿಖರವನ್ನೇರಿ ಆನೆಗಳಿಗೆ ಗಟ್ಟಿಯಾಗಿ ಕೂಗಿ ಹೇಳಿತು. "ಹೇ ಆನೆಗಳೇ, ಈ ಸರೋವರದ ಒಡೆಯನಾದ ಚಂದ್ರನು ಒಂದು ಎಚ್ಚರಿಕೆಯನ್ನು ನಿಮಗೆ ಕಳಿಸಿದ್ದಾನೆ. ನೀವುಗಳೆಲ್ಲಾ ಈ ಪುಷ್ಕರಣಿಯನ್ನು ಕಲುಷಿತಗೊಳಿಸಿದ್ದೀರಿ. ನೀವು ಈ ಸ್ಥಳವನ್ನು ಇಂದು ರಾತ್ರಿಯೇ ಬಿಟ್ಟು ಹೋಗದಿದ್ದರೆ, ನಿಮ್ಮೆಲ್ಲರನ್ನೂ ಕೊಂದು ಹಾಕುತ್ತಾನೆ. ಬೇಕಾದರೆ ಪುಷ್ಕರಣಿಯಲ್ಲಿ ನೋಡಿ ಚಂದ್ರನು ಕೋಪಾವಿಷ್ಠನಾಗಿ ಅಲುಗುತ್ತಿರುವುದು ಕಾಣುತ್ತದೆ." ಪುಷ್ಕರಣಿಯಲ್ಲಿನ ಚಂದ್ರನ ಬಿಂಬ, ತೆಳು ಮಾರುತದಿಂದಾದ ನೀರಿನ ಅಲೆಗಳ ದೆಸೆಯಿಂದ ಅಲುಗುತ್ತಿರುವುದನ್ನು ನೋಡಿ, ಆನೆಗಳು ಭಯದಿಂದ ಪಲಾಯನಗೈದವು.

ಮೊಲಗಳೆಲ್ಲಾ ಬಹು ಸಂತೋಷದಿಂದ ಕೆಂಚು ಕೂದಲ ಮಹಾರಾಜನಿಗೆ ಜಯವಾಗಲಿ ಎಂಬ ಕೂಗಿದವು. ಆ ಕೆಂ.ಕೂ. ಮೊಲ, ತನ್ನ ಸಂಗಡಿಗರನ್ನು ಕುರಿತು ಇಂದಿನಿಂದ ನೀವುಗಳೆಲ್ಲಾ ಪ್ರತಿದಿನ ಪ್ರತಿಯೊಬ್ಬರೂ ಒಂದೊಂದು ಮೂಲಂಗಿ ಯನ್ನು ತೆರಿಗೆ ಕೊಡಬೇಕು. ನಿಮ್ಮನ್ನು ಸುಭಿಕ್ಷವಾಗಿಟ್ಟಿರುವುದು ನನ್ನ ಜವಾಬ್ದಾರಿ ಎಂದು ಹೇಳಿತು. ಮೊಲಗಳಲ್ಲಾ ಸರಿ ಎಂದು ತಲೆದೂಗಿದವು. ಕ್ರಮೇಣ ಆ ಕೆಂ. ಕೂ. ಮೊಲ, ಮೂಲಂಗಿ ಮಹಾರಾಜ ಎಂಬ ಹೆಸರಿನಿಂದಲೇ ಖ್ಯಾತಿಯನ್ನು ಪಡೆಯಿತು.

ವಿಕಾಸವಾದದ ದೆಸೆಯಿಂದ ಮೊಲಗಳು ಮಾನವರಾದವು. ಕಾಡು ನಾಡಾಯಿತು. ಕೆಂಚು ಕೂದಲಿನ ಮಹಾರಾಜ ಮಾತ್ರ ಎಂದಿನಂತೆ ಕಂಡ ಕಂಡವರಿಂದ ತೆರಿಗೆಯನ್ನು ವಸೂಲು ಮಾಡುತ್ತಾ ಸುಖವಾಗಿದ್ದನು.

ನೀತಿ : ಕೆಂಚು ಕೂದಲುಳ್ಳವರಿಂದ ದೂರವಿರುವುದು ವಾಸಿ.

■

ಖ್ಯಾತ ವ್ಯಂಗ್ಯ ಚಿತ್ರಕಾರ ಶ್ರೀ ಅಶ್ವಥ್ ಅವರ ವ್ಯಂಗ್ಯ ಚಿತ್ರಗಳ ಪ್ರದರ್ಶನ ಇಂಡಿಯನ್ ಕಾರ್ಟೂನ್ ಗ್ಯಾಲರಿ, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು, ಈ ಸ್ಥಳದಲ್ಲಿ ಶನಿವಾರ ತಾ. 5.7.2025 ರಂದು ಬೆಳಗ್ಗೆ 11 ಗಂಟೆಗೆ ಪ್ರಾರಂಭವಾಗಲಿದೆ. ಅಪರಂಜಿಯ ಉಪಸಂಪಾದಕರಾದ ಶ್ರೀ ಬೇಲೂರು ರಾಮಮೂರ್ತಿಯವರು ಪ್ರದರ್ಶನದ ಉದ್ಘಾಟನೆ ಮಾಡಲಿದ್ದಾರೆ. ಸರ್ವರಿಗೂ ಆದರದ ಸ್ವಾಗತ.

# ಕೆಂಚುಗೂದಲ ಭರಮ

ಶಿವಕುಮಾರ್

**(ಪೂಜ್ಯ ಶಿವರಾಮ ಕಾರಂತರ ಶೈಲಿಯಲ್ಲಿ)**

ಆ ಗಜಪಡೆ ಸಂಚರಿಸುತ್ತಿದ್ದ ನಾಡು, ಸಂಚರಿಸುತ್ತಿದ್ದ ಸಮಯವಾದ ಬೇಸಗೆಯಷ್ಟೇ ದಯಾಶೂನ್ಯವಾಗಿತ್ತು. ಹಗಲು ನೆಲದ ಮೇಲೆ ಕಾಲು ಇರಿಸುವುದಕ್ಕಿಲ್ಲ. ತುಂಬ ಉರಿಬಿಸಿಲು. ಬಾನಲ್ಲಿ ತೂಗುಯ್ಯಾಲೆಗಳಂತೆ ತೂರಾಡುವ ಬೆಳ್ಮುಗಿಲುಗಳು ಗಾಳಿಯ ಸುಳಿದಾಟವಿಲ್ಲದೆ ಸೆಕೆ ಸೆಕೆ ಎಂಬ ಒಂದೇ ರಾಗ. ಈಗಾಗಲೇ ಮೊಳೆತ ಕೆಲವೊಂದು ಅಗೆಗಳ ಹಸುರು ಕಂದಿಹೋಗಿತ್ತು. ಈ ಬೇಸಿಗೆಯಲ್ಲಿ ಗಿಡಗಳಿಗೂ ದಣಿವು. ಅವುಗಳ ಆಸರೆ ಹೊಂದಿರುವ ಹಸು ಹಕ್ಕಿಗಳಿಗೂ ದಣಿವೇ. ನೀರಡಿಕೆಯಿಂದ, ದಣಿವಿನಿಂದ, ಹವೆಯ ತಾಪದಿಂದ ಆ ಗಜಪಡೆಯ ಕುಂಜರಗಳು ಬೆಂದಿದ್ದವು. ಪಡೆ ಎಂದೆನೇ. ಪಡೆಯೇನು ಬಂತು? ಸತ್ವ ಅಡಗಿದ ಹಸ್ತಿಗಳ ಗುಂಪು ಎನ್ನಬಹುದಷ್ಟೆ. ಅವುಗಳ ನಾಯಕಿ ಮಂಡೋದರಿ. ಆಕೆಯ ಕಣ್ಣುಗಳು ಬಹು ಚುರುಕು. ಆ ಬೆಂಗಾಡಿನಲ್ಲಿ ನಡೆಯುತ್ತಿದ್ದಾಗ ದೂರದ ದಿಗಂತದಲ್ಲಿ ಒಂದು ಬೆಳ್ಳಿಯ ರೇಕೊಂದು ಕಾಣಿಸಿತು.

"ಬನ್ನಿ, ಅಲ್ಲಿ ಒಂದು ಸರೋವರವು ಇರಲಿಕ್ಕುಂಟು. ಬಳಲಿದ ನಿಮಗೆಲ್ಲಾ ಸಾಂತ್ವನ ದೊರಕುವ ಸುಮಹೂರ್ತ ಸನ್ನಿಹಿತ" ಎಂದು ತನ್ನ ಸಮುದಾಯಕ್ಕೆ ಆಣತಿ ನೀಡಿದಾಕ್ಷಣ ಆ ಆನೆದಳ ಹಿಂಡು ನೀರಿನೆಡೆಗೆ ಧಾವಿಸಿದವು.

ಆ ಪುಷ್ಕರಣಿಯ ತೀರದ ಬದಿಯಲ್ಲಿ ಶಶಕಗಳ ಹಿಂಡೊಂದು ವಾಸವಾಗಿತ್ತು. ಬಿಳಿಯ ತುಪ್ಪಳವನ್ನು ಮೆರೆಸುತ್ತಿದ್ದ ಆ ಮೊಲಗಳ ಗುಂಪಿನಲ್ಲಿ ಉದಯರವಿಗೆ ಸಾಟಿಯಾದ ಹೊಂಬಣ್ಣದ ತುಪ್ಪಳದ, ಭರಮನೆಂಬ ಹೆಸರಿನ ಮೊಲವೊಂದು ಸೇರಿಕೊಂಡುಬಿಟ್ಟಿತ್ತು. ಈ ಮೊಲಕ್ಕೆ ತುಂಬ ಕೀಳರಿಮೆ. ತನ್ನ ಜೊತೆಗಾರ ಮೊಲಗಳೆಲ್ಲವೂ ತನ್ನ ವರ್ಣದ ದೆಸೆಯಿಂದ ತನ್ನನ್ನು ಪರಕೀಯನಂತೆ ಕಂಡು, ಮೇಲುನೋಟಕ್ಕೆ ಸಖರಂತೆ ವರ್ತಿಸಿದರೂ ಬೆನ್ನ ಹಿಂದೆ ಬಾಯಿತುಂಬಾ ಲೇವಡಿ ಮಾಡುತ್ತಿದ್ದುದು ಭರಮನಿಗೆ ನುಂಗಲಾರದ ತುತ್ತಾಗಿತ್ತು. ಹೇಗಾದರೂ ಮಾಡಿ ತಾನು ಇವರೆಲ್ಲರ ಮೆಚ್ಚುಗೆಯನ್ನು ಗಳಿಸಬೇಕೆಂಬ ಹಂಬಲ ಏಕತಾನದ ಶೃತಿಯಂತೆ ಭರಮನ ಮನದಂಗಳವನ್ನು ಆವರಿಸಿತ್ತು. ಆ ಆಶೆ ನೆರವೇರುವುದಕ್ಕೊಂದು ಅವಕಾಶ ಸಿಕ್ಕಿದ್ದು ಭರಮನ ಅದೃಷ್ಟವೋ ಅಥವಾ ಕಾಕತಾಳೀಯವೋ ಯಾರು ಬಲ್ಲರು.

ನೀರಿನೆಡೆಗೆ ಧಾವಿಸುತ್ತಿರುವ ಆನೆಗಳ ಹಠಾತ್ ಆಕ್ರಮಣ, ಮೊಲಗಳಿಗೆ ಸಿಡಿಲಿನಂತೆ ಎರಗಿತು. ಅನೇಕ ಮೊಲಗಳು ಕರಿಗಳ ಕಾಲ್ತುಳಿತಕ್ಕೆ ಸಿಕ್ಕಿ ಕೊನೆಯುಸಿರೆಳೆದವು. ಆ ಗಜಗಳೋ, ತಮ್ಮ ತೃಷೆ ತಣಿದ ಆನಂದದಲ್ಲಿ ಸುತ್ತಲಿನ ಪರಿಸರದ ಪರಿವೆಯೇ ಇಲ್ಲದೆ ತಮ್ಮ ಜಲಸಮಾರಾಧನೆಯಲ್ಲಿ ತಲ್ಲೀನವಾಗಿದ್ದವು. ಕೊನೆಗೆ ಮೊಲಗಳೆಲ್ಲಾ ಒಂದು ಕಡೆ ಒಟ್ಟುಗೂಡಿ, ಗೆಳೆಯ ಅಂಬಿಕಾತನಯ ದತ್ತ ಹೇಳುವಂತೆ, "ಮುಂದೇನಾ, ಸಖಿ ಮುಂದೇನಾ" ಎನ್ನುತ್ತಾ ಸಮಾಲೋಚನೆ ನಡೆಸಿದವು. ಭರಮನಿಗೆ ಇದೊಂದು ಸುವರ್ಣಾವಕಾಶ. ಆತ ತನ್ನ ಸಹಚರರ ಮುಂದೆ ತನ್ನ ಹಂಚಿಕೆಯನ್ನು ಮುಂದಿಡುವ ಉಮೇದು. ತಾನು ಆಕ್ರಮಣಕಾರರಿಂದ ಸ್ವಾತಂತ್ರ್ಯವನ್ನು ಪಡೆಯುವ ಮಾರ್ಗವನ್ನು ಬಲ್ಲೆನೆಂದು ಮತ್ತು ಯಾವ ಪುಷ್ಕರಣಿಯ ಸ್ವಾಮ್ಯದ ಬಗೆಯ ಅಂಜಿಕೆಯೂ ಅಗತ್ಯವಿಲ್ಲವೆಂದು ಹೇಳಿ ಅವರಿಗೆ ಧೈರ್ಯ ತುಂಬಿ ಹತ್ತಿರದ ಗುಡ್ಡವನ್ನೇರಿದ ಭರಮ.

ಅಂದು ಹುಣ್ಣಿಮೆಯ ಇರುಳು. ಆಗಸದಲ್ಲಿ ರಜನೀಶ ತನ್ನ ನಾವೆಯಲ್ಲಿ ತೇಲುತ್ತ ಸಾಗುತ್ತಿದ್ದ. ಭರಮ ಗಜಮಾತೆಯನ್ನು ಕುರಿತು ಪುಷ್ಕರಣಿಯು ಚಂದ್ರನಿಗೆ ಸೇರಿದ್ದೆಂದೂ, ಆನೆಗಳ ಅಟಾಟೋಪದಿಂದ ಆತ ಕನಲಿ ಕ್ರುದ್ಧನಾಗಿರುನೆಂದು ಹೇಳಿ ಸರೋವರವನ್ನು ನೋಡುವಂತೆ ಸೂಚಿಸಿದ. ಮಂಡೋದರಿಗೆ ಸರೋವರದಲ್ಲಿ ಚಂದ್ರಮನು ಕೋಪದಿಂದ ಅಲುಗುತ್ತಿರುವ ದೃಶ್ಯ ಕಣ್ಣಿಗೆ ಬಿತ್ತು. ಮುಂದಿನ ಕ್ಷಣ ಸದ್ದಿಲ್ಲದೆ ಹಸ್ತಿಗಳೆಲ್ಲಾ ಅಲ್ಲಿಂದ ಕಾಲ್ತೆಗೆದವು. ಮೊಲಗಳಿಗೆಲ್ಲಾ ಸಂತಸದ ವಸಂತಾಗಮನವಾದಂತಾಯಿತು. ತಮ್ಮ ಕೃತಜ್ಞತೆಯನ್ನು ಸೂಚಿಸುವ ಸಲುವಾಗಿ ಪ್ರತಿದಿನ ತಲಾ ಒಂದೊಂದು ಕೆಂಪು ಮೂಲಂಗಿಯನ್ನು ಭರಮನಿಗೆ ಬಳುವಳಿ ಕೊಡಲು ನಿಶ್ಚಯಿಸಿದವು. ಅಂದಿನಿಂದ 'ಮೂಲಂಗಿ ಮಹಾರಾಜ' ಎಂಬ ಬಿರುದು ಭರಮನದಾಯಿತು.

ಕಾಲ ಸರಿದು ಜಗತ್ತಿ ರಂಗಭೂಮಿಯಲ್ಲಿ ಮಾನವನ ಅಂಕುರವಾಯಿತು. ಬೆಂಗಾಡುಗಳಲ್ಲಿ ವಸತಿಗಳು ತಲೆಯೆತ್ತಿದವು. ಕೆಂಚುಕೂದಲ ಮೂಲಂಗಿ ಮಹಾರಾಜ ಮಾತ್ರ ಎಂದಿನಂತೆ ಕಂಡ ಕಂಡವರ ಮೇಲೆ ಇಷ್ಟಬಂದಷ್ಟು ಸುಂಕವನ್ನು ವಿಧಿಸಿ ಆನಂದಾನುಭವಿಯಾದನೆಂಬ ಪ್ರತೀತಿ. ■



'ಸದ್ಯಕ್ಕೆ ಸತ್ಯಾಗ್ರಹ ನಿಲ್ಲಿಸ್ಬೇಡೀಂದ್ರೆ, ಈ ತಿಂಗಳು ಪೂರ್ತಿ ಮಾಡ್ಬಿಡಿ. ಸ್ವಲ್ಪ ಹಣ ಉಳಿಸ್ಬಹುದು.'

ಸಚಿವರು ಆಸ್ತಿ ವಿವರ
ಘೋಷಿಸಬೇಕು
-ಎಸ್ ನಿಜಲಿಂಗಪ್ಪ




ನಮ್ಮ ಸಂಘದ ಅಧ್ಯಕ್ಷೆ, ಆ ಮಾಜಿ ಮಂತ್ರಿ ಹೆಂಡತಿ ಏನೋ ತುಂಬಾ ಇದೇಂತ ಹೊಡ್ಕೊತಾಳೆ. ಬೇಗ ನೀವು ಆಸ್ತಿ ಘೋಷಿಸಿ ಅವಳ ಜಂಭ ಅಡಗಿಸಬೇಕು..

# ಮೂಲಂಗಿ ಟ್ಯಾಕ್ಸ್

ಬೇಲೂರು ರಾಮಮೂರ್ತಿ

**(ಎಸ್.ಎಲ್. ಭೈರಪ್ಪ ಅವರಂತೆ)**

ಒಂದ್ಸಾರಿ ಏನಾಯ್ತಪ್ಪ ಅಂದ್ರೆ, ಮಳೆನೂ ಬರದೇ, ಬೆಳೆನೂ ಇಲ್ಲದೇ, ಅನಾವೃಷ್ಟಿ ಆಯ್ತು. ಪಾಪ! ಕಾಡಿನಲ್ಲಿರೋ ಆನೆಗಳು ನೀರು ಹುಡುಕ್ಕೊಂಡು ಹೊರಟ್ವು. ಅವು ಬಂದು ಸೇರಿದ್ದು ಪುಷ್ಕರಣಿ ಎನ್ನುವ ಸರೋವರಕ್ಕೆ. ಬಹಳಾ ವರ್ಷಗಳಿಂದ ಆ ಸರೋವರದ ಹತ್ತಿರಾನೇ ಒಂದಿಷ್ಟು ಮೊಲಗಳು ಮನೆ ಮಾಡಿಕೊಂಡಿದ್ದವು. ಆನೆಗಳು ಅಷ್ಟು ದೊಡ್ಡವು, ಮೊಲಗಳು ಇಷ್ಟು ಚಿಕ್ಕವು. ಹೀಗಾಗಿ ಆನೆಗಳು ಅಲ್ಲೆಲ್ಲಾ ಓಡಾಡುವಾಗ ಒಂದಿಷ್ಟು ಮೊಲಗಳು ಆನೆಗಳ ಕಾಲುತುಳಿತಕ್ಕೆ ಸಿಕ್ಕು ಸತ್ತುಹೋದವು. ಉಳಿದ ಮೊಲಗಳು ಈಗೇನಪ್ಪಾ ಮಾಡೋದು ಅಂತ ಇದ್ದಾಗ ಒಂದು ಕೆಂಚು ಕೂದಲಿನ ಮೊಲ, "ನೀವು ಗಾಬರಿ ಆಗಬೇಡಿ ನಾನು ಇದೀನಲ್ಲ ಏನಾದರೂ ಉಪಾಯ ಮಾಡ್ತೀನಿ" ಅಂತು.

ಆಮೇಲೆ ಒಂದು ಹುಣ್ಣಿಮೆ ರಾತ್ರಿ. ಅವತ್ತು ತುಂಬಾ ಚಂದ್ರನ ಬೆಳದಿಂಗಳಿತ್ತು. ಇದೇ ಸಮಯ ಅಂತ ಆ ಕೆಂಚು ಕೂದಲಿನ ಮೊಲ ಏನ್ ಮಾಡ್ತು ಅಂದ್ರೆ, ಒಂದ್ ಎತ್ತರದ ಗುಡ್ಡದ ಮೇಲೆ ಹೋಗಿ ಕೂತ್ಕೊಂಡು ಗಟ್ಟಿಯಾಗಿ, "ಏಯ್ ಆನೆಗಳೇ, ಚಂದ್ರ ಈ ಸರೋವರದ ಒಡೆಯ. ಅವನು ನಿಮಗೆಲ್ಲಾ ಒಂದು ಸಂದೇಶ ಕಳಿಸಿದ್ದಾನೆ. ಓದ್ತೀನಿ ಕೇಳಿ. ನೀವುಗಳೆಲ್ಲಾ ಸೇರಿ ಈ ಪುಷ್ಕರಣಿ ನೀರನ್ನು ಹಾಳು ಮಾಡಿದ್ದೀರಿ. ಅದಕ್ಕೇ ನೀವೆಲ್ಲಾ ಈ ರಾತ್ರಿಯೇ ಪುಷ್ಕರಣೀನ ಬಿಟ್ಟು ಹೋಗದಿದ್ದರೆ ನಿಮ್ಮನ್ನೆಲ್ಲಾ ಸಾಯಿಸಿಬಿಡ್ತೀನಿ ಅಂದಿದಾನೆ, ಬೇಕಾದರೆ ಪುಷ್ಕರಣೀಲಿ ನೋಡಿ ಚಂದ್ರ ಎಷ್ಟು ಕೋಪದಿಂದ ಅಲುಗಾಡುತ್ತಿದ್ದಾನೆ ಅಂತು" ಈ ಮಾತುಗಳನ್ನೇ ನಿಜ ಅಂದ್ಕೊಂಡ ಆನೆಗಳು ಸರೋವರದ ನೀರಿನಲ್ಲಿ ನೋಡಿದಾಗ ಅಲೆಗಳ ಪ್ರಭಾವದಿಂದ ಚಂದ್ರ ಅಲುಗಾಡುವಂತೆ ಕಾಣುತ್ತಿದ್ದ. ಇದನ್ನು ಕಂಡಿದ್ದೇ ತಡ, ಆನೆಗಳ ಹಿಂಡು ನಿಜವಾಗ್ಲೂ ಚಂದ್ರ ನಮ್ಮೇಲೆ ಕೋಪ ಮಾಡ್ಕೊಂಡಿದಾನೆ ಅಂದ್ಕೊಂಡು ಪುಷ್ಕರಣೀನ ಬಿಟ್ಟು ಹೊರಟೇಹೋದವು.

ಆನೆಗಳೆಲ್ಲಾ ಹೊರಟುಹೋದ ಮೇಲೆ ಮೊಲಗಳೆಲ್ಲಾ ಕುಣಿದು ಕುಪ್ಪಳಿಸಿ "ಕೆಂಚು ಕೂದಲ ಮಹಾರಾಜನಿಗೆ ಜಯವಾಗಲಿ" ಎಂದು ಕೂಗಿದವು. ಆಗ ಆ ಕೆಂಚು ಕೂದಲಿನ ಮೊಲ "ನೋಡ್ರಪ್ಪಾ ನಾನು ನಿಮಗೆಲ್ಲ ಸಹಾಯ ಮಾಡಿದೀನಿ. ಅದಕ್ಕೆ ನೀವುಗಳು ನನಗೆ ದಿನಾ ಒಂದೊಂದು ಮೂಲಂಗೀನ ತಂದುಕೊಡಬೇಕು. ನಿಮ್ಮನ್ನು ಹುಷಾರಾಗಿ ನೋಡ್ಕೊಳೋದು ನನ್ನ ಜವಾಬ್ದಾರಿ" ಅಂತು. ಅವತ್ತಿಂದ ಎಲ್ಲ ಮೊಲಗಳೂ ಸೇರಿ ದಿನಾ ಒಂದೊಂದು ಮೂಲಂಗೀನ ಕೆಂಚು ಕೂದಲಿನ ಮೊಲಕ್ಕೆ ಕೊಡುತ್ತಾ ಬಂದವು. ಅದಕ್ಕೇ ಆ ಮೊಲಕ್ಕೆ ಅವತ್ತಿಂದ 'ಕೆಂಚು ಕೂದಲಿನ ಮಹಾರಾಜ' ಅಂತ ಹೆಸರಾಯಿತು.

ಇಷ್ಟೆಲ್ಲಾ ಆದಮೇಲೆ ಬಹಳ ವರ್ಷಗಳೇ ಕಳೆದುಹೋಗಿವೆ. ವಿಕಾಸವಾದ ಬಂತಲ್ಲ, ಅದರ ಪ್ರಭಾವದಿಂದ ಮೊಲಗಳೆಲ್ಲ ಮನುಷ್ಯರಾದವು. ಮನುಷ್ಯ ಕಾಡನ್ನು ಕಡಿದು ನಾಡು ಮಾಡಿದ. ಅದರೆ ಕೆಂಚು ಕೂದಲಿನ ಮಹಾರಾಜ ಮಾತ್ರ ಮೊದಲಿನ ಹಾಗೆ ಕಂಡ ಕಂಡವರಿಂದ ಮೂಲಂಗೀನ... ಅಲ್ಲ... ತೆರಿಗೆಯನ್ನು ವಸೂಲು ಮಾಡಿಕೊಂಡು ಸುಖವಾಗಿದ್ದ.

ಈ ಕಥೆಯ ನೀತಿ ಏನು ಗೊತ್ತೇನು? ಕೆಂಚು ಕೂದಲು ಇರೋರಿಂದ ದೂರ ಇರೋದು ಒಳ್ಳೇದು

■

## ಕೆಂಚನ ವಿಸ್ಡಮ್ಮು

ಅಣಕು ರಾಮನಾಥ್

ತರಣಿ ತೂರದ ಕಾಡಿನೊಳಗೆ
ತರುಣರಿಗು ದುರ್ಗಮವೆ ಆಗಿಹ
ಧರೆಯ ಭಾಗದಿ ನಡೆದ ಕಥೆಯೊಂದನ್ನು ಪೇಳ್ವೆನು ಕೇಳಿರಿ
ಸ್ವಾರ್ಥವೇ ಸರ್ವೋಚ್ಚವೆಂದ ರೆಡ್ಡು ಖರಗೋಶ್ ಕಥೆಯಿದು ।

ದಟ್ಟ ಕಾನನ ಕೇಂದ್ರದೆಡೆಯಲಿ
ಪುಟ್ಟ ಪುಷ್ಕರಣಿಯದು ಹೊಳೆಯುತ
ಒಟ್ಟು ಕಾಡಿನ ಸೊಬಗ ತನ್ನೊಳು ಬಿಂಬಿಸುತ್ತಲಿ ಇರ್ದುದು ।
ಅಟ್ಟಹಾಸದ ಲಯನು ಟೈಗ್ರಿಗು
ಬಿಟ್ಟ ಕೂಳನು ತಿಂಬ ಫಾಕ್ಸಿಗು
ಲೀಟರ್ ಗಟ್ಟಲೆ ನೀರು ಕುಡಿಯಲು ಇದುವೆ ಆಸರೆಯಾಯಿತು ।

ಕಳೆಯುತಿರೆ ಸಮೃದ್ಧ ದಿನಗಳು
ಇಳೆಯು ಪಚ್ಚೆಯ ಹೊದಿಕೆಯೊಳಿರಲು
ಕಳೆದುಕೊಳ್ಳಲು ವರುಣ ತನ್ನಯ ಮಳೆಯ ಸುರಿಸುವ ಪವರನು ।
ಇಳಿದುಹೋಯಿತು ಮರಗಳಿಳುವರಿ
ಕಳೆದುಹೋಯಿತು ವನದ ಐಸಿರಿ
ಜಲವು ಪುಷ್ಕರಣಿಯನು ಬಿಟ್ಟರೆ ಎಲ್ಲೆಡೆಯು ಬರಿದಾಯಿತು ।

ಕೊಳದ ಬಳಿ ವಾಸಿಸುವ ಮೊಲಗಳ
ಕುಲದ ನಾಯಕ ಗುಂಪ ಕುರಿತು
ಬಳಕೆ ಮಿತಿಯೊಳು ಇರಲಿ ಎನ್ನಲು ಅಂತೆ ಬಾಳಿರೆ ಮೊಲಗಳು ।
ಝಳವ ತಾಳದೆ ನೀರುಗಾಣದೆ
ಜಳಕವಿಲ್ಲದ ಕೊಳಕು ವಪುವೊಳು
ದಾಳಿಯಿಟ್ಟಿರೆ ಘಟೆಯ ತುಳಿತಕೆ ಗತಿಸಿದವು ಕೆಲ ಶಶಗಳು ।

ಟ್ರಂಪೆಟುವ ಇಭ ಶುಂಡಸೆಳೆತಕೆ
ಸ್ಲಂಪು ಆಗಿರೆ ಜಲದ ಮಟ್ಟವು
ಸಿಂಪ್ಲಿ ಆಫುಲ್ ಲೈಫು ಎನ್ನುತ ಫ್ಲಫಲು ಘುಲ್ಲು ಕೊರಗಿರೆ ।

ಟ್ರಂಪು ಬಣ್ಣದ ಕೇಶರಾಶಿಯ
ಪ್ಲಂಪು ಮೊಲವದು ತಲೆಯನೆತ್ತುತ
ಕ್ಯಾಂಪು ಬಿಡದಿರಿ ಕರಿಯ ವಿಷಯವ ನಾ ನಿಭಾಯ್ಸುವೆನೆಂದಿತು ।

ಪೂರ್ಣ ಚಂದಿರ ನಭದಿ ಮೂಡಿರೆ
ಜಾಣ ಕೆಂಗೂದಲಿನ ಮೊಲವು
ಬಾಣವೇಗದಿ ಆನೆಗುಂಪನು ತಲುಪಿ ಇಂತೆಂದೆಂದಿತು ।
ಕಾಣಬನ್ನಿರಿ ಕೊಳದ ಒಡೆಯನ
ಘೂರ್ಣಿಸುತಿಹನು ಕ್ರೋಧದಿಂದಲಿ
ವಾರ್ನು ಮಾಡಲು ಕರೆಯುತಿರ್ಪನು ತೊಲಗಿ ಇಲ್ಲಿಂದೆನುವನು ।

ಗುಂಪ ನಾಯಕ ಸಲಗ ಅಲೆಯಲಿ
ಕಂಪಿಸುವ ಚಂದಿರನ ಕಂಡನು
ರಂಪವೆಬ್ಬಿಸಿ ಅಟ್ಟಹಾಸದಿ 'ರಿಫ್ಲೆಕ್ಷನ್ ಇದು' ಎಂದನು ।
ಕೆಂಪುಗೂದಲ ಮೊಲದುಪಾಯಕೆ
ಸ್ಟ್ಯಾಂಪ್ ಆಫ್ ಅಪ್ರೂವಲ್ಲೆ ಸಿಕ್ಕದೆ
ಕ್ರಂಪಲಾಯಿತು ಚಿಂತೆಯಿಂದಲಿ ಮುಂದೆ ದಾರಿಯ ಕಾಣದೆ ।

ಥಟ್ಟನೆದ್ದಿತು ಹೊಸ ಉಪಾಯದಿ
ನೆಟ್ಟಗೇರಿತು ಕರಿಯ ಕಿವಿ ಬಳಿ
ಘಟ್ಟಿ ಧ್ವನಿಯಲಿ ಇಂತು ಪೇಳಿತು 'ಲಕ್ಷ್ಯದಿಂ ನೀನಾಲಿಸೈ.'
ಹುಟ್ಟಿಹುದು ವನದಲ್ಲೆಲೆಕ್ಷನ್
ಹುಟ್ಟಿಹವು ಬಲು ಮೊಲಗಳಿಲ್ಲಿ
ಬಿಟ್ಟು ಗೆಲ್ಲಲು ಸಾಧ್ಯವೇ ನೀ ಇಂಥ ವೋಟಿನ ಬ್ಯಾಂಕನು?

ಕೆಂಚುಕೇಶಿಯ ಮಾತ ಕೇಳಿ
ಸಂಚು ಹೂಡಲು ಸಲಗ ಒಪ್ಪಿ
ಮಿಂಚು ಸುಳಿಯುವ ಕ್ಷಣದಿ ತಾಣವ ಖಾಲಿ ಮಾಡಿತು ಮುದದಲಿ ।
ಕ್ರಂಚು ಸೆಚುಯೇಷನ್ ನಿಭಾಯ್ಸಿದ
ಕೆಂಚಗೀಯಲು ನಿತ್ಯ ಕ್ಯಾರೆಟ್
ಮಂಚುತಲಿ ಸಂತೋಷದಿಂದಲಿ ಕೆಂಚ ರಾಜನು ಆದನು ।
ಸ್ವಾರ್ಥವೇ ಸರ್ವೋಚ್ಚವೆಂದ ರೆಡ್ಡು ಖರಗೋಶ್ ಕಥೆಯಿದು । ■

# ಬರ್ಕಿ ಮೊಲಾ

**ವಿಲಾಸ ನಾ ಹುದ್ದಾರ**

(ಮಾನ್ಯ ಶ್ರೀ ಶ್ರೀನಿವಾಸ ವೈದ್ಯ ಅವರ ಬರಿಯೋ ಧಾಟಿಯೊಳಗ ಬರೀಲಿಕ್ಕೆ ಪ್ರಯತ್ನ ಮಾಡೇನಿ....)

ಭಾಳ ಹಿಂದಿನ ಕಾಲ್ದಾಗ ಒಮ್ಮೆ ಬರಾ ಬಿತ್ತು. ಕಾಡಿನೊಳಗಿದ್ದ ಆನೀಗಳೆಲ್ಲಾ ನೀರಡಿಕೆಯಿಂದ ಕಂಗಾಲಾಗಿ ನೀರ ಸಿಗೋ ಜಗಾ ಹುಡಕ್ಯಾಡಕೋತ ಪುಷ್ಕರಣಿ ಅನ್ನೋ ಕೆರಿ ಹತ್ರ ಬಂದು ಅಲ್ಲೇ ಠಿಕಾಣಿ ಹೂಡಿದ್ವು.

ಆ ಕೆರಿ ಹತ್ರ ಮೊದ್ಲಿನಿಂದ ಮೊಲಗಳದ ಒಂದ ಗುಂಪು ಇರ್ಲಿಕತ್ತಿತ್ತು. ಈ ಆನೀಗಳೆಲ್ಲಾ ಅಲ್ಲೆ ಹೋದ ಕೂಡಲೇ ಆನೀ ಕಾಲ ತಳಗ ಸಿಕ್ಕು ಎಷ್ಟೋ ಮೊಲಾ ಸತ್ತ ಹೋದ್ವು. "ಏನಪಾ ಮಾಡೋದು ಈಗ? ಎಂಥಾ ಕೆಟ್ಟ ಘಳಿಗ್ಯಾಗ ಈ ಆನೀಗಳು ಇಲ್ಲಿ ವಕ್ರಿಸಿದ್ವು?" ಅಂತ ಅನ್ಕೋತ ಎಲ್ಲಾ ಮೊಲಗಳು ಚಿಂತಿ ಮಾಡ್ಕೋತ ಕೂತಾಗ, ಅವರೊಳಗಿನ ಒಂದ ಕೆಂಪ ಕೂದ್ಲದ ಮೊಲಾ , "ಏ, ಯಾಕ ಚಿಂತಿ ಮಾಡ್ತೀರೀ. ನಾ ಎಲ್ಲಾ ಬರೋಬರೀ ಮಾಡ್ತೇನಿ." ಅಂತ ಹೇಳ್ತು.

ಒಂದ ಬೆಳದಿಂಗಳದ ರಾತ್ರಿ ಆ ಕೆಂಪ ಕೂದ್ಲಿನ ಮೊಲಾ ಕೆರಿ ಹತ್ರ ಇದ್ದ ಗುಡ್ಡದ ತುಟ್ಟ ತುದಿ ಏರಿ, ಜೋರಾಗಿ ಒದರಿತು, "ಏ ಆನೀಗಳ, ಕೇಳ್ರಿಲ್ಲೆ. ಈ ಕೆರಿ ಯಜಮಾನ ಚಂದಪ್ಪಾ ಇದ್ದಾನಲ್ಲಾ ನಿಮಗ ಒಂದ ಚೇತಾವಣಿ ಕಳಿಸ್ಯಾನ. ಏನಪಾ ಅಂದ್ರ, ನೀವೆಲ್ಲಾ ಕೂಡಿ ಕೆರಿ ನೀರನ್ನ ಹಾಳಮಾಡ್ಲಿಕ್ಕೆ ಹತ್ತೀರಿ. ಹೊಲಸ ರಮರಾಡಿ ಮಾಡೀರೀ. ಅದಕ್ಕ ನೀವೆಲ್ಲಾ ಈಗಿಂದ ಈಗ್ಲೆ, ಈ ರಾತ್ರೀನ ನೀವ ಇಲ್ಲಿಂದ ಹೋಗ್ಲಿಲ್ಲಾಂದ್ರ ನಿಮ್ಮನ್ನೆಲ್ಲಾ ಕೊಂದ ಹಾಕ್ತಾನಂತ. ನಾ ಏನ ಸುಳ್ಳ ಹೇಳಲಿಕತ್ತಿಲ್ಲಾ. ಬೇಕಾದ್ರ ಕೆರಿ ಒಳಗ ಹೋಗಿ ನೋಡ್ರಿ, ಚಂದಪ್ಪಾ ಹೆಂಗ ಸಿಟ್ಟಿನಿಂದ ನಡಗಲಿಕ್ಕತ್ತಾನಂತ."

ಕೆರಿ ನೀರು ಸಾವಕಾಶ ಬೀಸತಿದ್ದ ಗಾಳಿಗೆ ಅಲಗಾಡಲಿಕ್ಕತ್ತಿತ್ತು. ಅದರಿಂದ ಚಂದಪ್ಪನ ನೀರಿನಾಗ ಬಿದ್ದ ಪ್ರತಿಬಿಂಬನೂ ಅಲಗಾಡಿದ್ಹಂಗ ಕಾಣಸ್ತಿತ್ತು. ಅದನ್ನ ನೋಡಿ ಆನಿಗಳಿಗೆ ಹೆದ್ರಿಕಿ ಆಗಿ ಅಲ್ಲಿಂದ ಕಾಲ್ಕಿತ್ತಿದ್ವು. ಮೊಲಾ ಎಲ್ಲಾ ಖುಷಿಯಿಂದ ಕೆಂಪು ಕೂದ್ಲಿನ ಮೊಲಕ್ಕ ಜಯವಾಗಲಿ ಅಂತ ಒದರಿದ್ವು. ಆಗ ಕೆಂಪು ಕೂದಲಿನ ಮೊಲಾ ಉಳಿದ ಮೊಲಗೋಳಿಗೆಲ್ಲಾ ಪ್ರತಿ ದಿನಾ ಪ್ರತಿಯೊಂದು ಮೊಲಾ ಒಂದೊಂದು ಮೂಲಂಗಿ ತೆರಿಗಿ ಅಂತ ಕೊಡಬೇಕು ಅಂತ ಹೇಳಿ ನಿಮ್ಮನ್ನೆಲ್ಲಾ ಸುಖದಿಂದ, ಸಮೃದ್ಧಿಯಿಂದ ಇಡೋದು ನನ್ನ ಜವಾಬ್ದಾರಿ ಅಂತ ಹೇಳ್ತು. ಎಲ್ಲಾ ಮೊಲಾ ಹೂಂಗುಟ್ಟಿದ್ವು. ಕಾಲ ಕಳದ್ಹಂಗ ಆ ಕೆಂಪ ಕೂದ್ಲಿನ ಮೊಲಾ 'ಮೂಲಂಗಿ ಮಹಾರಾಜ' ಅಂತ ಹೆಸರ ಘಳಿಸ್ತು.

ವಿಕಾಸವಾದ ಆದದ್ದಕ್ಕ ಮೊಲಾ ಎಲ್ಲಾ ಮನುಷ್ಯಾರ ಆದ್ರು, ಕಾಡ ಇದ್ದದ್ದು ನಾಡ ಆತು. ಆದ್ರ ಕೆಂಪ ಕೂದ್ಲಿನ ಮೊಲಾ ಮಾತ್ರ ಎಲ್ಲಾರ ಕಡೀಂದ ತೆರಿಗಿ ವಸೂಲ ಮಾಡಿ ಮಸ್ತ ಮಜಾ ಮಾಡ್ಕೋತ ಇರ್ಲಿಕತ್ತು.

............................ ಶ್ರೀ ಕೃಷ್ಣಾರ್ಪಣಮಸ್ತು ..............................

■

# ತಾವರೆಕೆರೆ

ಬಿ.ಎಸ್. ಶೈಲಜಾ

**(ಟಿ.ಪಿ ಕೈಲಾಸಂ ಅವರ ದಾಟಿಯಲ್ಲಿ)**

ತಾವರೆಕೆರೆ ಅಂಬೋ ಕೆರೆ ಇನ್ನೂ ಇದೆ. ಅಲ್ಲೊಂದು ಬೀದಿ. ಇದ್ದೇ ಇರ್ಬೇಕಲ್ಲಾ ಬೀದಿ ಅಂದ್ಮೇಲೆ ಗಾಡಿಗ್ಳು; ತಳ್ಳೋ ಗಾಡಿಗ್ಳು. ಭಾರೀ ವ್ಯಾಪಾರ ಅವರದ್ದು. 'ಜಿಪೇ' ಬಂದ್ಮೇಲೇ ಗೊತ್ತಾಗಿದ್ದು ಅವರ ಬಂಡ್ವಾಳ ಎಷ್ಟೊಂತ, ಅದ್ಹಾಗಿರ್ಲಿ. ತಮ್ಮ ಶಂಖ 'ನೂರ್ರುಪಾಯ್ಗೆ ಮೂರು' ಅಂತ ಕಿರ್ಲೋದನ್ನ ನಮ್ಗೆ ಟೇಪ್ರೆಕಾರ್ಡರ್ ಮೂಲ್ಕ ತಲುಪ್ಸಿ ತಾವ್ಮಾತ್ರಾ ಮೊಬೈಲು ಕಿವಿಗೇ ಸಿಕ್ಕಿಸಿಕೊಂಡು ಆನಂದ ಪಡೋ ಈ ಪಡೆ, ರಸ್ತೇಲೇ ತಂ ಜೋಬು ತುಂಬಿಸ್ಕೊಳ್ತಾ ಇದ್ರೂ. ಅದ್ಯಾವನೋ ಕೆಂಚ ಬಂದ್ತಕ್ಷಣ ಜೋಬು ಮುಟ್ಟಿಮುಟ್ಟಿ ನೋಡ್ಕೋತಾರೆ; ಗುಟ್ಟುಗ್ಟಾಗಿ ನೋಟ್ಗಳನ್ನ ಆ ಕಡೆಯಿಂದ ಈ ಕಡೆಗೆ ರವಾನಿಸ್ಕೊಂಡು ಅವನ್ನೇ ನೋಡ್ತಾ ನಿಂತ್ಕೋತಾರೆ. ಕೆಂಚ ಬರ್ದಿದ್ರೂನೂ ಅವ್ನ ಕಡೆಯೋರು ಬಂದ್ರೂ ಸಾಕು. ಅವ್ನೋ ನಾಚ್ಕೆಗೀಚ್ಕೆ ಇಲ್ದೆ ಕೈಚಾಚಿ ಇವ್ರ ಕೈಯಿಂದ ನೋಟುಗಳ್ನ ಬಾಚ್ಕೊಳ್ಳೋದಲ್ದೆ, ತನ್ನುಷಿ ಬಂದ್ಹಾಗೆ ಗಾಡಿಮೇಲಿರೋ ಸಾಮಾನ್ಗಳ್ನೂ ಎಳ್ಕೊತಾನೆ. ಇದ್ನೆಲ್ಲಾನಾನೂ ನೋಡ್ತಾನೇ ಇದೀನಿ. ಇದ್ಯಾಕೆ? ಈ ಕೆಂಚ ಯಾವನು? ಅಂತ ನಂ ತಲೇವಳ್ಗೆ ಹುಳಬಿದ್ದು ಭಾಳ ದಿನ ಆಗಿದ್ರೂ, ಉತ್ರ ಸಿಕ್ಕಿದ್ದು ನಿನ್ನೆ. ಅಲ್ಲಿ ಕೆರೆಕಟ್ಟೆ ಮೇಲೆ ಕಳ್ಳೆಕಾಯಿ ಮಾರ್ತಾ ಕೂತಿದಾನಲ್ಲ ಆ ಮುದ್ಕ ಅವನನ್ನೇ ಕೇಳ್ದೆ. ಅವನ್ಗೆ ಕೈತುಂಬಾ ದುಡ್ಡಿಲ್ದಿದ್ರೂ, ಬಾಯ್ತುಂಬಾ ಮಾತ್ಗೇನೂ ಕೊರ್ತೆ ಇಲ್ಲ. ನಾನು ಕೇಳಿದ್ದೇ ತಡ 'ಖೆಖೆ' ಅಂತ ಮೂರ್ಸಲಿ ಅದೇನು ಕೆಮ್ಮಿದ್ನೋ, ನಕ್ಕಿದ್ನೋ–ಇರ್ಲಿ, ಕತೆ ಶುರು ಮಾಡ್ದ.

ಕಳ್ಳೆಕಾಯಿ ಮುದ್ಕ ಹೇಳಿದ ಕತೆ ಈ ಕತೆ ಹಳೇದು ಭಾಳ ಹಳೇದು– ರಾಜಮಾರಾಜರುಗೋಳು ಇದ್ರಲ್ಲಾ– ಯಾವ ರಾಜ ಅಂತಲ್ಲ ನಿಮಿಗೆ ಯಾವ ರಾಜ ಗೊತ್ತೋ ಅವ್ನಿಗಿಂತ ಹಳೇದು. ನಂಗೆ ಗೆಪ್ತಿ ಇರೂಹಂಗೆ ಆಗ ರಾಜರು ಇರ್ಲಿ, ಮನಷರೇ ಇರ್ಲಿಲ್ವಂತೆ. ಇದ್ದೋವೆಲ್ಲ ಪ್ರಾಣಿಗ್ಳೇಯ. ಆನೆಗ್ಳು, ಹುಲಿಗ್ಳು, ನವಿಲ್ಗೋಳು... ಇರ್ಲಿ. ಸದ್ಯಕ್ಕೆ ನಮ್ಗೆ ಬೇಕಾಗಿದ್ದು ಆನೆ ಮಂತೆ ಮೊಲ ಮಾತ್ರ. ಎಲ್ಲಾವ್ರೂ ಆರಾಮಾಗಿ ಇದ್ವು. ಅಂದ್ರೆ ಒಬ್ರ ತಂಟೇಗೆ ಇನ್ನೊಬ್ರು ಬರಾಣಿಲ್ಲ. ಅದ್ಹಂಗೇ ಇದ್ದದ್ರೆ ಕತೆ ಎಲ್ಲಿರ್ತಿತ್ತು. ಏನಾದ್ರೂ ಆಗ್ಬೇಕಲ್ಲ. ಬಂತಪ್ಪಾ ಬರ್ಗಾಲ. ಮಣ್ಣೆತಮಾವಾಸೆ ಬಂತೋ ಓಯ್ತೋ, ನೂಲುಣ್ಣಿಮೆ ಬಂತೋ ಓಯ್ತೋ, ಬೆನಕಪ್ಪ ಬಂದೋದ, ಆದ್ರೆ ಮೋಡ ಮಾತ್ರ ಮುನಸ್ಕಂತು, ಬರ್ನೇ ಇಲ್ಲಾ, ಮಳೆ ಸುರೀಲೇ ಇಲ್ಲಾ. ಈ ಕೆರೆ ಇದೊಂದೇನೂ, ಎಲ್ಲಾ ಕೆರೆಗ್ಳೂ – ಕೊಚ್ಚೆಗುಂಡಿಗಳಾದ್ವು. ನೀರು ಒಣಗ್ತಾ ಒಣಗ್ತಾ ಬಂದಂಗೆ ಈ ಮೊಲಗೋಳೆಲ್ಲಾ ಅದರ ದಡಕ್ಕೇ ಒತ್ರಿಸ್ಕೊಂಡು ಒತ್ರಿಸ್ಕೊಂಡು ಮನೆ ಮಾಡ್ಕೊಂಡೋ. ನೀರ್ಗೆ ಅಂತ ಓಡೋಡಿ ಬರೋದೇ ತಪ್ತು. ಆದ್ರೆ ನೀರಂತೂ ಎಲ್ರಿಗೂ ಬೇಕೇಬೇಕಲ್ಲ. ಜಿಂಕೆಗ್ಳೂ, ಕಪಿಗ್ಳೂ ಹುಲಿಗ್ಳೂ ಎಲ್ಲಾವ್ರೂ ಇಲ್ಲೇ ಬರಾಕೆ ಶುರು ಹಚ್ಕೊಂಡೋ. ಅವು ಬರ್ತಿದ್ದಂಗೇ ಮೊಲ್ಗಳು ಜಿಗ್ದು ದಾರಿ ಬಿಡೋವು. ಆದ್ರೆ ಆನೆಗ್ಳು ಬಂದಾಗ ಮಾತ್ರ ಲೆಕ್ಕ ತಪ್ಪೋಯ್ತು. ಅವು ಸಣ್ಣ ಮರಿಗಳ್ನ ಚಟ್ನಿ ಮಾಡ್ಬುಟ್ಟೋ. ಮೊದಲ್ಸಲ ಇಬ್ಬರು ಅಮ್ಮಂದ್ರು ಗೊಳೋ ಅಂಬ್ತ ಅತ್ರು. ಎರಡ್ನೇ ದಿನಾನೂ ಅದೇ ಕತೆ. ಇನ್ನೆರಡೂ ಅಮ್ಮಗಳೂ ಗೊಳೋ ಅಂತ ರಾಗ ಎಳೆದ್ವು. ಮೂರ್ನೇ ದಿನ ಆನೆಗ್ಳು ಬರ್ತಿದ್ದಂಗೇ ಸತ್ನೋ ಬದುಕಿದ್ನೋ ಅಂತ ಓಡೋದ್ರೂ ಕೂಡ, ಇನ್ನೆರಡು–ದೊಡ್ಡೋವೆ ಚಟ್ನಿ ಆಗೋದ್ವು. ಆಗ್ಲೇ ಎಲ್ಲಾ ಅಜ್ಜಂದ್ರೂ, ಅಜ್ಜಿಗ್ಳೂ ಕೂತು ಪಂಚಾತಿ ಮಾಡುದ್ರು. 'ಈ ಆನೆಗ್ಳು ಒಂಜಿನ ಈಕಡೆ ಬರ್ತವೆ; ಇನ್ನೊಂಜಿನ ಆ ಕಡೆ ಬರ್ತವೆ. ಅದೂ ಹಿಂಡು ಹಿಂಡೇ ಬರ್ತವೆ. ನೀರೂ ನೀರೂ

ಅಂತ ಬೊಬ್ಬೆ ಹೊಡ್ಕೊಂಡೇ ಬರ್ವಾಗ ನಮ್ಕಡೇ ನಿಗಾ ಇಲ್ಲ. ದಿನಾದಿನಾ ನಮ್ಮಕ್ಳುಮರಿ ಸಾಯ್ತಾವೆ. ಇದ್ಕೆನಾದ್ರೂ ಉಪಾಯ ಮಾಡ್ಕಬೇಕು' ಅಂತ ಒಬ್ನಂದ್ರೆ, ಇನ್ನೊಬ್ಬ 'ಬರ್ಗಾಲ ಬಂದದೆ; ನೀರ್ಕುಡಿಯಕ್ಕೆ ಬರ್ಬೇಡ ಅಂತ ಯೇಳಾಕಾಯ್ತದಾ?' ಅಂದ. ನಮ್ಮಕ್ಕಳ ಜೀವ ಹೆಂಗಾರ ಉಳಸ್ಬೇಕು ಅಂತ ಎಲ್ರೂ ಗಟ್ಟಾಗೇ ಕೂಗಾಡಿದ್ರು. ಆದ್ರೆ ಏನ್ಮಾಡೋದಂತ ಯಾರ್ಗೂ ತಿಳಿವಲ್ದು.

ಕೊನೆಗೆದ್ದ ಒಬ್ಬ ಕೆಂಚಣ್ಣ. ಅವ್ನ ಮೈಮೇಲೆ ಬಿಳಿ ಕಮ್ಮಿ; ಕಪ್ಪಂತೂ ಇಲ್ವೇ ಇಲ್ಲ. ಅದ್ಕೇ ಆ ಹೆಸ್ರು. 'ನಾನೊಂದು ಕೈ ನೋಡ್ತೀನಿ' ಅಂದ. ಸಂಜೆಗೆ ಆನೆಗ್ಳು ಬಂದಂಗೇ ಇವ್ನು ಅಡ್ಡ ನಿಂತ್ಕೊಂಡ. 'ಬೇಕಾಬಿಟ್ಟಿ ನುಗ್ತೀರಿ. ನಮ್ಮಕ್ಕಳುಮರೀನಾ ಕೊಂದ್ಹಾಕ್ತಾ ಇದ್ದೀರಿ. ನಂ ರಾಜಾ ಮುನಿಸ್ಕಂಡವ್ನೆ. ಸಿಟ್ಟಿಂದ ತಕತಕ ಅಂತ ಕುಣಿದಾಡ್ತಾ ಅವ್ನೆ. ಮುಂದಕ್ಕೆ ಬರ್ಬೇಡ್ರಿ, ನೀರು ಮುಟ್ಬೇಡ್ರಿ' ಅಂದ. ದೊಡ್ಡಾನೆ ಪಕಪಕಾ ಅಂಬ್ತ ನಕ್ಕುಬಿಡ್ತು. 'ಯಾವನೋ ನಿಂ ರಾಜಾ? ನಮ್ಗೆ ಅಡ್ಡ ಬರ್ತೀಯಾ? ಬರ್ತೀಯಾ? ಬರ್ತೀಯಾ?' ಅಂತ ಕೂಗ್ತಾ ಇದ್ದದ್ದು ಕೆಂಚನ ಕೈ ತೋರ್ಸಿದ್ದನ್ನ ನೋಡಿ ಮೆತ್ಗಾತು. ಕೆರೆವಳ್ಗೆ ಚಂದ್ರ ತಕತಕ ಅಂತ ಕುಣಿತಿದ್ದ. 'ಎಲಾ, ಈ ರಾಜಾ ಆಕಾಸ್ದಿಂದ ಕೆಳಗೇ ಬಂದುಟ್ನಲ್ಲಪೋ. ಏನು ಸಿಕ್ಸೆ ಕೊಡ್ತಾನೋ' ಅಂತ ಹೆಜ್ಜೆ ಹಿಂದಕ್ಕಿಟ್ಟೊ. ನೀರೂ ನೀರೂ ಅಂಬ್ತಾ ಬೊಬ್ಬೆ ಹೊಡೀತಿದ್ದ ಮರಿಗ್ಳೂ ಗಪ್ಚಿಪ್. ಈಗ ಕೆಂಚ ಗೆದ್ದ. ಮತ್ಗೆ ಅಂದ–'ನಿಮಿಗೆ ನೀರಿಲ್ದಂಗೆ ಮಾಡಲ್ಲ; ಬರ್ರಿ ಇತ್ಲಾಗೆ' ಅಂತ ಕೆಸರ್ಗೆ ಕರ್ಕೊಂಡೋದ. 'ಇಕಾ ಇಲ್ಲಿ ಒಂದಪ ಕಾಲಲ್ಲಿ ಗುದ್ರಿ' ಅಂದ. ದೊಡ್ಡಾನೆ ಗುದ್ದಿದ್ದೇ ಒಂದೊಡ್ಡ ಗುಂಡಿ ಬಿತ್ತು. ಬುಳಕ್ ಬುಳಕ್ ಅಂತ ನೀರು ತುಂಬ್ಕಂಣ್ತು. 'ಈಗ ಕುಡ್ಕಳಿ; ಸದ್ದುಗದ್ಲ ಮಾಡ್ದೇ ಒಂಟೋಯ್ತಿರಿ' ಅಂದ. ಕೆರೇವಳ್ಗೆ ಇಳೀದೇನೇ ಈ ಗುಂಡಿಯಿಂದ ನೀರು ಕುಡ್ಕೊಂಡು ಆನೆಗ್ಳು ಒಂಟೋದ್ವು.

ಅಜ್ಜಗ್ಳು ಅಪ್ಪಗ್ಳು ಅಮ್ಮಗ್ಳು ದಂಗು ಬಡದೋದ್ರು. 'ಎಲಾ ಇವ್ನ' ಅಂತ ಒಂದಿನಾಮು – ಅದೇ ಮುಚ್ಚಿಟ್ಕೊಂಡಿದ್ಮೂಲಂಗಿ – ತಂದ್ಕೊಟ್ರು. ಒಬ್ಬೊಬ್ರೂ ಒಂದೊಂದು. ಅಂಗೇ ಕಣಪ್ಪಾ ಸುರು ಆದದ್ದು. ದಿನಾ ಎಲ್ರೂ ಒಂದೊಂದು ಮೂಲಂಗಿ ಕೊಡ್ಬೇಕಂತ ತಾಕೀತು ಮಾಡ್ದ ಈ ಕೆಂಚ. ಸರಿ ಕಾಣಪ್ಪಾ ಅಂತ ಎಲ್ರೂ ಕೊಟ್ರು. ಕೂತ್ಕಡೇ ದಿನಾ ಮೂಲಂಗಿ ಬಂದ್ಬೀಳ್ತದೆ. ಕೆಲ್ಸಿಲ್ಲ ಬೊಗ್ಸಿಲ್ಲ. ಅವ್ನ ಮಕ್ಳೂ ಅದೇ ಶುರು ಹಚ್ಕಂಡ್ರು. ಮೊಮ್ಮೊಕ್ಳು, ಮರಿಮಕ್ಳು, ಎಲ್ರೂ ...ಅದೇ ನಡ್ಕಂಬಂದದೇ ಇಲ್ಲೀವರ್ಗೂ..."

'ಅಯ್ಯೋ ಹೋಗಜ್ಜ, ಆ ಮೊಲಗ್ಳು ಎಲ್ಹೋದ್ವೋ ಏನೋ. ಈ ಕೆಂಚ ಯಾರು?'

'ಐ, ಏನ್ಬುದ್ದಿ ಇಂಗೆ ಕೇಳೀರಿ. ಇದೇ ಆ ಕೆರೆ. ನಾವೆಲ್ಲಾ ಮೊದ್ಲಿಗೆ ಆ ಮೊಲ್ಗಳೇ ಆಗಿದ್ವಿ. ಆ ಕೆಂಚು ಮೊಲಾನೇ ಈ ವಯ್ಯ. ಅದ್ಕೇ ಅವನ್ಗೆ ಕಪ್ಪಕಾಣ್ಕೆ ನಡ್ಕೊಂಡು ಬಂದದೆ.'

'ಮತ್ತೆ ಆ ಆನೆಗ್ಳು?'

'ಅದೇನು ದೊಡ್ವಿಸ್ಯ ಅಂತಾ ಕೇಳೀರಿ... ಬರ್ಗಾಲ ಮುಗೀತು. ಕೆರೆ ದೊಡ್ಡದಾತು. ಆನೆಗ್ಳು ಇತ್ಲಾಗೆ ಬರೋದೆ ಬಿಟ್ವೋ ಏನೋ... ಅತ್ವಾ ಅಲ್ಲೆಲ್ಲೋ ಗುಂಡಿ ತೋಡ್ಕೊಂಡಿರಬೈದು.'

ನಂಗೆ ಮಾತೇ ಹೊರಡಲಿಲ್ಲ. ಎಲಾ! ಎಂಥ ಅದ್ಭುತ ಸತ್ಯ!! ಈ ಸತ್ಯದರ್ಶನ ಮಾಡ್ಸಿದ್ದ ಮುದ್ಕನಿಗೆ ಧನ್ಯವಾದ ಅಂತ ಹೇಳೋಕೂ ತೋಚ್ಲಿಲ್ಲ.

ಪಾಪ! ಚಾರ್ಲ್ಸ್ ಡಾರ್ವಿನ್‌ಗೆ ಈ ಸುಳಿವು ಸಿಕ್ಕಿದ್ರೆ ಚೆನ್ನಾಗಿತ್ತು; ತನ್ನ ಥಿಯರಿ ಏನಾದ್ರೂ ಬದ್ಲಾಯಿಸ್ತಾ ಇದ್ನೋ ಏನೋ ಅಂತ. ಈ ಕೆಂಚನ ಪರಂಪರೆ ಎಲ್ಲಾ ಕಡೆ ಇರ್ಲೇಬೇಕು ಅನ್ನಿಸ್ತಾ ಇದೆ. ನಿಮಗೂ ಹಾಗೇ ಅನ್ಸುತ್ತಾ? ■

# ಭಿನ್ನಶಕ್ತಿ

ಆರ್. ಎಸ್. ರಾಜಾರಾಂ

(ನಾ. ಕಸ್ತೂರಿಯವರ ಮೊಮ್ಮಗ) (ನಾ. ಕಸ್ತೂರಿಯವರ ಶೈಲಿ)

ಶ್ರೀಮಾನ್ ಕೆಂ.ಕೂ. ಮೊಲ ಈಭಿನ್ನತೆಯ ಅಗ್ಗಿಷ್ಟಿಕೆಯಲ್ಲಿ ತನ್ನನ್ನೇ ಕಾಯಿಸಿ, ಕೆಂದಿಸಿ, ಪಾಲೀಷಿಸಿ, ಹೊಳಪಿಸಿ ಪಿಹೆಚ್ಡಿ ಪಡೆದಿದ್ದು ಅಂತ ಜನಮಾತು. ಯಾಕೆ, ಸಂಶಯವೇ? ಈ ಕಥೆ ಕೇಳಿ. ಅದರ ಪ್ರತಾಪ ನಿಮಗೇ ಗೊತ್ತಾಗತ್ತೆ.

ಎಲ್ಲರಿಗೂ ತಮ್ಮತಮ್ಮ ಬೇಳೆ ಬೇಯಿಸಿಕೊಳ್ಳೋಕೆ ಇತರರ ಕಷ್ಟಗಳು, ವ್ಯಸನಗಳು, ಸೋಲುಗಳು, ಸಾಲಗಳು, ಇವೇ ದೈವದತ್ತ, ವಿಧಿ ಇತ್ತ ಅವಕಾಶಗಳು. ಅಂದಮೇಲೆ ಕೆಂ.ಕೂ. ಮೊಲ, ಮೊದಲೇ ಜಾಣ ಮೊಲ, ಆಲ್ವಾ.

ಸಿಕ್ಕಿತು ಇದಕ್ಕೂ ಒಂದು ಆಕಾಶದಗಲದ ಅವಕಾಶ. ತನ್ನ ಭಿನ್ನವಾದ ಕೆಂಪಗಿನ 'ಕೂದಲಿಂದ 'ಕೆಂಚ', 'ಕಿಂಚ' ಇತ್ಯಾದಿ ಅಪಮಾನಗಳ, ಅಪಭ್ರಂಶಗಳನ್ನು ಸಹಿಸಲಾಗದೆ ತನ್ನ ನೆರೆ ಬಿಟ್ಟು, ಪರಕಾಡಿಗೆ ಆಗತಾನೇ ಬಂದಿದ್ದ ಈ ಮೊಲಕ್ಕೆ ದಕ್ಕಿತು, ಒಂದು ಸುವರ್ಣಾವಕಾಶ. ಖಾಲಿ ತಟ್ಟೆಗೆ ಬಿದ್ದ ಬಿಸಿ ಜಿಲೇಬಿಯಂತೆ.

ತಾನು ಈ ಹೊಸ ಜಾಗವಾದ 'ಚಂದ್ರಪುಷ್ಕರಿಣಿ' ಸರೋವರಕ್ಕೆ ಬಂದು ರಾತ್ರಿ ಪೊದೆಯಲ್ಲಿ ಅವಿತುಕುಳಿತಿದ್ದಾಗಲೇ, ಬಂದಿದ್ದವು ಅಲ್ಲಿಗೆ ಒಂದು ಕಾಡಾನೆಗಳ ಹಿಂಡು, ತಮ್ಮ ದಾಹ ತಣಿಸಿಕೊಳ್ಳೋಕೆ. ಅವುಗಳ ಬಹುತೂಕದ ಭರದ ಭರಾಟೆಗೆ ಸಿಲುಕಿ ಹಲಕೆಲವು ಸ್ಥಳೀಯ ಮೊಲಗಳು ನೆಲ ಕಚ್ಚಿ ಅಪ್ಪಚ್ಚಿಯಾಗಿದ್ದವು. ಉಳಿದವು ಆ ಹುಣ್ಣಿಮೆಯಲ್ಲೂ ದಾರಿ ಕಾಣದೆ ಪೆಚ್ಚಾಗಿದ್ದವು. ಪರಿಸ್ಥಿತಿ ಕೆಟ್ಟು ವಾತಾವರಣ ನಾತಾವರಣವಾಗಿತ್ತು.

ತನ್ನ ಮೂಗಿನಿಂದ ಬಾಲದ ತುದಿಯವರೆಗೂ ಇದ್ದ ಕೆಂಚುಕೂದಲನ್ನು ಪರಪರ ಕೆರೆದುಕೊಳ್ಳುತ್ತಲೇ ಹೊಳೆಯಿತು ಒಂದು ನಕ್ಷತ್ರಕಿರಣ ನಮ್ಮ ಕೆಂ.ಕೂ. ಮೊಲಕ್ಕೆ. ಈ ಲೋಕಲ್ ಸಮೂಹದೊಳಗೆ ತೂರಿಕೊಂಡು ಅವುಗಳನ್ನೇ ಆಳುವ ಪ್ರಖರೋಪಾಯ.

ಧೈರ್ಯದಿಂದ ಹಿಂಗಾಲುಗಳ ಮೇಲೆ ಎದ್ದು ನಿಂತು ಆನೆಗಳನ್ನುದ್ದೇಶಿಸಿ ತನ್ನ ವಾಕ್ಕೋವಿಯನ್ನು ಗುರಿಯಿಟ್ಟು, ಜೋರಾಗಿ ಹೀಗೆ ಹೇಳಿತು: "ನೀವುಗಳೆಲ್ಲಾ ಈ ಪುಷ್ಕರಿಣಿಯನ್ನು ಕಲುಷಿತಗೊಳಿಸಿದ್ದೀರಿ. ಈ ಪುಷ್ಕರಿಣಿಯ ನೀರಾಧಿಪತಿ ಚಂದ್ರನು ಇದರಿಂದ ತುಂಬಾ ಕುಪಿತನಾಗಿದ್ದಾನೆ. ನನ್ನ ಮೂಲಕ ನಿಮಗೆ ಒಂದು ಎಚ್ಚರಿಕೆಯನ್ನೂ ಕಳುಹಿಸಿದ್ದಾನೆ. ಈಗಲೇ ನೀವು ಈ ಸರೋವರವನ್ನು ಬಿಟ್ಟು ಹೋಗದಿದ್ದರೆ, ನಿಮ್ಮೆಲ್ಲರನ್ನೂ ಕೊಂದುಹಾಕುತ್ತಾನೆ. ಸಾಕ್ಷ್ಯ, ದೃಶ್ಯಪುರಾವೆ ಬೇಕಿದ್ದರೆ ಒಮ್ಮೆ ನೀರಿನಲ್ಲಿ ಬಿಂಬಿಸಿರುವ ಕೋಪದಿಂದ ಕಂಪಿಸುತ್ತಿರುವ ಚಂದ್ರನನ್ನೇ ನೋಡಿ."

ತೆಳುಮಾರುತದಿಂದಾದ ನೀರಿನ ಅಲೆಗಳ ದೆಸೆಯಿಂದ ಕಂಪಿಸುತ್ತಿರುವ ಪೂರ್ಣಚಂದ್ರನ ಬಿಂಬವನ್ನು ನೋಡಿದ ಆನೆಗಳು (ಹಿಂದೊಮ್ಮೆ ಚಂದ್ರನು ತಮ್ಮ ಕುಲದೈವನಾದ ಗಣೇಶನಿಗೇ ಶಾಪ ಕೊಟ್ಟಿದ್ದನ್ನು ನೆನಪಿಸಿಕೊಂಡು) ಅಲ್ಲಿಂದ ಪಲಾಯನ ಮಾಡಿದವು.

ಇದನ್ನು ನೋಡಿದ ಸ್ಥಳೀಯ ಕರಿಯ ಮೊಲಗಳೆಲ್ಲವೂ ಚಕಿತಗೊಂಡು ಪರಮಾಶ್ಚರ್ಯದಿಂದ ನಮ್ಮ ಹೀರೋ ಕೆಂ.ಕೂ. ಮೊಲದ ಬಳಿಗೆ ಬಂದು (ಬಾಲವೂ

ಸೇರಿದಂತೆ) ಸಾಷ್ಟಾಂಗ ನಮಸ್ಕರಿಸಿ, ಕೈಜೋಡಿಸಿ, ತಲೆ ಬಾಗಿ, ತೊಡೆಗಳ ನಡುವೆ ಬಾಲ ತೂರಿಸಿ ಕೃತಜ್ಞತೆಯಿಂದ ಶರಣಾದವು. ಕೆಂ.ಕೂ.ನ ಆದೇಶದಂತೆ ಪ್ರತಿ ನಿತ್ಯ ತಲಾ ಒಂದೊಂದು ಮೂಲಂಗಿ ಕರ ಕೊಡಲು ಒಪ್ಪಿದವು.

ಇವತ್ತಿಗೂ ಆ ಕೆಂ.ಕೂ. ವೊಲ, 'ಮೂಲಂಗಿ ಮಹಾರಾಜ' ಎಂಬ ಖ್ಯಾತನಾಮದಿಂದಲೇ ಇತಿಹಾಸದಲ್ಲಿ ನಿತ್ಯ ಸ್ತುತಿಸಲ್ಪಡುತ್ತಿದೆ. ■



# ಕೆಂಚು ಕೂದಲ ರ್‍ಯಾಬಿಟ್ ರಾಜ

ಎ. ವಿಜಯೇಂದ್ರರಾವ್ ಬೆಂಗಳೂರು

**(ಟಿ. ಪಿ. ಕೈಲಾಸಂರವರ ಶೈಲಿಯಲ್ಲಿ)**

ಲಾಂಗ್ ಲಾಂಗ್ ಎಗೋ, ಒಂದ್ಸರ್ತಿ ಬಾರಿ ಕ್ಷಾಮ ಆಯ್ತಂತೆ. ಆಗ ಫಾರೆಸ್ಟ್‌ನಲ್ಲಿರೋ ಆನೆಗಳು ಥರ್ಸ್ಟ್ ಕ್ವೆಂಚ್ ಮಾಡ್ಕೊಳಕ್ಕೆ ನೀರನ್ನು ಸರ್ಚ್ ಮಾಡುತ್ತಾ ಬಂದು, ಚಂದ್ರಪುಷ್ಕರಣಿ ಅನ್ನೋ ಲೇಕ್ ಹತ್ತಿರ ಅವರುಗಳು ಹೋಂ ಸ್ಟೇ ಮಾಡ್ಕೊಂಡು ಇದ್ದರು.

ಆ ಲೇಕ್ ಹತ್ತಿರ, ಮೊಲಗಳ ಗ್ರೂಪ್ ಸಹ ಸ್ಟೇ ಮಾಡ್ತಿತ್ತು. ಅದು ಪಾಪ, ಆನೆಗಳ ರೌಡಿಯಿಸಂನಿಂದ ಸಾಯ್ತಾ ಇದ್ದವು. ಆಗ, ಆ ಮೊಲಗಳು "ಏನಪ್ಪಾ, ಹೇಗೆ ಈ ಆನೆಗಳಿಂದ ಸೇಫ್ ಆಗೋದು?" ಅಂತ ಡೀಪ್ ಆಗಿ ಥಿಂಕ್ ಮಾಡ್ತಾಯಿದ್ದಾಗ, ಒಂದು ಕೆಂಚು ಕೂದಲಿನ ಒಂದು ರ್‍ಯಾಬಿಟ್, "ನೀವೇನೂ ವರಿ ಮಾಡ್ಕೋಬೇಡಿ, ನಾನು ಈ ಪ್ರಾಬ್ಲಂನ ಸಾಲ್ವ್ ಮಾಡ್ತೀನಿ" ಅಂತ ಪ್ರಾಮಿಸ್ ಮಾಡಿತು.

ಒಂದು ಫುಲ್ ಮೂನ್ ಡೇ ದಿವಸ, ಆ ಬ್ಲಾಂಡ್ ಮೊಲ, ಆ ಲೇಕ್ ಹತ್ತಿರ ಇದ್ದ ಸಣ್ಣ ಹಿಲ್ ಮೇಲೆ ಏರಿ, ಆನೆಗಳಿಗೆ ಲೌಡಾಗಿ ಕೂಗಿ ಹೇಳಿತು, "ಏ ಆನೆಗಳೇ, ಈ ಲೇಕ್‌ನ ಬಾಸ್ ಆದ ಚಂದ್ರ ನಿಮಗೆಲ್ಲಾ ಒಂದು ವಾರ್ನಿಂಗ್ ಮಾಡಿದ್ದಾನೆ. ಅದೇನೆಂದರೆ, ನೀವೆಲ್ಲಾ ಈ ಲೇಕ್‌ನ ತುಂಬಾ ಪಲ್ಯೂಟ್ ಮಾಡಿದ್ದೀರ. ಅದಕ್ಕೆ ಅವನಿಗೆ ತುಂಬಾ ಆಂಗ್ರೀ ಆಗಿದೆ ನಿಮ್ಮ ಮೇಲೆ. ಇವತ್ತು ನೈಟ್ ಒಳಗೆ ಈ ಜಾಗವನ್ನು ವೆಕೇಟ್ ಮಾಡದಿದ್ದರೆ, ನಿಮ್ಮನ್ನೆಲ್ಲಾ ಕಿಲ್ ಮಾಡಿಬಿಡ್ತಾನಂತೆ! ಬೇಕಿದ್ದರೆ, ಆ ಲೇಕ್ ಹತ್ತಿರ ಹೋಗಿ ನೋಡಿ, ಅಲ್ಲಿ ಚಂದ್ರನು ಕೋಪದಿಂದ ಅಲುಗಾಡುತ್ತಾ ನಿಮ್ಮನ್ನು ಕಿಲ್ ಮಾಡಲು ರೆಡಿಯಾಗಿದ್ದಾನೆ" ಎಂದಿತು. ಆನೆಗಳು ಲೇಕ್ ಹತ್ತಿರ ಹೋಗಿ ನೋಡಿದಾಗ, ಗಾಳಿಯ ದೆಸೆಯಿಂದ, ಆ ಲೇಕ್‌ನ ನೀರು ಸ್ವಲ್ಪ ಶೇಕ್ ಆಗ್ತಿದ್ದರಿಂದ, ಚಂದ್ರನ ರಿಫ್ಲೆಕ್ಷನ್ ಅಲ್ಲಾಡುತ್ತಿದ್ದುದ್ದನ್ನು ನೋಡಿ ಆನೆಗಳು, ನಿಜವಾಗಿ ಚಂದ್ರ ಆಂಗ್ರೀ ಆಗಿದ್ದಾನೆಂದು ಬಗೆದು, ಅಲ್ಲಿಂದ ಎಸ್ಕೇಪ್ ಆಗಿ ಬೇರೆ ಕಡೆಗೆ ಹೊರಟುಹೋದವು.

ಎಲ್ಲಾ ಮೊಲಗಳು, ಆ ಬ್ಲಾಂಡ್ ಮೊಲಕ್ಕೆ 'ನಮ್ಮ ಕಿಂಗ್‌ಗೆ ಜಯವಾಗಲಿ' ಎಂದು ಕೂಗಿದವು. ಆಗ ಆ ಕಿಂಗ್, "ಸರಿ ಸರಿ. ಇನ್ಮೇಲೆ ನೀವೆಲ್ಲಾ ಡೈಲಿ ಒಂದೊಂದು ರ್‍ಯಾಡಿಶ್ ಅನ್ನು ತೆರಿಗೆಯಂತೆ ಕೊಡಬೇಕು. ನಿಮ್ಮನ್ನು ಹ್ಯಾಪಿಯಾಗಿ ಇಡೋದು ನನ್ನ ಡ್ಯೂಟಿ" ಅಂತ ಹೇಳಿತು. ಎಲ್ಲಾ ರ್‍ಯಾಬಿಟ್‌ಗಳು ಒಪ್ಪಿಕೊಂಡವು. ಆ ಕೆಂಚು ಕೂದಲಿನ ಮೊಲ ಮುಂದೆ "ರ್‍ಯಾಬಿಟ್ ಕಿಂಗ್" ಎಂದು ಫೇಮಸ್ ಆಯಿತು.

ಡಾರ್ವಿನ್‌ನ ಎವಲ್ಯೂಶನ್ ಥಿಯರಿಯ ಪ್ರಕಾರ, ಮುಂದೆ ಮೊಲ ಹ್ಯೂಮನ್ ಆಯಿತು. ಕಾಡು ಸಿಟಿಯಾಯಿತು. ಆ ಬ್ಲಾಂಡ್ ರ್‍ಯಾಬಿಟ್ ಕಿಂಗ್ ಮಾತ್ರ ಎಲ್ಲರಿಂದಲೂ ಟ್ಯಾಕ್ಸ್ ರಿಸೀವ್ ಮಾಡುತ್ತಾ ಹ್ಯಾಪಿಯಾಗಿತ್ತು!

ಮಾರಲ್ ಆಫ್ ದ ಸ್ಟೋರಿ ಏನೆಂದರೆ... : ಕೀಪ್ ಅವೇ ಫ್ರಂ ಕೆಂಚು ಕೂದಲು ಆಲ್ವೇಸ್!

■

# ಕೆಂಪ ಕೂದ್ಲಿನ ಮಾರಾಜಾ

ಅರವಿಂದ.ಜಿ.ಜೋಷಿ, ಮೈಸೂರು

(ಬೇಂದ್ರೆಯವರ ಶೈಲಿ)

"ಬರ್ರಪಾ ಹುಡುಗ್ರಾ, ಬರ್ರೀ...ಇವತ್ತ ನಿಮ್ಗೊಂದು ಛಂದದ ಕಥೀ ಹೇಳ್ತೀನಿ ಮಾತಾಡ್ದ ಸುಮ್ ಕೂತು ಕೇಳ್ರಿ...

ಭಾಳ ವರ್ಷದ ಹಿಂದ.. ಎಲ್ಲಾ ಕಡಿ ಮಳೀ ಆಗ್ದೆನೆ ನೀರಿನ ಪುಕಾರು ಭಾಳ ಎದ್ದಿತ್ತು. ಹಿಂಗಿದ್ದಾಗ ಒಂದು ಅಡವಿ ಒಳಗ ಇದ್ದ ಆನಿಗೋಳು ನೀರ ಹುಡ್ಕೊಂಡು ಆ ಅಡವ್ಯಾಗ ಇದ್ದ ಸಣ್ಣ ಸರೋವರದ ಹಂತಿಲ್ಲೆ ಬಂದು ಠಿಕಾಣಿ ಹೂಡಿದವು. ಆ ಸರೋವರದ ಮಗ್ಗಲಾಗೇ ಒಂದಿಷ್ಟು ಮೊಲ ಜೀವನಾ ಮಾಡ್ಕೊಂಡು ಇದ್ವು.ಆನಿಗೋಳು ಅಲ್ಲಿ ಓಡಾಡ್ಕೊಂಡು ಇದ್ದಾಗ ಸುಮಾರು ಮೊಲಗೋಳು ಸತ್ತ ಹೋದ್ರ ಮತ್ತ ಒಂದಿಷ್ಟು ಮೊಲಗೋಳಿಗೆ ಭಾಳ ಪೆಟ್ಟ ಆತು.ಹಿಂಗ ಇದ್ದಾಗ ಆ ಮೊಲಗೋಳ ಪೈಕಿ ಒಂದು ಕೆಂಪು ಕೂದಲಿನ ಉಡಾಳ ಮೊಲಾ, ಬ್ಯಾರೆ ಮೊಲಗಳಿಗೆ ಏಯ್ ನೀವೇನು ಇನ್ನ ಅಂಜಬ್ಯಾಡ್ರೀ ಸ್ವಲ್ಪ ಧೈರ್ಯದಿಂದ ಇರಿ. ಅಂತ ಹೇಳ್ತು. ಆ  ರಾತ್ರಿ ಎಲ್ಲಾಕಡೆನೂ ಹಿಟ್ ಛೆಲ್ಲಿದಂಗ ಬೆಳ್ದಿಂಗ್ಳು ಬಿದ್ದಿತ್ತು.ಆಗ ಆ ಕೆಂಪ ಕೂದ್ಲಿನ ಮೊಲಾ, ಎಲ್ಲಾ ಆನಿಗೊಳಿಗೆ ಕೇಳು ಹಂಗ–"ಏಯ್ ಆನೀಗೊಳಾ.. ಆಕಾಶದಾಗ ಇರೋ ಚಂದ್ರಾಮಾ ನಿಮ್ಮ ಮ್ಯಾಲೆ ಭಾಳ ಸಿಟ್ಟ ಆಗ್ಯಾನ.. ನಿಮಗ ಸಂಶ್ಯಾ ಬಂದ್ರ ನೀವೇ ಇಲ್ಲಿ ಈ ಸರೋವರದಾಗ ಇಣಿಕಿ ನೋಡ್ರಿ.. ನೀವೆಲ್ಲಾ ಸೇರ್ಕೊಂಡು ಈ ಸರೋವರದ ನೀರನ್ನ ಭಾಳ ರಾಡೀ ಮಾಡೀರಿ.. ಅವಾ ನಿಮ್ಮನ್ನ  ಹಂಗ ಬಿಡೂದಿಲ್ಲ ಸಾಯ್ಸಿ ಬಿಡ್ತಾನ "ಅಂತ ತಾಕೀತು ಮಾಡ್ತದ. ಅಷ್ಟಕ್ಕನ ಒಂದಿಷ್ಟು ಆನಿಗೋಳು ಆ ಸರೋವರದ ಹಂತಿಲ್ಲೆ ಬಂದು ನೋಡ್ತಾವ ಆಗ ತಣ್ಣ್‌ಗ ಗಾಳಿ ಬೀಸಿಲಿಕ್ಕೆ ಹತ್ತಿದ್ರಿಂದ ಸರೊವರದಾಗಿನ ಚಂದಪ್ಪ ನ ಬಿಂಬ ನೀರು ಅಲ್ಲಾಡು ದೆಸಿಯಿಂದ ಅದೂ ಅಳ್ಳಾಡಿದ್ದು ಕಂಡಾಗ ಎಲ್ಲಾನೂ ತಮ್ಮ ತಮ್ಮೊಳಗ "ಹೌದು ಆ ಮೊಲಾ ಹೇಳಿದ್ದು ಖರೇ ಅದ ಇನ್ನ ನಾವು ಇಲ್ಲಿದ್ರ ಭಾಳ ತೊಂದ್ರಿ ಆಗ್ತದ" ಎಂದು ಅಂದ್ಕೊಂಡು  ಜೀವದ  ಮ್ಯಾಲಿನ ಆಶಾದಿಂದ ಅಲ್ಲಿಂದ ಬ್ಯಾರೇ ಕಡೆ ಎಲ್ಲಾ ಓಡಿಹೋದು. ಅವು ಹೋದ ಮ್ಯಾಲೆ ಅಲ್ಲಿದ್ದ ಉಳಿಕಿ ಮೊಲಗಳಿಗೆ ಭಾಳ ಆನಂದ ಆಗಿ ಅವು" ಕೆಂಪ ಕೂದ್ಲಿನ ಮೊಲಕ್ಕ ಜಯವಾಗ್ಲಿ" ಅಂತ ಎಲ್ಲಾ ಒಂದೇ ಸ್ವರದಾಗ ಹೇಳಿದ್ವು. ಆಗ   ಆ ಕೆಂಪ ಕೂದ್ಲಿನ ಮೊಲಾ.

ಎಲ್ಲಾ ಮೊಲಕ್ಕೂ– "ನೋಡ್ರಪ್ಪಾ.. ಇನ್ ಮುಂದ ನಿಮಗ ಯಾವ ತೊಂದ್ರೀನೂ ಬರ್ದಂಗ ನಾ ನೋಡ್ಕೋತೀನಿ.. ಆದ್ರ ನೀವು ದಿನಾನೂ ಒಂದೊಂದು ಕೆಂಪು ಮೂಲಂಗಿ ತಂದು ಕೊಡ್ಬೇಕು ಗೊತ್ತಾಯ್ತಾ?" ಅಂತ ಹೇಳಿದ ಮ್ಯಾಲೆ ಎಲ್ಲಾ ಮೊಲಗೋಳು "ಅದಕ್ಕೇನಂತ ನಾವು ತಂದು ಕೊಡ್ತೀವಿ" ಅಂತ ಅಂದ್ವು. ಆವತ್ತಿಂದ ಆ ಕೆಂಪ ಕೂದ್ಲಿನ ಮೊಲಕ್ಕ " ಕೆಂಪ ಮೂಲಂಗಿ ಮಾರಾಜಾ" ಅಂತ ಹೊಸಾ ಹೆಸರು ಇಟ್ಟು  ಕರ್ಯಾಕ ಚಾಲೂ ಮಾಡಿದ್ವು. ಅದು ಅದ ಹೆಸರ್ಲೆ ಪ್ರಸಿದ್ಧ ಆತು. ಮುಂದ ಬರ್ತಾ ಬರ್ತಾ ಸಮಾಜ ವಿಕಾಸ ಆಂದಗ ಆ ಮೊಲಗೋಳೂ ಮನುಷಾ ಆದ್ವು ಅಡವಿ ಹೋಗಿ ಊರಾತು. ಆದ್ರ ಆ ಕೆಂಪ ಕೂದ್ಲಿನ ಮಾರಾಜಾ ಅಂತೂ  ಎಲ್ಲಾರ ಬಲ್ಲಿ ಲಂಚಾ ಇಸ್ಕೊತಾ ಆರಾಮಾಗಿದ್ದ. ಕಥೀ ತಾತ್ಪರ್ಯ ಏನಂದ್ರ –"ಕೆಂಪ ಕೂದ್ಲಾ ಇರೋ ಮಂದೀನ ಕಂಡ್ರ ದೂರ ಇರಬೇಕು"

■

# ಕೆಂಚುಗೂದಲ ಮೊಲದ ಕತೆ

ಜಿ. ವಿ. ಅರುಣ

**("ಶ್ರೀನಿವಾಸ" – ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಶೈಲಿಯನ್ನು ಅನುಕರಿಸಿ)**

ಆಷಾಢ ಮಾಸದ ಪೌರ್ಣಿಮೆಯ ಸಮೀಪದ ಒಂದು ದಿನ. ಸಂಜೆಯ ಸಮಯ ಸೂರ್ಯನು ಹಗಲೆಲ್ಲ ಚೆನ್ನಾಗಿ ಕಾದು, ಸೋತು ಪಶ್ಚಿಮ ದಿಕ್ಕನ್ನು ಸೇರಿದ್ದನು. ಈ ಪರಿಪಾಟವು ಶ್ರಾವಣದ ಕೊನೆಯವರೆಗೂ ಮುಂದುವರೆಯಿತು. ಸೂರ್ಯನು ಇನ್ನೂ ತೀಕ್ಷ್ಣವಾಗಿ ಕೆಲಸ ಮಾಡೋಣವೆಂದನೆಂಬಂತೆ ತನ್ನ ಕರ್ಮಸಾಕ್ಷಿತ್ವಕ್ಕೆ ಸಲಕರಣೆಯಾದ ಮೊನೆಯಾದ ಕಿರಣಗಳ ರಾಜಿಯಿಂದ ಪ್ರಪಂಚದ ಎಲ್ಲ ಕಡೆಗಳನ್ನೂ ಪ್ರವೇಶಿಸಿ ನೋಡುತ್ತಾ ಎಲ್ಲಕ್ಕೂ ತನ್ನ ಪ್ರಭೆಯ ಸೌಂದರ್ಯವನ್ನು ಕೊಟ್ಟಿದ್ದನು. ಆ ತಿಂಗಳುಗಟ್ಟಲೆಯ ತಾಪಕ್ಕೆ ಮಳೆಯಿಲ್ಲದೆ, ನದಿಗಳಲ್ಲಿ ನೀರು ಇಲ್ಲದಂತಾಗಿತ್ತು; ಕೆರೆ ಕುಂಟೆಗಳು ಒಣಗಿದ್ದವು. ಒಂದು ನದಿಯ ನೀರನ್ನು ನೆಚ್ಚಿಕೊಂಡು ಗಾಂಭೀರ್ಯದಿಂದ ಒಂದೆಡೆ ವಾಸವಾಗಿದ್ದ ಒಂದು ಆನೆಗಳ ಹಿಂಡು ಹೊಸ ನೀರಿನ ಸೆಲೆಯನ್ನು ಹುಡುಕಿಕೊಂಡು ವಲಸೆ ಹೊರಟವು. ಅವು ಬಂದು ಸೇರಿದ್ದು ವನಗಳಿಂದ ಕೂಡಿ ವಿಸ್ತಾರವಾಗಿದ್ದ ಚಂದ್ರ ಪುಷ್ಕರಣಿ ಎಂಬ ಒಂದು ಸರೋವರದ ಪ್ರದೇಶಕ್ಕೆ.

ಆನೆಗಳ ಹಿಂಡು ಬರುವುದಕ್ಕೆ ಮೊದಲು ಶಾಂತಿಯಿಂದ ತುಂಬಿ ಸೌಖ್ಯದಿಂದಿದ್ದ ಆ ಪ್ರದೇಶವು ಈಗ ಬಿರುಗಾಳಿ ಬೀಸಿ ಒಗೆದ ವನದಂತಾಗಿತ್ತು. ಆ ವನದ ಶಾಂತಿಯ ಭಾಗವಾಗಿದ್ದ ಒಂದು ಮೊಲದ ಹಿಂಡಿನ ಹಲವು ಮೊಲಗಳು ಆನೆಗಳ ತುಳಿತಕ್ಕೆ ಸಿಲುಕಿ ಜೀವಬಲಿಯನ್ನು ಕೊಟ್ಟವು. 'ಎಲ್ಲೋ ಉಂಟಾದ ಅನಾವೃಷ್ಟಿಗೆ ಇಲ್ಲಿಗೆ ಆನೆಗಳು ಬಂದದ್ದರಿಂದ ಹೀಗೇಕೆ ತಮಗೆ ತೊಂದರೆಯಾಗಬೇಕು?' ಎಂದು ಮೊಲಗಳಿಗೆ ಅತೀವ ಬೇಸರವಾಯಿತು. ತಮಗಿಂತ ದೊಡ್ಡ ಆಕಾರದ ಏನನ್ನು ನೋಡಿದರೂ ಮೊಲಗಳು ಅವನ್ನು ಆನೆ ಎಂದುಕೊಂಡು ಭಯಪಡುವಂತಾಯಿತು. ಅವುಗಳ ಹೃದಯದಲ್ಲಿ ಆನೆಗಳನ್ನು ಕಂಡರೆ ಅಳಿಸಿಹೋಗದಿರುವ ರೀತಿಯಲ್ಲಿ ಭೀತಿಯುಂಟಾಗಿತ್ತು.

'ಈ ಆನೆಗಳು ಇನ್ನು ಇಲ್ಲೇ ಉಳಿದುಬಿಟ್ಟರೆ ತಮ್ಮ ಸರ್ವನಾಶ ಖಂಡಿತ' ಎಂದು ಮೊಲಗಳಿಗೆ ಹೊಳೆಯಲು ಹೆಚ್ಚು ದಿನಗಳು ಬೇಕಾಗಲಿಲ್ಲ. ಚಿಂತಾಕ್ರಾಂತರಾದ ಮೊಲಗಳೆಲ್ಲ ಒಂದೆಡೆ ಸೇರಿ 'ಮುಂದೇನು?' ಎಂದು ಆತಂಕದಿಂದ ಯೋಚಿಸಿದವು. ಅಲ್ಲಲ್ಲಿ ವಿಚಿತ್ರಗಳು ಇರುವಂತೆ, ಈ ಬಿಳಿಯ ಮೊಲಗಳ ಮಧ್ಯೆ ಒಂದು ಮುದಿ ಕೆಂಚುಗೂದಲ ಮೊಲವಿತ್ತು. ಅದು ಉಳಿದ ಬಿಳಿಯ ಮೊಲಗಳಿಗೆ ಅಭಯವನ್ನು ನೀಡುವಂತೆ ಅವುಗಳಿಗೆ ಆಪ್ಯಾಯಮಾನವಾದ ವಿಚಾರವೊಂದನ್ನು ಪ್ರಸ್ತಾಪ ಮಾಡಿತು. ವಯಸ್ಸಿನಲ್ಲಿ ಜಾಂಬವಂತನಾಗಿದ್ದ ಕೆಂಚುಗೂದಲ ಮೊಲವು ಬುದ್ಧಿಯಲ್ಲಿ ಹನುಮಂತ!

"ನೀವುಗಳು ಒಪ್ಪುವುದಾದರೆ ನಾನು ಆನೆಗಳು ಇಲ್ಲಿಂದ ಓಡಿ ಹೋಗುವಂತೆ ಮಾಡುತ್ತೇನೆ" ಎಂದಿತು. ಅದರ ಮಾತಿನಲ್ಲಿ ದೃಢತೆ ಇತ್ತು. ಅದನ್ನು ಕಂಡು, ಎರಡು ಮೂರು ನಾಯಕ ಮೊಲಗಳಿಗೆ 'ಇದರಿಂದ ತಮ್ಮ ಯಜಮಾನಿಕೆ ಹೋಗುತ್ತೆ' ಎನ್ನಿಸಿತು. ಆದರೆ ಉಳಿದ ಮೊಲಗಳೆಲ್ಲ ಒಕ್ಕೊರಲಿನಿಂದ ಒಪ್ಪಿಕೊಂಡದ್ದನ್ನು ಕಂಡು ಅವು ಸುಮ್ಮನಾದವು.

ಅನಾವೃಷ್ಟಿಯಿಂದ ನೀರನ್ನು ಹುಡುಕಿಕೊಂಡು ಅಲ್ಲಿಗೆ ಬಂದಿದ್ದ ಆನೆಗಳಿಗೆ ತಮ್ಮ ಅಜಾಗರೂಕತೆಯಿಂದ ಮೊಲಗಳಿಗೆ ತೊಂದರೆಯಾಗುತ್ತಿದೆ ಎಂಬ ಅರಿವು ಇರಲಿಲ್ಲ;

ಅವುಗಳ ಬುದ್ಧಿ ಅಷ್ಟು ದೂರ ಓಡಿರಲಿಲ್ಲ. ಆ ಕೆಂಚುಗೂದಲಿನ ಮೊಲವು ಇಂಥ ಸಮಯದಲ್ಲಿ ಆನೆಗಳು ಯಾವ ಕಾರಣಕ್ಕೆ ಅಲ್ಲಿಗೆ ಬಂದಿದ್ದವೋ ಆ ಸರೋವರದ ಬಳಿಗೆ ಹೋಯಿತು. ಅದು ತೊರೆಯೊಂದರಿಂದ ಹರಿದು ಬರುವ ನೀರನ್ನು ಹಿಡಿದಿಟ್ಟುಕೊಂಡು ವಿಸ್ತಾರವಾಗಿ ಹರಡಿದ್ದ ದೊಡ್ಡ ಸರೋವರ. ಅಲ್ಲಿ ಅದರ ನೀರಿನಿಂದಲೇ ಬೆಳೆಯುವ ಸುಂದರವಾದ ವನವಿತ್ತು; ಕೊಳದ ಪಾರ್ಶ್ವದಲ್ಲಿ ಉನ್ನತವಾಗಿ ಬೆಳೆದಿದ್ದ ವಟವೃಕ್ಷಗಳು. ಅವುಗಳ ಪಕ್ಕದಲ್ಲೇ ಆ ಕೆಂಚುಗೂದಲಿನ ಮೊಲವೂ ಅದರ ಓರಗೆಯವರು ಸೇರಿ ಅನೇಕಾವರ್ತಿ ನೀರನ್ನು ಕುಡಿಯಲು ಬರುತ್ತಿದ್ದರು. ಆ ಸ್ಥಳದ ಇಂದಿನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ನೋಡಿ ಕೆಂಚುಗೂದಲಿನ ಮೊಲದ ಮನಸ್ಸಿನಲ್ಲಿ ವಿಶೇಷವಾದ ಕೋಲಾಹಲವುಂಟಾಯಿತು. 'ಇನ್ನು ತಡ ಮಾಡಬಾರದು' ಎಂದು ಸಮಚಿತ್ತವನ್ನು ತಂದುಕೊಂಡು, ಆ ಬೆಳದಿಂಗಳ ರಾತ್ರಿಯಲ್ಲಿ ಸರೋವರದ ದಂಡೆಯಲ್ಲಿ ಕುಳಿತುಕೊಂಡಿತು.

ತುಂಬಿದ ತಿಂಗಳ ಬೆಳಕಿನಲ್ಲಿ ಚಂದ್ರಪುಷ್ಕರಣಿಯೊಳಗೆ ತೇಜೋಮಯವಾದ ಚಂದ್ರಬಿಂಬವು ದೊಡ್ಡದಾಗಿ ಪ್ರಕಾಶಿಸುತ್ತಾ ಕಾಣತ್ತಿತ್ತು. ಅಷ್ಟರಲ್ಲೇ ಆನೆಗಳ ಹಿಂಡು ಬರುವುದು ಕೆಂಚುಗೂದಲಿನ ಮೊಲಕ್ಕೆ ಗೋಚರವಾಯಿತು. ಆನೆಗಳ ನಾಯಕನು ಸರೋವರದ ಸುತ್ತಮುತ್ತ ಪರಿಶೀಲಿಸಿ, ಯಾವುದೇ ಆತಂಕ ಇಲ್ಲವೆಂಬುದನ್ನು ಕಂಡುಕೊಂಡು, ನೀರನ್ನು ಕುಡಿಯಲು ಮುಂದಡಿಯಿಟ್ಟಿತು. ಅದೇ ಸರಿಯಾದ ಸಮಯವೆಂದು ಅರಿತ ಮೊಲವು, ದೊಡ್ಡ ಧ್ವನಿ ಮಾಡಿಕೊಂಡು "ಈ ಸರೋವರವು ಚಂದ್ರನಿಗೆ ಸೇರಿದ್ದು" ಎಂದು ಕೂಗಿ ಹೇಳಿತು. ಆದನ್ನು ಕೇಳಿ ಅಲ್ಲೇ ನಿಂತ ಆನೆಗಳ ನಾಯಕನು, ಆ ಗಟ್ಟಿ ಧ್ವನಿ ಬಂದೆಡೆಗೆ ದೃಷ್ಟಿಸಿ ನೋಡಿತು. 'ಓಹೋ! ಏನಿದು? ಮೊಲಗಳು ಬಿಳಿಯ ಬಣ್ಣವಿರುತ್ತವೆ. ಇದನ್ನು ನೋಡಿದರೆ ಕೆಂಚು ಬಣ್ಣದ ಮೊಲ. ಇಲ್ಲಿ ಏನೋ ವಿಶೇಷವಿದೆ" ಎಂದುಕೊಂಡು ತನ್ನ ಸೊಂಡಿಲನ್ನು ಮೇಲಕ್ಕೆ ಎತ್ತಿತು. ಆ ಗಜನಾಯಕನ ಗಮನವು ತನ್ನ ಮೇಲಿರುವುದನ್ನು ನೋಡಿ ಕೆಂಚುಗೂದಲಿನ ಮೊಲವು ದೊಡ್ಡ ದನಿಯಲ್ಲಿ "ಈ ಪುಷ್ಕರಣಿಯು ಚಂದ್ರನಿಗೆ ಸೇರಿದ್ದು. ಇದನ್ನು ಕಲುಷಿತಗೊಳಿಸಿ, ಅವನು ವಿಹರಿಸುವ ಸುತ್ತಮುತ್ತಲಿನ ಮನೋಹರವಾಗಿದ್ದ ವನವನ್ನು ಹಾಳುಗೆಡವಿದ್ದೀರಿ. ಇದರಿಂದ ಚಂದ್ರನಿಗೆ ನಿಮ್ಮ ಮೇಲೆ ಅತಿಶಯವಾದ ಕೋಪವು ಬಂದಿದೆ. ಇಂದೇ ನೀವು ಈ ಸ್ಥಳವನ್ನು ತೊರೆದು ಬೇರೆಯೆಡೆಗೆ ಪಯಣಿಸದಿದ್ದರೆ ನಿಮ್ಮೆಲ್ಲರನ್ನು ಅವನು ಕೊಂದು ಹಾಕುತ್ತಾನೆ" ಎಂದಿತು. ಇದನ್ನು ಕೇಳಿ, ಹೆದರಿಕೆಯನ್ನು ಉಂಟು–ಮಾಡುವಂಥದ್ದೂ ಆಕರ್ಷಕವೂ ಆಗಿದ್ದ ಉದ್ದದ ಎರಡು ಶ್ವೇತದಂತಗಳನ್ನು ಹೊಂದಿದ್ದ, ಎತ್ತರವಾಗಿದ್ದ ಆ ಆನೆಗಳ ನಾಯಕನು ಒಂದಡಿ ಹಿಂದೆ ಸರಿದು ನಿಂತಿತು. ಇದನ್ನು ಕಂಡು ಹಿಂಡಿನ ಇತರ ಆನೆಗಳು ಹೆದರಿ ಎರಡು ಅಡಿಗಳನ್ನು ಹಿಂದಿಟ್ಟವು.

ತನ್ನ ಮಾತುಗಳು ಪ್ರಭಾವ ಬೀರುತ್ತಿರುವುದನ್ನು ಅರಿತ ಕೆಂಚುಗೂದಲಿನ ಮೊಲವು ಇನ್ನಷ್ಟು ಗಟ್ಟಿಯಾಗಿ "ಈ ಪುಷ್ಕರಣಿಯಲ್ಲಿ ಕಾಣುತ್ತಿರುವ ಪೂರ್ಣಚಂದ್ರನತ್ತ ಒಮ್ಮೆ ದೃಷ್ಟಿಯನ್ನು ಹಾಯಿಸಿ ನೋಡಿ. ಅವನು ನಿಮ್ಮ ಮೇಲೆ ಕೋಪಾವಿಷ್ಟನಾಗಿ ಹೇಗೆ ಅಲುಗಾಡುತ್ತಿದ್ದಾನೆ ಎಂಬುದು ನಿಮಗೆ ಅರಿವಾಗುತ್ತದೆ" ಎಂದು ಅಧಿಕಾರಯುತವಾಗಿ ಹೇಳಿತು. ಆ ಕೆಂಚುಗೂದಲಿನ ಮೊಲವು ಯಾರಿಗೂ ಗೊತ್ತಾಗದ ರೀತಿಯಲ್ಲಿ ಸಣ್ಣ ಕಲ್ಲೊಂದನ್ನು ಸರೋವರಕ್ಕೆ ನೂಕಿತು. ಅದರಿಂದ ಎದ್ದ ತರಂಗಗಳು ಸರೋವರದ ನೀರಿನ ಮೇಲೆ ತೆಳ್ಳಗೆ ಸಾಗುತ್ತಾ ಪೂರ್ಣಚಂದ್ರನ ಬಿಂಬವು ಅಲುಗಾಡುತ್ತಿರುವಂತೆ ಮಾಡಿತು. ಈ ದೃಶ್ಯವನ್ನು ನೋಡಿದ ಆನೆಗಳು ಚಂದ್ರನು ಈ ಅಸಾಮಾನ್ಯ ಕೆಂಚುಗೂದಲಿನ ಮೊಲವನ್ನು ತಮ್ಮನ್ನು ಎಚ್ಚರಿಸಲೆಂದೇ ಕಳುಹಿಸಿರುವನೆಂದು

ಗ್ರಹಿಸಿಕೊಂಡವು. ತಮ್ಮ ಸೊಂಡಿಲನ್ನು ಮೇಲೆತ್ತಿ, 'ಚಂದ್ರನ ಆಜ್ಞೆಯನ್ನು ಶಿರಸಾವಹಿಸುತ್ತೇವೆ' ಎಂದು ಹೇಳಿ ಅಲ್ಲಿಂದ ಪಾಲಾಯನಗೈದವು.

ಈ ದೃಶ್ಯವನ್ನು ನೋಡಿದ ಮೊಲಗಳ ಸಮೂಹವು 'ಕೆಂಚುಗೂದಲಿನ ಮೊಲದ ಮೂಲಕ, ಚಂದ್ರನ ಕೃಪೆಯಿಂದ ಇದು ಸಂಭವಿಸಿತಲ್ಲಾ' ಎಂದು ಆಶ್ಚರ್ಯಪಟ್ಟವು. ಹೀಗೆ ಶಶಾಂಕನಾದ ಚಂದ್ರನಿಗೆ ಪ್ರಿಯನಾದವನೇ ತಮಗೆ ಮಹಾರಾಜನಾಗಿರಬೇಕೆಂದು ಒಕ್ಕೊರಲಿನಿಂದ ನಿಶ್ಚಯಿಸಿಕೊಂಡವು. ಅನಂತರ ಸಂತೋಷದಿಂದ "ಕೆಂಚುಗೂದಲ ಮೊಲಕ್ಕೆ ಜಯವಾಗಲಿ" ಎಂದು ಜಯಜಯಕಾರವನ್ನು ಮಾಡಿದವು. ಜಾಂಬವಂತನಾಗಿದ್ದ ಕೆಂಚುಗೂದಲ ಮೊಲವು 'ನಾನು ಈಗ ದಿನವೆಲ್ಲಾ ಅಡ್ಡಾಡಿ ನನ್ನ ಆಹಾರವನ್ನು ನಾನೇ ಸಂಪಾದಿಸಿಕೊಳ್ಳುವುದು ಕಷ್ಟ' ಎಂದು ಆಲೋಚಿಸಿತು. ತನಗೆ ಜಯಕಾರ ಮಾಡುತ್ತಿದ್ದ ಮೊಲಗಳಿಗೆ "ಇನ್ನು ಮುಂದೆ ನಿಮ್ಮ ಯೋಗಕ್ಷೇಮವು ನನ್ನ ಜವಾಬುದಾರಿ. ನನ್ನ ಪ್ರಜೆಗಳಾದ ನೀವೆಲ್ಲರೂ ನನ್ನ ಮೇಲೆ ವಿಶ್ವಾಸವಿಟ್ಟಿರುವುದನ್ನು ತೋರಿಸಿಕೊಳ್ಳಲು ಪ್ರತಿದಿನವೂ ಒಂದೊಂದು ಮೂಲಂಗಿಯನ್ನು ಕಪ್ಪವನ್ನಾಗಿ ಮಹಾರಾಜರಿಗೆ ಸಲ್ಲಿಸಬೇಕು" ಎಂದು ಅಜ್ಞಾಪಿಸಿತು. ಇದನ್ನು ಸಂತೋಷದಿಂದ ಮನಸಾರೆ ಒಪ್ಪಿಕೊಂಡ ಮೊಲಗಳೆಲ್ಲ ಕೆಂಚುಗೂದಲ ಮೊಲದ ಮಹಾರಾಜರಿಗೆ ಅತಿಶಯವಾದ ಪ್ರೀತಿ ಗೌರವಗಳನ್ನು ತೋರಿಸಿದವು. ಅಲ್ಲದೆ ಈ ಮೊಲಮಹಾರಾಜರಿಗೆ "ಮೂಲಂಗಿ ಮಹಾರಾಜ" ಎಂದು ವಿಶಿಷ್ಟವಾಗಿ ಬಿರುದಂಕಿತ ಮಾಡಿ ನಜರು ನೀಡತೊಡಗಿದವು.

ಕಾಲಕ್ರಮೇಣ ಒಂದು ಬೆಳದಿಂಗಳ ರಾತ್ರಿ ಮಲಗಿ, ಮಾರನೆಯ ದಿನ ಏಳುವಷ್ಟರಲ್ಲಿ ಆ ಮೊಲಗಳಿಗೆ ವಿಕಾಸವಾದದ ಜ್ಞಾನೋದಯವಾಗಿಹೋಗಿತ್ತು. ಅವೆಲ್ಲವೂ ಮಾನವರಾಗಿ ಬದಲಾಗಿ ಹೋಗಿದ್ದವು. ತಾವು ಮೊಲಗಳಾಗಿದ್ದೆವು ಎಂಬುದು ಅವುಗಳಿಗೆ ನೆನಪೇ ಇರಲಿಲ್ಲ. ಅವರ ಜೀವತಂತುಗಳಲ್ಲಿ ನುಸುಳಿ ಬಂದ ಒಂದೇ ಒಂದು ನೆನಪು ಎಂದರೆ 'ಕೆಂಚುಗೂದಲಿನ ಮಾನವನಿಗೆ ಕಪ್ಪವನ್ನು ಸಲ್ಲಿಸುವುದು.' ಇದಕ್ಕೆ ವಿರುದ್ಧವಾಗಿ ಆ ಕೆಂಚುಗೂದಲಿನ ಮೊಲವು ಕೆಂಚುಗೂದಲ ಮಾನವನಾಗಿ ವಿಕಾಸ ಹೊಂದಿದಾಗ, 'ಪ್ರಜೆಗಳ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು' ಎಂಬುದು ಅವನ ಜೀವತಂತುಗಳಿಂದ ಅಳಿಸಿ ಹೋಗಿತ್ತು!

ಕಪ್ಪ ಕಾಣಿಕೆಗಳನ್ನು ಸಲ್ಲಿಸಲು ಮಾನವರಾಗಿ ವಿಕಸನ ಹೊಂದಿದ ಮೊಲಗಳಿಗೆ ಯಾವುದೇ ತಕರಾರು ಇಲ್ಲದಿದ್ದಾಗ, ಕೆಂಚುಗೂದಲಿನ ಮಾನವನಿಗೆ ಅವನ್ನು ಒಪ್ಪಿಸಿಕೊಳ್ಳುವುದೇನು ಕಷ್ಟ! ಅವನು ತಾನು ಪಡೆಯುವ ಕಪ್ಪ ಕಾಣಿಕೆಗಳ ವೈವಿಧ್ಯವನ್ನು ಕಾಲಕಾಲಕ್ಕೆ ಹೆಚ್ಚಿಸಿಕೊಂಡು, ತನ್ನ ಅರಮನೆಯಲ್ಲಿ ಸುಖದ ಸುಪ್ಪತ್ತಿಗೆಯಲ್ಲಿ ಕಾಲಕಳೆಯುತ್ತಾ ಸುಖವಾಗಿದ್ದನು.

**ನೀತಿ : ಕೆಂಚುಗೂದಲನ್ನು ಉಳ್ಳವರಿಂದ ದೂರವಿರುವುದು ವಾಸಿ.**

■

ಪಮ್ಮಿ : ಇವತ್ತು ನಮ್ಮಪ್ಪ, ನಿಂಗೆ ಗಂಡು ಹುಡುಕಲು ಶುರು ಮಾಡ್ತೀನಿ. ಅಕಸ್ಮಾತ್ ನಿನ್ನ ಮನಸ್ಸಿನಲ್ಲಿ ಯಾರಾದರೂ ಇದ್ದರೆ ಹೇಳು ಅಂದರು.

ಪರಮೇಶಿ : (ಖುಷಿಯಿಂದ) ನನ್ನ ಹೆಸರು ಹೇಳಿದೆ ತಾನೇ ?

ಪಮ್ಮಿ : ಗಂಡನಾಗೋ ಹೆಸರು ಬಾಯಲ್ಲಿ ಹೇಳಬಾರದೆಂದು ನಮ್ಮಜ್ಜಿ ಹೇಳ್ತಿದ್ರು. ಅದಕ್ಕೆ ಹೇಳಲಿಲ್ಲ.

ಪಗಮೇಶಿ : ಅಯ್ಯೋ ಪೆದ್ದೆ, ಹಾಗಾದ್ರೆ ನಿಂಗೆ ಬೇರೆಗಂಡು ಹುಡಕ್ತಾರಷ್ಟೆ ..!

# ಮೂಲಂಗಿರಾಜಾ ಪ್ರಕರಣ !

ಚಿತ್ರಾ ರಾಮಚಂದ್ರನ್

ಬೇಸಿಗೆಯಲ್ಲೂ ಮೈಕೊರೆಯುವ ಛಳಿಯ ಸಂಜೆ. ನಾನು ಸೋಫಾದ ಮೇಲೆ ಒರಗಿ ಬಾನು ಮುಷ್ತಾಕ್ ಅವರ 'ಹಸೀನಾ ಮತ್ತು ಇತರ ಕಥೆಗಳು' ಪುಸ್ತಕದ ಪುಟಗಳನ್ನು ತಿರುವುತ್ತಿದ್ದೆ. ಅಡುಗೆಮನೆಯಲ್ಲಿ ಸರೋಜಮ್ಮ ಮಾಡುತಿದ್ದ ಬದನೇಕಾಯಿ ಎಣ್ಣೆಗಾಯ ಘಮ ಘಮ ನಮ್ಮ ಕೋಣೆಗೂ ಹರಡಿತ್ತು. ಬೆಳ್ಳಂಬೆಳಿಗ್ಗೆ ಹೊರಗೆ ಹೋದ ಮಹರಾಯನ ಸುಳಿವೇ ಇಲ್ಲವಲ್ಲ ಎಂದು ಯೋಚಿಸುತ್ತಿದ್ದೆ. ಅಷ್ಟರಲ್ಲಿ ಬಾಗಿಲಿನ ಕರೆಗಂಟೆ ಕಿಚಿಕಿಚಿ ಶಬ್ದ ಮಾಡಿತು. ನಾನೇ ಹೋಗಿ ಬಾಗಿಲು ತೆರೆದೆ. ಶರಲೇಖ ಒಳಗೆ ಬಂದ. ಏನೂ ಮಾತನಾಡದೆ ಸ್ನಾನ ಮಾಡಿ ಬಟ್ಟೆ ಬದಲಿಸಿ ಬಂದ. ಸರೋಜಮ್ಮ ಬಡಿಸಿದ ರುಚಿಯಾದ ಬಿಸಿ ಬಿಸಿ ಅಕ್ಕಿ ರೊಟ್ಟಿ ಮತ್ತು ಎಣ್ಣೆಗಾಯನ್ನು ಇಬ್ಬರೂ ಮೌನವಾಗಿ ಸವಿದೆವು. ನಂತರ ಶರಲೇಖ ಟಿವಿ ಆನ್ ಮಾಡಿ ಸೋಫಾದಮೇಲೆ ಮೈಚೆಲ್ಲಿದ.

"ಉಳ್ಳಾಗಡ್ಡಿ ನಿನಗೆ ಫೋನ್ ಮೇಲೆ ಫೋನ್ ಮಾಡುತ್ತಲೇ ಇದ್ದರು. ನಾನೂ ಟ್ರೈ ಮಾಡಿದೆ. ಫೋನ್ ಸ್ವಿಚ್ ಆಫ್ ಮಾಡಿ ಎಲ್ಲಿಗೆ ಹೋಗಿದ್ದೆಯೋ ?" ನನ್ನ ಕಿರಿಕಿರಿ ವ್ಯಕ್ತಪಡಿಸಿದೆ. ಕಣ್ಣು ಮುಚ್ಚಿ ಧ್ಯಾನ ಮಾಡುವವನಂತೆ ಐದು ನಿಮಿಷ ಕುಳಿತಿದ್ದ ಶರಲೇಖ.

"ಇರಲಿ ! ಉಳ್ಳಾಗಡ್ಡಿ ಯಾಕೆ ಫೋನ್ ಮಾಡಿದರು ಹೇಳು. ಏನು ಸಮಾಚಾರ?"

"ಅದೊಂದು ವಿಚಿತ್ರ ಕಥೆ ಎಂದರು. ಸಾಹೇಬರಿಗೆ ತುರ್ತಾಗಿ ನಮ್ಮ ಸಹಾಯ ಬೇಕಿದೆಯಂತೆ. ನಾಳೆ ಬೆಳಿಗ್ಗೆ ಸಾಹೇಬರ ಕಾರು ನಮ್ಮನ್ನ ಪಿಕಪ್ ಮಾಡುತ್ತದಂತೆ. ಅವರ ಬಂಗಲೆಗೆ ಹೋದಮೇಲೆ ಅವರೇ ವಿಷಯ ತಿಳಿಸುತ್ತಾರಂತೆ."

ಮಾರನೆಯ ಬೆಳಗಿನ ಉಪಹಾರವನ್ನು ಮುಗಿಸಿ ತಯಾರಾಗಿದ್ದ ನಮ್ಮನ್ನು ಸಾಹೇಬರ ಕಾರು ಪಿಕಪ್ ಮಾಡಿತು. ಟ್ರಾಫಿಕ್ ಗಡಿಬಿಡಿ, ಪಾಟ್ ಹೋಲ್ಸ್, ಡೈವರ್ಷನ್ಗಳು, ನೀರಲ್ಲಿ ಮುಳುಗಿದ್ದ ರಸ್ತೆಗಳು ಎಲ್ಲವನ್ನೂ ನಿಭಾಯಿಸಿಕೊಂಡು ಸಾಹೇಬರ ಭವ್ಯವಾದ ಬಂಗಲೆಯನ್ನು ತಲುಪಿತು ಕಾರು. ಸಾಹೇಬರು ಆದರದಿಂದ ನಮ್ಮನ್ನು ಬರಮಾಡಿಕೊಂಡು ನೇರವಾಗಿ ವಿಷಯಕ್ಕೆ ಬಂದರು.

"ಶೀಘ್ರದಲ್ಲೇ ನಮ್ಮ ಪಕ್ಷದ ಯುವ ಸೇನೆಗೆ ನನ್ನ ಮಗನನ್ನು ನಾಯಕನನ್ನಾಗಿ ಘೋಷಿಸಲಿದ್ದೇನೆ. ರಾಜಕೀಯದಲ್ಲಿ ಕೊಡೋದು ಕೊಳ್ಳೋದು ಎಲ್ಲ ಸಹಜ ಎಂಬುದು ನಿಮಗೂ ತಿಳಿದಿದೆ. ನಮ್ಮ ಹಣಕಾಸು ವ್ಯವಹಾರಗಳೆಲ್ಲ ನಮ್ಮ ಫಾರ್ಮ್ ಹೌಸಲ್ಲಿ ನಡೆಯುತ್ತದೆ. ಅದೇ ವಿಷಯುವಾಗಿ ಖ್ಯಾತ ಉದ್ಯಮಿ ಒಬ್ಬರು ನನ್ನನ್ನು ಭೇಟಿಯಾಗುವುದಿತ್ತು. ಈ ವ್ಯವಹಾರಗಳಲ್ಲಿ ಪಳಗಲಿ ಎಂದು ಫಾರ್ಮ್ ಹೌಸಿಗೆ ನನ್ನ ಮಗನನ್ನೂ ಕರೆದುಕೊಂಡು ಹೋಗಿದ್ದೆ. ಸೂಟ್ಕೇಸನ್ನು ಅವನಕೈಗೆ ಕೊಡುವಂತೆ ವಿನಂತಿಸಿಕೊಂಡೆ. ಅವನು ಕೈ ಚಾಚಿ 'ಮೂಲಂಗಿ ಕೊಡಿ' ಎಂದಾಗ ಎಲ್ಲರಿಗೂ ಅಚ್ಚರಿ.

"ಸ್ಮಾರ್ಟ್ ಬಾಯ್ ! ಮನಿ ಮ್ಯೂಲಿಂಗಿಗೆ 'ಮೂಲಂಗಿ' ಎಂಬ ಹೊಸ ಕೋಡ್ ವರ್ಡ್ ಕಾಯಿನ್ ಮಾಡಿರುವರಲ್ಲ ಚಿಕ್ಕ ಸಾಹೇಬರು ?' ಎನ್ನುತ್ತ ಅವರು ನಕ್ಕರು. ಅಂದು ಅದೊಂದು ತಮಾಷೆ ಅನ್ನಿಸಿತ್ತು. ಆದರೆ ದಿನಕಳೆದಂತೆ ಅವನ ಮೂಲಂಗಿ

ಬೇಡಿಕೆ ತೀವ್ರವಾಗ ತೊಡಗಿತು. ಪಾರ್ಟಿಗೆ ಹಣ ನೀಡಲು ಬರುವವರಿಂದ ಮೂಲಂಗಿ ವಸೂಲಿ ಮಾಡುವುದು ಕಡ್ಡಾಯವಾಗಿಬಿಟ್ಟಿದೆ. ನಮ್ಮ ಕುಟುಂಬ ವೈದ್ಯರು ಅವನನ್ನು ಪರೀಕ್ಷೆ ಮಾಡಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಅವನಿಗೆ ಯಾವ ಸಮಸ್ಯೆಯೂ ಇಲ್ಲ ಎಂದು ಸರ್ಟಿಫೈ ಮಾಡಿದ್ದಾರೆ. ಅವನ ವರ್ತನೆಗೆ ಬೇರೇನು ಕಾರಣ ಎಂಬುದನ್ನು ನೀವು ಪತ್ತೆ ಮಾಡಬೇಕು. ನಿಮ್ಮಿಬ್ಬರ ಸಾಹಸಗಳ ಬಗ್ಗೆ ಬಹಳಷ್ಟು ಕೇಳಿದ್ದೇನೆ. ನಮ್ಮ ಸಮಸ್ಯೆಯನ್ನು ಬಗೆಹರಿಸುತ್ತೀರಾ ಎಂಬ ಭರವಸೆ ಇದೆ. ಆದರೆ ಈ ವಿಷಯ ಜಗಜಾಹೀರಾತು ಆಗಬಾರದು. ಮುಖ್ಯವಾಗಿ ಮೀಡಿಯಾ ಮತ್ತು ವಿರೋಧ ಪಕ್ಷದವರಿಗೆ ಸಣ್ಣ ಸುಳಿವೂ ಸಿಕ್ಕಬಾರದು."

"ನಿಮ್ಮ ಮಗನನ್ನು ಒಮ್ಮೆ ನೋಡಿ ಮಾತಾಡಬೇಕಲ್ಲ ?" ಎಂದ ಶರಲೇಖ.

"ಇತ್ತೀಚಿಗೆ ಅವನಿಗೆ ಮನೆಗಿಂತ ಫಾರ್ಮ್ ಹೌಸಿನಲ್ಲಿ ಇರುವುದು ಇಷ್ಟವಾಗಿದೆ. ನನ್ನ ಶ್ರೀಮತಿಯವರೂ ಅಲ್ಲೇ ಇದ್ದಾರೆ. ನನ್ನ ಕಾರಲ್ಲೇ ನೀವು ಅಲ್ಲಿಗೆ ಹೋಗಬಹುದು. ಅವನ ಮೂಲಂಗಿ ಹುಚ್ಚು ಬಿಡಿಸುವ ಜವಾಬ್ದಾರಿಯನ್ನು ನಿಮಗೆ ವಹಿಸಿರುವೆ. ಚುನಾವಣೆ ಹತ್ತಿರವಾಗುತ್ತಿದೆ. ವಿಷಯ ಗುಪ್ತವಾಗಿರಲಿ. ಕಚೇರಿಯಲ್ಲಿ ಮುಖ್ಯವಾದ ಒಂದು ಮೀಟಿಂಗ್ ಇದೆ. ನಾನು ಹೊರಡುವೆ." ಎನ್ನುತ್ತ ಲಗುಬಗೆಯಿಂದ ಎದ್ದು ನಿಂತರು ಸಾಹೇಬರು.

ನಾವು ಮತ್ತೆ ಸಾಹೇಬರ ಕಾರು ಹತ್ತಿ ಫಾರ್ಮ್ ಹೌಸಿಗೆ ಪ್ರಯಾಣ ಬೆಳೆಸಿದೆವು. ಬಂಗಲೆಯಿಂದ ಫಾರ್ಮ್ ಹೌಸ್ ಇಪ್ಪತ್ತು ಕಿಲೋಮೀಟರು ದೂರದಲ್ಲಿತ್ತು. ಕಚ್ಚಾ ಮಣ್ಣಿನ ರಸ್ತೆಯಲ್ಲಿ ಪಯಣಿಸಿ ಫಾರ್ಮ್ ಹೌಸ್ ಸೇರಿದಾಗ ಮಧ್ಯಾಹ್ನ ಹನ್ನೆರಡು ಗಂಟೆ. ಶ್ರೀಮತಿಯವರು ನಮ್ಮನ್ನು ಬಹು ಆದರದಿಂದ ಸ್ವಾಗತಿಸಿ ಮೊದಲು ಊಟಕ್ಕೆ ಎಬ್ಬಿಸಿಬಿಟ್ಟರು. ಊಟದ ನಂತರ ಆಕೆ ತಮ್ಮ ಸಮಸ್ಯೆಯನ್ನು ನಮ್ಮ ಮುಂದಿಟ್ಟರು.

"ಹಲವು ಪೂಜೆಗಳು ಮತ್ತು ವ್ರತಗಳನ್ನು ಆಚರಿಸಿದ ಮೇಲೆ ಹುಟ್ಟಿದ ಮಗು ನಮ್ಮ ಚಿನ್ನು. ತಂದೆಯ ಇಚ್ಚೆಯಂತೆ ವಿದೇಶದ ಯೂನಿವರ್ಸಿಟಿಯಲ್ಲಿ ಎಂ.ಎಸ್. ಇನ್ ಪೊಲಿಟಿಕಲ್ ಸೈನ್ಸ್ ಮಾಡಿ ಬಂದ. ಇದ್ದಕ್ಕಿದ್ದಂತೆ ಮೂಲಂಗಿ ಕೇಳಿ ಪಡೆಯೋ ಗೀಳು ಯಾಕೆ ಶುರುವಾಯಿತು, ಹೇಗೆ ಶುರುವಾಯಿತು ? ಒಂದೂ ಅರ್ಥವಾಗುತ್ತಿಲ್ಲ." ಧೀರ್ಘವಾಗಿ ಉಸಿರೆಳೆದರು ಶ್ರೀಮತಿಯವರು.

"ಮ್ಯಾಡಂ, ತಪ್ಪು ತಿಳಿಯಬೇಡಿ ! ದುರಭ್ಯಾಸ ಏನಾದರೂ ಇದ್ದರೂ ಯಾವ ವಿಷಯವನ್ನೂ ಮುಚ್ಚಿಡದೆ ನಿಮ್ಮ ಮಗನ ಬಗ್ಗೆಗಿನ ಸಂಪೂರ್ಣ ವಿವರಗಳನ್ನು ಹೇಳಿ. ತನಿಖೆ ನಡೆಸಿ ನಿಮ್ಮ ಸಮಸ್ಯೆಗೆ ಪರಿಹಾರ ಹುಡುಕಲು ಸುಲಭವಾಗುತ್ತದೆ." ಪೀಠಿಕೆಯೊಂದಿಗೆ ತನ್ನ ಮಾಹಿತಿ ಸಂಗ್ರಹಣ ಪ್ರಾರಂಭಿಸಿದ ಶರಲೇಖ.

"ಬುದ್ಧಿವಂತ. ಸೌಮ್ಯ ಸ್ವಭಾವದವ. ಕುಡಿತ, ಡ್ರಗ್ಸ್, ರೇವ್ ಪಾರ್ಟಿ ಮುಂತಾದ ವಿಷಯಗಳಲ್ಲಿ ಎಳ್ಳಷ್ಟೂ ಆಸಕ್ತಿ ಇಲ್ಲ. ರೌಡಿಗಳ ಸಹವಾಸವಂತೂ ಇಲ್ಲವೇ ಇಲ್ಲ. ಒಂದು ನಾಯಿ ಬೊಗಳಿದರು ಸಹ ಹೆದರಿ ಮುದುಡಿ ಕುಳಿತುಬಿಡುವ ಸಾಧು ಸರ್ ನಮ್ಮ ಚಿನ್ನು."

"ನಿಮ್ಮ ಮಗನನ್ನು ಒಮ್ಮೆ ಮಾತಾಡಿಸಬೇಕಲ್ಲ."

ಚಿನ್ನು ಅಲಿಯಾಸ್ ಚಿಕ್ಕ ಸಾಹೇಬರಿಗೆ ತಂದೆಯವರ ಸ್ನೇಹಿತರೆಂದು ನಮ್ಮನ್ನು ಪರಿಚಯಿಸಿದರು ಶ್ರೀಮತಿಯವರು. ನಗುನಗುತ್ತ ಸಹಜವಾಗಿ ಮಾತನಾಡಿಸಿದ ಚಿಕ್ಕ ಸಾಹೇಬರ ವರ್ತನೆಯಲ್ಲಿ ಯಾವ ಕುಂದೂ ಕಾಣಿಸಲಿಲ್ಲ. ಶರಲೇಖಾ ನನ್ನ ಕಡೆ

ತಿರುಗಿ ನೋಡಿದ. ನಾನು ಮೆಲುದನಿಯಲ್ಲಿ ಅವನಿಗೆ ಮಾತ್ರ ಕೇಳುವಂತೆ "ಹಿಪ್ನೊಟೈಸ್" ಅಂದೆ.

ಇದೆಲ್ಲಾ ಆಗಿ ಒಂದು ತಿಂಗಳಾಯಿತು. ಬಿಡುವು ಮಾಡಿಕೊಂಡು ಸಿಂಗಪೂರಿನಲ್ಲಿದ್ದ ಮಗಳ ಮನೆಗೆ ಪ್ರವಾಸ ಹೋಗಿದ್ದ ಶರಲೇಖ ಅಂದು ಹಿಂದಿರುಗುತ್ತಿದ್ದ. ಕಾತುರದಿಂದ ಅವನಿಗಾಗಿ ಕಾಯುತ್ತ ಉಳ್ಳಾಗಡ್ಡಿಯೂ ನನ್ನ ಜೊತೆ ಕುಳಿತಿದ್ದರು. ಬಾಗಿಲ ಕರೆಗಂಟೆ ಟ್ರೆಣ್ ಗುಟ್ಟಿತು. ಬಾಗಿಲು ತೆರೆದು ನೋಡಿದರೆ ಶರಲೇಖ. ಖುಷಿಯಿಂದ ಕೈ ಕುಲುಕಿ ಅವನನ್ನು ಸ್ವಾಗತಿಸಿದೆವು.

ಸರೋಜಮ್ಮ ರುಚಿ ರುಚಿಯಾಗಿ ಮಾಡಿದ್ದ ಸ್ಪೆಷಲ್ ಅಡುಗೆಯನ್ನು ಸವಿಯುತ್ತ ಇಡೀ ತಿಂಗಳ ಆಗುಹೋಗುಗಳನ್ನು ಹಂಚಿಕೊಂಡೆವು.

"ಚಿಕ್ಕ ಸಾಹೇಬರ ಪಟ್ಟಾಭಿಷೇಕ ವಿಜೃಂಭಣೆಯಿಂದ ನಡೆದಿರುವ ಹಾಗಿದೆ ! ಏರ್ ಪೋರ್ಟಿನಿಂದ ಅರಮನೆ ಮೈದಾನದ ವರೆಗೂ ಅವರದ್ದೇ ಪೋಸ್ಟರ್ಗಳು !"

"ನಿಮಗೂ ಆಹ್ವಾನ ಪತ್ರಿಕೆ ಕಳುಹಿಸಿದ್ರು ಸಾಹೇಬರು ! ನೀವಾದರೋ ನಿಲ್ಲದೆ ಸಿಂಗಾಪುರಕ್ಕೆ ಹೊಂಟ್ಬಿಟ್ರಿ. ಚಿಕ್ಕ ಸಾಹೇಬರಿಗೆ ಏನಾಗಿತ್ತು ? ಅದು ಹ್ಯಾಂಗೆ ಪತ್ತೆ ಹಚ್ಚಿದ್ರಿ? ಹ್ಯಾಂಗೆ ಪರಿಹರಿಸಿದ್ರೀ ?" ಉಳ್ಳಾಗಡ್ಡಿ ಕುತೂಹಲದಿಂದ ಪ್ರಶ್ನಿಸಿದರು.

ನಾನು ಶರಲೇಖನನ್ನು ನೋಡಿದೆ. ಎಂದಿನಂತೆ ಆತ ತನ್ನ ವಿವರಣೆಯನ್ನು ನೀಡಲು ಮುಂದಾದ. ಹುಡುಗನ ಮೂಲಂಗಿ ಹುಚ್ಚನ್ನು ಬಿಡಿಸಿದ ರೀತಿಯನ್ನು ಹೇಳತೊಡಗಿದ.

"ಶ್ರೀಮತಿಯವರಿಂದ ಹುಡುಗನ ಬಗ್ಗೆಗಿನ ಸಂಪೂರ್ಣ ಮಾಹಿತಿ ಸಂಗ್ರಹ ಮಾಡಿದೆವು. ಹುಡುಗನನ್ನು ಭೇಟಿಯಾಗಿ ಲೋಕಾಯತವಾಗಿ ಮಾತನಾಡಿಸಿದೆವು. ಅವನಲ್ಲಿ ಯಾವ ಕುಂದು ಕೊರತೆ ಕಾಣಿಸಲಿಲ್ಲ. 'ಹಿಪ್ನೊಟೈಸ್' ಎಂದು ವತ್ಸನ ಪಿಸುಗುಟ್ಟಿದ. ಮನಸ್ಸನ್ನು ಜಾಗೃತಗೊಳಿಸಿ ಅವನ ಮನದಾಳದ ಮಾತನ್ನು ಹೊರ ತೆಗೆಯಲು ಬೇರೆ ಮಾರ್ಗವಿಲ್ಲ. ಶ್ರೀಮತಿಯವರ ಒಪ್ಪಿಗೆ ಪಡೆದು, ಅವನನ್ನು ಸೋಪಾದ ಮೇಲೆ ಮಲಗಿಸಿ ಹಿಪ್ನೊಟೈಸ್ ಮಾಡಿದೆ. ಆತ ಹಿಪ್ನಾಟಿಕ್ ನಿದ್ರೆಯ ಸ್ಥಿತಿಯನ್ನು ತಲುಪಿದ" ಎಂದು ನಿಲ್ಲಿಸಿದ ಶರಲೇಖ.

"ಶರಲೇಖನ ಪ್ರಶ್ನೆಗಳಿಗೆಲ್ಲ ಉತ್ತರಿಸಿದ ಹುಡುಗ. ಅವನು ನಿದ್ರೆಯ ಸ್ಥಿತಿಯಲ್ಲಿ ಹೇಳಿದ್ದನ್ನೆಲ್ಲ ನಾನು ಫೋನಲ್ಲಿ ರೆಕಾರ್ಡ್ ಮಾಡಿಕೊಂಡೆ. ಮನೆ ಸೇರಿದಮೇಲೆ ರೆಕಾರ್ಡ್ ಮಾಡಿಕೊಂಡದ್ದನ್ನು ಮತ್ತೊಮ್ಮೆ ಕೇಳಿದಾಗ 'ಚಂದ್ರ ಪುಷ್ಕರಿಣಿ' ಎಂಬ ಒಂದು ಪದದ ಹೊರತಾಗಿ ಮಿಕ್ಕದ್ದೆಲ್ಲ ಅಸ್ಪಷ್ಟವಾಗಿತ್ತು." ಅಂದೆ.

"ಆ ಹೆಸರಿನ ಸರೋವರವನ್ನು ಎಲ್ಲಿ ಹುಡುಕುವುದು ಎಂದು ಯೋಚಿಸಿದಾಗ ವತ್ಸನನ ಸ್ನೇಹಿತ ಉದಯ ಅವರ ನೆನಪಾಯಿತು. ಅವರನ್ನು ಸಂಪರ್ಕಿಸಿದಾಗ ಬೆಂಗಳೂರಿನ ಐತಿಹಾಸಿಕ ಕೆರೆಗಳ ನಕ್ಷಾ ಪಠವನ್ನು ಕಳುಹಿಸಿದರು. 'ಬಹಳಷ್ಟು ಕೆರೆಗಳೆಲ್ಲ ಈಗ ವಸತಿ ಕಟ್ಟಡಗಳಾಗಿರುವುದರಿಂದ ಚಂದ್ರ ಪುಷ್ಕರಿಣಿಯನ್ನು ಪತ್ತೆ ಮಾಡುವುದು ಕಷ್ಟವೇ. ಚಂದ್ರ ಪುಷ್ಕರಿಣಿ ಎಂಬ ಉಲ್ಲೇಖವಿರುವ ಶೀಲಾಶಾಸನ ಎಲ್ಲಾದರೂ ಸಿಕ್ಕರೆ ನಿಮಗೆ ತಿಳಿಸುವೆ' ಎಂದರು." ಎಂದ ಶರಲೇಖ.

ಫೋನಲ್ಲಿ ರೆಕಾರ್ಡ್ ಮಾಡಿದ್ದ ಮಾತನ್ನು ಮತ್ತೆ ಮತ್ತೆ ಪ್ಲೇ ಮಾಡಿದಾಗ ಮೂಲಂಗಿ ಮಹಾರಾಜ ಎಂಬ ಹೆಸರು ಕೇಳಿಸಿದಂತಿತ್ತು. ನನ್ನ ಮಾತು ಕೇಳಿ ಶರಲೇಖನ

ಮುಖದಲ್ಲಿ ಏನೋ ಗೆದ್ದಂತಹ ನಗು ಮೂಡಿತು.

"ನಾವು ಕೂಡಲೇ ಚಂದ್ರ ಪುಷ್ಕರಿಣಿಗೆ ಹೊರಡೋಣ." ಎಂದ. ನನಗೋ ಅಚ್ಚರಿ.

"ಕೇಶವರಾವ್ ಎಂಬಾತ ಕಾಲ ಯಾನ ಮಾಡಿ ಬಂದು ನಮ್ಮ ಸಹಾಯ ಕೇಳಿದ್ದನಲ್ಲ." ಎಂದು ಜ್ಞಾಪಿಸಿದ ಶರಲೇಖ.

ಬೆಳಗಿನ ಜಾವ ಐದು ಗಂಟೆಗೆ ಕೇಶವರಾವನ್ನು ಆಹ್ವಾನಿಸಿದ ಶರಲೇಖ. ನೋಡುತ್ತಿದ್ದಂತೆಯೇ ರತ್ನ ಕಂಬಳಿಯ ಮೇಲೆ ಒಂದು ಕೆಂಪು ಬಣ್ಣದ ಉಂಗುರ ಕಾಣಿಸಿಕೊಂಡಿತು. ಸೈಕಲ್ ಟಯರಿನಂತೆ ಹಿಗ್ಗಿ ಸುಮಾರು ಆರು ಅಡಿಗಳಷ್ಟು ಮೇಲಕ್ಕೆದ್ದು ನಿಂತಿತು. ಕೆಳಭಾಗದಲ್ಲಿ ತೆಳುವಾದ ಮಂಜಿನ ಕಂಬವೊಂದು ಸೃಷ್ಟಿಯಾಯಿತು. ಕೇಶವರಾವ್ ಪ್ರತ್ಯಕ್ಷವಾದರು. ಅವರ ಸಹಾಯದೊಂದಿಗೆ ಚಂದ್ರ ಪುಷ್ಕರಿಣಿ ಎಂಬ ಸರೋವರದ ಮೂಲಂಗಿ ಮಹಾರಾಜರನ್ನು ಕಾಣಬೇಕು ಎಂದ ಶರಲೇಖ. ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ನಾವು ಕಾಡಲ್ಲಿದ್ದ ಒಂದು ಸರೋವರದ ಬಳಿ ಇದ್ದೆವು. ಸುತ್ತಮುತ್ತ ನೋಡಿದಾಗ ಮೊಲಗಳ ಹಿಂಡೊಂದು ಆನೆಗಳ ತುಳಿತಕ್ಕೆ ಒಳಗಾಗಿ ನಾಶವಾಗಿದ್ದ ತಮ್ಮ ಸಹಪಾಠಿಗಳಿಗಾಗಿ ರೋದಿಸುತ್ತಿದವು. ಒಂದು ಕೆಂಚು ಕೂದಲಿನ ಮೊಲ "ಯೋಚನೆ ಬೇಡಿ . ನಾನು ಎಲ್ಲ ನೋಡಿಕೊಳ್ಳುವೆ." ಎಂದಿತು.

ಗುಡ್ಡದಮೇಲೆ ನಿಂತು 'ಹೇ ಆನೆಗಳೇ ಈ ಸರೋವರದ ಒಡೆಯ ಚಂದ್ರನು ನಿಮಗೆ ಎಚ್ಚರಿಕೆ ನೀಡಿರುವನು. ನೀವೆಲ್ಲ ಈ ಪುಷ್ಕರಿಣಿಯನ್ನು ಕಲುಷಿತಗೊಳಿಸಿರುವಿರಿ. ಇಂದು ರಾತ್ರಿಯೇ ಈ ಜಾಗ ಬಿಟ್ಟು ಹೋಗದಿದ್ದರೆ ನಿಮ್ಮೆಲ್ಲರನ್ನೂ ಕೊಂದು ಹಾಕುತ್ತಾನೆ.' ಆನೆಗಳೆಲ್ಲ ಹೆದರಿ ಪಲಾಯನಗೈದವು. ಮೊಲಗಳೆಲ್ಲ ಸಂತೋಷದಿಂದ 'ಕೆಂಚು ಕೂದಲ ಮಹಾರಾಜನಿಗೆ ಜೈ' ಎಂದು ಕೂಗಿದವು. 'ನಿಮ್ಮನ್ನು ಸುಭಿಕ್ಷವಾಗಿಟ್ಟಿರುವುದು ನನ್ನ ಜವಾಬ್ದಾರಿ. ನೀವುಗಳೆಲ್ಲ ಪ್ರತಿಯೊಬ್ಬರೂ ಪ್ರತಿದಿನವೂ ಒಂದೊಂದು ಮೂಲಂಗಿಯನ್ನು ನನಗೆ ತೆರಿಗೆ ಕೊಡಬೇಕು.' ಎಂದಿತು ಕೆಂಪು ಕೂದಲಿನ ಮೊಲ. ಎಲ್ಲ ಮೊಲಗಳೂ ಒಪ್ಪಿ ತಲೆದೂಗಿದವು.

ಆ ದೃಶ್ಯ ನೋಡಿದನಂತರ ಕೇಶವರಾವ್ ಅವರ ಸಹಾಯದೊಂದಿಗೆ ಪ್ರಸ್ತುತಕ್ಕೆ ಹಿಂದಿರುಗಿದೆವು. ಚಿಕ್ಕ ಸಾಹೇಬರು ಪೂರ್ವ ಜನ್ಮದಲ್ಲಿ ಕೆಂಪು ಕೂದಲಿನ ಮೊಲವಾಗಿದ್ದರು. ಆ ಜನ್ಮದ ನೆನಪು ಆಗಿಂದಾಗ್ಗೆ ಅವರನ್ನು ಕಾಡುವುದೇ ಅವರ ವಿಚಿತ್ರ ವರ್ತನೆಗೆ ಕಾರಣ ಎಂದು ತಿಳಿಯಿತು. ಕೂಡಲೇ ಮತ್ತೊಮ್ಮೆ ಅವರನ್ನು ಹಿಪ್ನೊಟೈಸ್ ಮಾಡಿ, ಹಳೆಯ ನೆನಪುಗಳನ್ನು ಅವರ ಮನಸ್ಸಿನಿಂದ ತೆಗೆದು ಹಾಕಿದ ಶರಲೇಖ. ಎಂದು ಮುಗಿಸಿದೆ.

"ಅದೆಲ್ಲ ಖರೆ ಕಂಡ್ರೀ. ಮೊಲದ ಮಾತು ನಿಮಗೆ ಅದ್ಹ್ಯಾಂಗೆ ಅರ್ಥವಾಯಿತು?" ಆಶ್ಚರ್ಯದಿಂದ ಕೇಳಿದರು ಉಳ್ಳಾಗಡ್ಡಿ.

ಶರಲೇಖ ಎರಡು ನಿಮಿಷಗಳು ಸುಮ್ಮನೆ ಕುಳಿತ. "ಅಂದು ನನ್ನ ಫೋನ್ ಸ್ವಿಚ್ ಆಫ್ ಮಾಡಿ ಎಲ್ಲಿಗೆ ಹೋಗಿದ್ದೆ ಗೊತ್ತೇ ? ಕೊಡತಿಯಲ್ಲಿರುವ ಒಂದು ಬಹುರಾಷ್ಟ್ರ ಕಂಪೆನಿಯವರು ಏರ್ಪಡಿಸಿದ್ದ AI ಆಧಾರಿತ ಉಪಕರಣಗಳ ಪ್ರದರ್ಶನವಿತ್ತು. ಇಂಟರ್ಪ್ರಿಟರ್ ಎಂಬ AI ಆಧಾರಿತ ಸಣ್ಣ ಉಪಕರಣ ನನ್ನನ್ನು ಆಕರ್ಷಿಸಿತು. ಇದನ್ನು ಕಿವಿಗೆ ಹಾಕಿಕೊಂಡರೆ ಯಾರು ಯಾವ ಭಾಷೆಯಲ್ಲಿ ಮಾತನಾಡಿದರು ಅದನ್ನು ನಮಗೆ ಬೇಕಾದ ಭಾಷೆಯಲ್ಲಿ ಕೇಳಿಸಿಕೊಳ್ಳಬಹುದು. ನಮ್ಮ ಕಸುಬಿಗೆ

ಉಪಯುಕ್ತ ಅನ್ನಿಸಿತು. ಕೂಡಲೇ ಕೊಂಡುಕೊಂಡೆ. ಅದನ್ನು ಹಾಕಿಕೊಂಡೇ ಕಾಲ ಯಾನ ಮಾಡಿದೆ. ಮೊಲದ ಮಾತು ಅರ್ಥವಾಯಿತು." ಎಂದು ವಿವರಣೆ ನೀಡಿದ ಶರಲೇಖ.

ಉದಯ ಅವರು ಕರೆ ಮಾಡಿದರು. ಅಂದು ಚಂದ್ರ ಪುಷ್ಕರಿಣಿ ಇದ್ದ ಜಾಗದಲ್ಲೇ ಇಂದು ಸಾಹೇಬರ ಫಾರ್ಮ್ ಹೌಸ್ ಇದೆ ಎಂಬುದು ತಿಳಿಯಿತು. ಪುನರ್ಜನ್ಮದ ನೆನಪನ್ನು ಕೆರಳಿಸಿದ ಮತ್ತೊಂದು ವಿಷಯ ಚಿಕ್ಕ ಸಾಹೇಬರ ಕೆಂಪು ಕೂದಲು. ಚಿಕ್ಕ ಸಾಹೇಬರಿಗೆ ಬೇಗ ಗುಣವಾಗಲಿ ಎಂದು ಹರಕೆ ಹೊತ್ತು, ನಂಜನಗೂಡಿನಲ್ಲಿ ಮುಡಿ ಕೊಡಿಸಿದರು ಸಾಹೇಬರ ಶ್ರೀಮತಿಯವರು .

"ಶರಲೇಖರ ಆದೇಶದಂತೆ ಅನ್ನಿ ! ಖರೇ ಪತ್ತೇದಾರ ಅಂದ್ರ ನೀವೇನ್ರಪಾ !" ಎನ್ನುತ್ತ ಬಾಯಿ ಬಿಟ್ಟರು ಉಳ್ಳಾಗಡ್ಡಿ ! ■



ದಂನಆ

- ✓ ಯಾವುದಕ್ಕೂ ಈಜು ಕಲಿಯೋದು ಒಳ್ಳೆಯದು. ಏಕೆಂದರೆ ನಡುನೀರಿನಲ್ಲಿ ಕೈ ಬಿಡುವವರು ಹೆಚ್ಚು ಮಂದಿ ಇರುತ್ತಾರೆ.
- ✓ ಮಲಗಿದೆ ನಿದ್ದೆಯಲ್ಲಿ ಎಲ್ಲೆಲ್ಲೋ ಹೋಗಿ ಪುನಃ ಅಲ್ಲಿಯೇ ಎದ್ದೆ.
- ✓ ಲಾ ಅಂಡ್ ಆರ್ಡರ್. ವಿ ಹ್ಯಾವ್ ಲಾಸ್ ಬಟ್ ವೇರ್ ಈಸ್ ಆರ್ಡರ್?
- ✓ ಟಾನಿಕ್ ಶಕ್ತಿವರ್ಧಕ. ಆದ್ದರಿಂದ ಅದಕ್ಕೊಂದು ಮಹಾಪ್ರಾಣ ಸೇರಿಸಿ ಠಾನಿಕ್ ಎನ್ನಬೇಕು.
- ✓ ಲಕ್ಷ್ಮಣ ರೇಖೆ ಎಳೆಯುತ್ತಿದ್ದ ಸಮಯದಲ್ಲಿ ಅವನು ರೇಖೆಯ ಒಳಗಿದ್ದನೇ ಅಥವಾ ಹೊರಗಿದ್ದನೆ?
- ✓ ವೆದರ್ ಇಟ್ ಈಸ್ ದಿ ಬೆಸ್ಟ್ ಆಫ್ ದಿ ಟೈಂಸ್ ಆರ್ ದಿ ವರ್ಸ್ಟ್ ಆಫ್ ದಿ ಟೈಂಸ್ ಇಟ್ ಈಸ್ ದಿ ಓನ್ಲಿ ಟೈಂ ವಿ ಹ್ಯಾವ್ ಗಾಟ್.
- ✓ ಒಂದು ವಾಕ್ಯದಲ್ಲಿ 'ಜೀವನ ಎಂದರೆ ಏನು?' ಅಂತ ಬರೆಯಿರಿ ಎಂದರು ಮಾಸ್ತರರು. ಆತ ಬರೆದ: ಜೀವನ ಅಂದ್ರೆ ಒಂದು ವಾಕ್ಯ.
- ✓ ಬೇರೆಯವರ ಜೀವನ ನೋಡಿ ಕರಬುವಾಗ ಜಾಹೀರಾತಿನಲ್ಲಿರುವ ಪಿಜ್ಜಾವನ್ನು ಕಲ್ಪಿಸಿಕೊಳ್ಳಿ. ಅದು ಇರುವದಕ್ಕಿಂತ ಚೆನ್ನಾಗಿ ಕಾಣುತ್ತದೆ.
- ✓ ಟೈಂ ಈಸ್ ಫ್ರೀ ಬಟ್ ಇಟ್ ಈಸ್ ಪ್ರೈಸ್‌ಲೆಸ್. ಯು ಕೆನಾಟ್ ಓನ್ ಇಟ್ ಬಟ್ ಯು ಕೆನ್ ಯೂಸ್ ಇಟ್. ಯು ಕೆನಾಟ್ ಕೀಪ್ ಇಟ್ ಬಟ್ ಯು ಕೆನ್ ಸ್ಪೆಂಡ್ ಇಟ್. ಒನ್ಸ್ ಯು ಹ್ಯಾವ್ ಲಾಸ್ಟ್ ಇಟ್ ಯು ಕೆನ್ ನೆವರ್ ಗೆಟ್ ಇಟ್ ಬ್ಯಾಕ್.
- ✓ ಕೊಟ್ಟಿದ್ದನ್ನು ಮರೆಯುವುದು ನಿಜವಾದ ದಾನ. ಉಳಿದವುಗಳೆಲ್ಲ ಪಕ್ಕಾ ದಂಧೆ.
- ✓ ಮೋಸ ಅರಿವಾದಾಗ ಮೂರ್ಖನಾದೆ ಎಂದು ಚಿಂತಿಸಬೇಡ. ಸತ್ಯ ತಿಳಿಯತಲ್ಲ ಎಂದು ಸಂತೋಷಪಡು.
- ✓ ಯೆಸ್ಟರ್‌ಡೆ ಈಸ್ ನಾಟ್ ಅವರ್ಸ್ ಟು ರಿಕವರ್ ಬಟ್ ಟುಮಾರೊ ಈಸ್ ಅವರ್ಸ್ ಟು ವಿನ್ ಆರ್ ಲೂಸ್.
- ✓ ಗ್ರಹಗಳ ಸ್ಥಿತಿ ಮತ್ತು ದುಸ್ಥಿತಿ ಬಗ್ಗೆ ಹೇಳುವ ಜ್ಯೋತಿಷಿ ರೈಲು ಯಾವಾಗ ಬರುತ್ತದೆ ಎಂದು ತಿಳಿಯಲು ರೈಲ್ವೆ ವಿಚಾರಣೆ ಕೌಂಟರಿನಲ್ಲೇ ಕೇಳುತ್ತಾನೆ.
- ✓ ನಿನ್ನೊಳಗೆ ನೀನೇ ಹೊಕ್ಕು ನಿನ್ನ ನೀನೇ ಕಂಡು ನೀನೇ ನೀನಾಗು ಗೆಳೆಯ.
- ✓ ಇನ್ ವೇಕಿಂಗ್ ಎ ಟೈಗರ್ ಯೂಸ್ ಎ ಲಾಂಗ್ ಸ್ಟಿಕ್.
- ✓ ವೈರಿಯನ್ನು ಇಲ್ಲವಾಗಿಸಲು ಅವನ ತಲೆ ತೆಗೆಯಬೇಕಿಲ್ಲ. ಅವನನ್ನು ನಮ್ಮ ತಲೆಯಿಂದ ತೆಗೆದರೆ ಸಾಕು.
- ✓ ಕಷ್ಟದಲ್ಲಿದ್ದಾಗ ಮಾತ್ರ ನನ್ನನ್ನು ನೆನಪಿಸಿಕೊಂಡರು ಎಂದು ಮರುಗದಿರಿ. ಬದಲಿಗೆ ಹೆಮ್ಮೆ ಪಡಿ. ಏಕೆಂದರೆ ಅವರು ಕತ್ತಲಲ್ಲಿದ್ದಾಗ ನೀವು ಅವರಿಗೆ ಬೆಳಕಾಗಿ ಕಂಡಿರಿ.

■

# ಐಪೀಎಲ್ಲೂ, ಪಿಕಲ್ಲೂ

ಅಣಕು ರಾಮನಾಥ್

ಐಪಿಎಲ್‌ಯೆನೆ ಬಲು ರುಚಿಯಣ್ಣ ಸೂಪರು ಉಪ್ಪಿನಕಾಯಿ ಫ್ಲಾಪೇ ಆಗದು ಇಂಟ್ರೆಸ್ಟ್ ಇದರೊಳು ಇದುವೆ ರುಚಿಗಳ ತಾಯಿ ಎನ್ನುತ್ತಾ ಸೀನು ಒಳಬಂದ.

'ಎತ್ತಣ ಕ್ರಿಕೆಟ್ಟು, ಎತ್ತಣ ಪಿಕ್ಕಲಯ್ಯ! ಎನಗೆನಿಸುತಿಹುದು ನೀನೊರಿಜಿನಲ್ ತಿಕ್ಕಲಯ್ಯ!' ಎಂದೆ.

'ತೈಲವೇಂ ತಿಳಿದಿಹುದು ಆಂಬೊಡೆಯ ಸ್ವಾದವನು' ಎಂದು ಮೂತಿ ತಿವಿದ ಸೀನು 'ಪಿಕಲ್ ಬಡಿಸುವುದು ಯಾವಾಗ?' ಎಂದ.

'ಉಪ್ಪಿನ ನೈಬರ್ರೇ ಉಪ್ಪಿನಕಾಯಿ' ಎಂದೆ.

'ಉಪ್ಪಿನ ಬಣ್ಣ ಯಾವುದು?'

'ಫುಲ್ ವೈಟ್.'

'ಕ್ರಿಕೆಟ್ಟಿನಲ್ಲಿ ಮ್ಯಾಚ್ ಆರಂಭಿಸಲು ಮೊದಲು ಫೀಲ್ಡಿಗೆ ಇಳಿಯುವವರು ಯಾರು?'

'ಅಂಪೈರ್.'

'ಅವರು ತೊಡುವ ಕೋಟಿನ ಬಣ್ಣ ಯಾವುದು?'

'ಬಿಳಿ.'

'ಅಲ್ಲಿಗೆ ಸಾಲ್ಟ್:ವೈಟ್=ಕೋಟ್: ವೈಟ್ ಎಂಬ ಈಕ್ವೇಷನ್ ಮೂಡಿತಲ್ಲ.'

'ನೀನು ಹೇಳಹೊರಟಿರುವುದು ಉಪ್ಪಿನ ಬಗ್ಗೆ ಅಲ್ಲ.'

'ಉಪ್ಪಿನಕಾಯಿ ಮೊದಲ ಬ್ಯಾಟ್ಸ್‌ಮನ್ ಇದ್ದಂತೆ. ಅದೂ ಅಂತಿಂತಹ ಓಪನರ್ ಅಲ್ಲ, ಗಾವಸ್ಕರ್ ತರಹದ ಓಪನರ್ ಇದ್ದಂತೆ.'

'ಅದು ಹೇಗೆ?'

'ಮೊದಲು ಸ್ಕ್ರೀಸಿಗೆ ಓಪನರ್ ಆಗಿ ಇಳಿಯುವ ಪಿಕಲ್ ಹುಳಿ, ಸಾರು, ಸಾಂಬಾರುಗಳೊಡನೆ ಪಾರ್ಟ್‌ನರ್‌ಶಿಪ್ ಬೆಳೆಸುವವರೆಗೆ ಇರುತ್ತದೆ. ಕೆಲವರು ಒಬ್ಬಟ್ಟಿಗೂ ಉಪ್ಪಿನಕಾಯಿ ನೆಂಜಿಕೊಳ್ಳುತ್ತಾರೆ. ಅಂತಹ ಸಂದರ್ಭಗಳು ಓಪನರ್ ಆದವನು ಸೆವೆನ್ ಡೌನ್ ಬಂದವನೊಡನೆ ಪಾರ್ಟ್‌ನರ್‌ಷಿಪ್ ಬೆಳೆಸುವುದಕ್ಕೆ ಸಮ.'

'ಹೌವ್ವೋ?'

'ಓಪನರ್ಸ್ ಪಿಕಲ್ ಮತ್ತು ಕೋಸಂಬರಿಗಳು. ಒನ್ ಡೌನ್ ಪಲ್ಯ; ಟೂ ಡೌನ್ ತೊವ್ವೆ; ತ್ರೀ ಡೌನ್ ಗೊಜ್ಜು. ಫೋರ್ ಡೌನ್ ಪಾಯಸ; ಫೈವ್ ಡೌನ್ ಕೂಟು/ಹುಳಿ; ಸಿಕ್ಸ್ ಡೌನ್ ಸಾರು; ಸೆವೆನ್ ಡೌನ್ ಒಬ್ಬಟ್ಟು.'

'ಬಿಸಿಬೇಳೆಬಾತ್ ಮಾಡಿದ ಸಮಯದಲ್ಲಿ ಫೈವ್ ಡೌನ್ ಇರಲ್ಲವಲ್ಲ?' ಥಿಯರಿಯಲ್ಲೊಂದು ದೋಷ ಕಂಡುಹಿಡಿದರೆ ಮನಕ್ಕೆ ಅಮಿತ ಉಲ್ಲಾಸ.

'ಮೊಸರನ್ನದ ಜೊತೆ ತಿನ್ನುವರಲ್ಲ, ಅದನ್ನು ಹೇಗೆ ವರ್ಣಿಸುವೆ?'

'ಕ್ಯಾರೀಡ್ ದ ಬ್ಯಾಟ್' ಎಂದು! ಓಪನಿಂಗ್ ಬಂದವನು ಕೊನೆಯವರೆಗೂ ಇದ್ದು ಔಟಾಗದಿದ್ದರೆ 'ಹಿ ಕ್ಯಾರೀಡ್ ದ ಬ್ಯಾಟ್' ಎಂದೇ ಹೇಳುವುದು.'

'ಆದರೆ ಉಪ್ಪಿನಕಾಯನ್ನು ತಿಂದುಬಿಡುವರಲ್ಲ. ಅದು ನಾಟೌಟ್ ಹೇಗಾದೀತು?'

'ಗಾಯ ವಾಸಿಯಾದರೂ ಕಲೆ ಉಳಿಯುವಂತೆ ಹೋಳು ಖಾಲಿಯಾದರೂ ರಸದ ಕೆಂಪು ಬಣ್ಣ ಕೊಂಚ ಮೂಲೆಯಲ್ಲಿರುತ್ತದೆ. ಆದ್ದರಿಂದ ಅದನ್ನು ನಾಟೌಟ್ ಎಂದೇ ಪರಿಗಣಿಸಬೇಕು.'

'ನೆಕ್ಕಿ ತಿನ್ನುವವರಿರುತ್ತಾರಲ್ಲ!' ನಾನು ಪಟ್ಟು ಬಿಡಲಿಲ್ಲ.

'ಅಂತಹ ಸಮಯದಲ್ಲಿ ಮಾತ್ರ ಲಾಸ್ಟ್ ಮ್ಯಾನ್ ಔಟ್ ಎಂಬ ಕೀರ್ತಿಗೆ ಭಾಜನವಾಗುತ್ತದೆ' ಗಹಗಹಿಸಿದ ಸೀನು.

'ಉಪ್ಪಿನಕಾಯಿಯನ್ನು ಮೊದಲೇ ತಿಂದರೆ?'

'ಓಪನರ್‌ಗಳು ಕೆಲವೊಮ್ಮೆ ಝೀರೋ ಹೊಡೆಯುತ್ತಾರಲ್ಲ!'

'ಕ್ರಿಕೆಟ್ ಎಂದರೆ ಟೀಮ್ ಸೆಲೆಕ್ಷನ್ ಕಾಲದಿಂದಲೇ ಶುರುವಾಗುವುದು. ನಿನ್ನ ಉಪ್ಪಿನಕಾಯಿಗೆ ಆ ಸಮಯದಲ್ಲಿ ಪ್ರಾಶಸ್ತ್ಯವಿದೆಯೆ?' ನನ್ನ ವಾದದ ದಿಕ್ಕನ್ನು ಬದಲಿಸಿದೆ.

'ಇದೆ. ಮಾವಿನಕಾಯಿ, ನಿಂಬೆಕಾಯಿ, ಅಮಟೆಕಾಯಿ ಮೊದಲಾದವು ವಿವಿಧ ಐಪಿಎಲ್ ತಂಡಗಳಿದ್ದಂತೆ. ತಂಡದ ಮಾಲಿಕರು ತಮಗೆ ಬೇಕಾದ ಆಟಗಾರರನ್ನು ಹರಾಜಿನಲ್ಲಿ ಕೊಳ್ಳುವಂತೆಯೇ ಉಪ್ಪಿನಕಾಯಿಗೆ ಯೋಗ್ಯವಾದ ಕಾಯಿಗಳನ್ನು ಹರಾಜಿನಲ್ಲಿ ಪಿಕ್ಲಿಸ್ಟುಗಳು ಕೊಂಡುಕೊಳ್ಳುತ್ತಾರೆ. ಇಲ್ಲಿಂದಲೇ ಪಿಕಲ್–ಐಪಿಎಲ್ ಕನೆಕ್ಷನ್ ಶುರು. ಹೋಳಿನ ಸಮೇತ ಸಕಲವನ್ನೂ ತಿನ್ನುವುದಕ್ಕೆ ಅನುವು ಮಾಡಿಕೊಡುವ ಉಪ್ಪಿನಕಾಯಿಗಳು ಒನ್ ಟು ಎಲೆವೆನ್ ಬ್ಯಾಟ್ಸ್‌ಮನ್‌ಗಳಿದ್ದಂತೆ. ಚೀಪಿ ಚೀಪಿ ಹೊರಗಿಡುವ ಹೋಳುಗಳು ಇಂಪ್ಯಾಕ್ಟ್ ಪ್ಲೇಯರ್ ಇದ್ದಂತೆ; ಅವನ ರುಚಿ ಬೇಕು, ಅವನು ಬೇಡ. 'ಆಟಕ್ಕುಂಟು, ಲೆಕ್ಕಕ್ಕಿಲ್ಲ' ಎನ್ನುವ ಗಾದೆಗೆ ಹೊಸ ಅರ್ಥವನ್ನು ತಂದುಕೊಟ್ಟಿದ್ದೇ ಇಂಪ್ಯಾಕ್ಟ್ ಪ್ಲೇಯರ್ ಪದ್ಧತಿ. ಚೀಪು ಮೆಂಟಾಲಿಟಿಯವರಿಗೆ ನುಂಗಲಾಗದ ಬೇರುಪ್ಪಿನಕಾಯಿಗಳೆಲ್ಲ ಇಂಪ್ಯಾಕ್ಟ್ ಸಬ್‌ಗಳಂತೆಯೇ.'

'ಪಿಕಲ್ ಬೋಲಿಂಗ್ ಡಿಪಾರ್ಟ್‌ಮೆಂಟಿಗೆ ಸೂಟ್ ಆಗದಲ್ಲವೆ?'

'ಆಗುವುದಲ್ಲ! 'ಹಳ್ಳಿ ತಿಂಡಿ', 'ರುಚಿ ಬಂಡಿ' ಮೊದಲಾದ ಅಂಗಡಿಗಳಲ್ಲಿ ಪಿಕಲ್‌ಗಳ ಜಾರ್ ನೋಡಿ ಅದರ ರುಚಿಗೆ ಮಾರು ಹೋಗಿ, ಆ ಕಡೆಗೆ ಜಾರ್ ಹೋಗುವ ಮಂದಿಗೇನೂ ಕಡಿಮೆಯಿಲ್ಲ. ಅವರಾರನ್ನು ಕೇಳಿದರೂ 'ವಿ ಆರ್ ಬೌಲ್ಡ್ ಓವರ್ ಬೈ ದ ಪಿಕಲ್ಸ್' ಎನ್ನುತ್ತಾರೆ.' ಸೀನು ರಂಗೋಲೆಯ ಕೆಳಗೆ ನುಸುಳಿದ್ದ.

'ಪಿಕಲ್ ಬೌಲಿಂಗ್ ಮಾಡುವುದೆಂದೂ ಒಪ್ಪೋಣ. ಅದು ಸ್ಪಿನ್ನರ್ರೋ, ಫಾಸ್ಟ್ ಬೌಲರ್ರೋ?'

'ಒಳ್ಳೆಯ ಖಾರವಿರುವ ಜಿಂಜರ್ ಪಿಕಲ್ಸ್, ಚಿಲ್ಲಿ ಪಿಕಲ್ಸ್ ಇವೆಲ್ಲವೂ ಫಾಸ್ಟ್ ಬೌಲರ್‌ಗಳು.'

'ಏಕೆ?'

'ತಿನ್ನುತ್ತಿದ್ದಂತೆಯೇ ತಲೆಗೇ ಏರುತ್ತವಲ್ಲ. ಕ್ರಿಕೆಟ್ಟಿನಲ್ಲಿ ತಲೆಗೆ ಏರುವ ಚೆಂಡುಗಳನ್ನು

ಬೌನ್ಸರ್ಸ್ ಎನ್ನುತ್ತಾರೆ. ಬೌನ್ಸರ್ ಹಾಕುವವರು ಫಾಸ್ಟ್ ಬೌಲರ್ಸ್. ವೆನ್ ಯೂ ಪುಟ್ ಟೂ & ಟೂ ಟುಗೆದರ್...' ಅರ್ಥಗರ್ಭಿತ ನೋಟವೆಸೆದ ಸೀನು.

'ನಿಂಬೆ, ಮಾವು ಮೊದಲಾದ ಪಿಕಲ್ಸು?'

'ಸ್ಪಿನ್ನರ್ಸ್. ಬೆರಳಿನ ತುದಿಗೆ ಅಂಟಿದ ರುಚಿಕರ ಉಪ್ಪಿನಕಾಯಿಯನ್ನು ಸವಿಯಲು ಬೆರಳುಗಳನ್ನು ವಿವಿಧ ಕೋನಗಳಲ್ಲಿ ತಿರುಗಿಸುತ್ತೀವಲ್ಲ, ಅದು ಗೂಗ್ಲಿ, ಚೈನಾಮನ್ ಮೊದಲಾದ ತಿರುಚೆಂಡುಗಳನ್ನು ಎದುರಿಸಲು ದಾಂಡಿಗರ ಬೆರಳುಗಳು ಪರದಾಡುವುದನ್ನೇ ಹೋಲುತ್ತವೆ' ಎಂದು ವಿವರಿಸಿದ ಸೀನು, 'ಉಪ್ಪಿನಕಾಯಿಯ ರುಚಿಗೆ ಮಾರುಹೋದವನು 'ಕ್ಲೀನ್ ಬೌಲ್ಡ್'. ಅದಕ್ಕೊಂದಿಷ್ಟು ಎಣ್ಣೆಯನ್ನು ಸುರಿದುಕೊಂಡು ಅನ್ನಕ್ಕೆ ಕಲೆಸಿಕೊಂಡು ತಿನ್ನುವವನು 'ಕಾಟ್ ಎಟ್ ದ ವಿಕೆಟ್'. ಚಪಾತಿ, ಪೂರಿ, ರೊಟ್ಟಿಗಳಿಗೆ ನೆಂಜಿಕೊಳ್ಳುವವನು 'ಹಿಟ್ ವಿಕೆಟ್'.'

'ಕಾಟ್ ಎಟ್ ದ ವಿಕೆಟ್ ಹೇಗೆ?'

'ರುಚಿಗೆ ಮಾರುಹೋಗಿ ಹೆಚ್ಚು ಅನ್ನವನ್ನು ಸೇವಿಸಿದರೆ ಎಲೆಯ ಬಳಿಯಲ್ಲೇ ಕಾಟ್ ಏರಿ ಮಲಗುವುದೇ ಸೈ. ತತ್ಕಾರಣ ಕಾಟ್ (ಮಂಚ) ಎಟ್ ದ ವಿಕೆಟ್. ಇಲ್ಲಿ ವಿಕೆಟ್ ಎಂದರೆ ಊಟದೆಲೆ ಎಂದರ್ಥ.'

'ಹಿಟ್ ವಿಕೆಟ್ಟು?'

'ಹಿಟ್ಟಿನಿಂದ ಮಾಡಿದ ತಿನಿಸುಗಳಲ್ಲವೇ!'

'ಇದೆಂತಹ ಬಾಲಿಶ ಪನ್ ನಿನ್ನದು!' ಮುಖ ಸಿಂಡರಿಸಿದೆ.

'ಕಾಯಿಗಳ ವಿಷಯವಲ್ಲವೇ; ಪಕ್ವವಾಗುವ ವರೆಗೆ ಕಾದರೆ ಒಳ್ಳೆಯ ಪನ್ ಮೂಡುತ್ತದೆ.' ಕೆಳಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂಬ ಧೋರಣೆ ಅವನದು.

'ಪಿಕಲ್ ಕಂಪನಿಗಳ ಹೆಸರುಗಳೇ ವಿಶಿಷ್ಟ.' ಕೊಂಚ ಮೌನದ ನಂತರ ಮಾತಿಗಿಳಿದ ಸೀನು.

'ವಿವರಿಸಯ್ಯಾ ಅನಂತಭೈರಿಗೆ' ಎಂದೆ.

'ಪ್ರಿಯಾ ಎನ್ನುವುದು ಹೆಸರೇ ಸೂಚಿಸುವಂತೆ (ಪ್ರಿ–ಹಿಂದೆ) ಹಿಂದಿನ ಕಾಲದಿಂದಲೂ 'ಯಾ' ಅರ್ಥಾತ್ ಎಸ್ ಎಂದು ಒಕ್ಕೊರಲಿನಿಂದ ಪಡೆಯುವ ಪಿಕಲ್ಲು. ಬೇಡೇಕರ್ ಕಂಪನಿಯದು ಬೇಡಿ ಬೇಡಿ ಕರದಲ್ಲಿ ಹಾಕಿಕೊಂಡು ನೆಕ್ಕುವುದು; ಪತಂಜಲಿ ಎನ್ನುವುದು ದರ್ಶನಮಾತ್ರದಿಂದಲೇ ಜಲವನ್ನು ಸ್ರವಿಸುವ ಪಥಕ್ಕೆ ರುಚಿಋಷಿಗಳನ್ನು ಪ್ರೇರೇಪಿಸುವುದು...'

'ಒಂದಂತೂ ನಿಜ. ಐಪಿಎಲ್‌ನಲ್ಲಿ ಇರುವಂತೆ ಪಿಕಲ್‌ಗೆ ಚಿಯರ್ ಗರ್ಲ್ಸ್ ಇಲ್ಲ' ಎಂದೆ.

'ಕೊಂಚವೇ ವ್ಯತ್ಯಾಸ. ಅಲ್ಲಿ ಚಿಯರ್ ಗರ್ಲ್ಸ್. ಇಲ್ಲಿ ಚೀರ್ ಗರ್ಲ್ಸ್. ಖಾರ ತಡೆಯಲಾರದೆ ಚೀರುವ ಗರ್ಲುಗಳಿಗೆ ಕೊರತೆ ಇಲ್ಲ. ಹಾಟ್ ಗರ್ಲ್ಸ್‌ಗಳಷ್ಟೇ ಆಕರ್ಷಕವೆನಿಸುವ ಹಾಟ್ ಹಾಟ್ (ಖಾರ ಖಾರ) ಪಿಕಲ್ಸ್ ಎಂದರೆ ಕುಣಿವುದೆನ್ನೆದೆ' ಎಂದ ಸೀನು.

ಬೆರಳ ತುದಿಯಲ್ಲಿ ನಿಂತು, ಸಪ್ಪೆಯೂಟದವರ ನಾಲಿಗೆಗೆ ಸೋಕಿದರೆ ಅಂಪೈರ್ ಔಟ್ ಎನ್ನುವ ಮಟ್ಟಕ್ಕೆ ಬೆರಳೇರಿಸುವ ಪರಿಸ್ಥಿತಿಯನ್ನು ಉಂಟುಮಾಡುವ ಪಿಕಲ್,

ಶ್ರಾದ್ಧಕ್ಕೆ ಮಾತ್ರ ಬಳಕೆಗೆ ಬಾರದಂತೆ. 'ಊಟಕ್ಕಿಲ್ಲದ ಉಪ್ಪಿನಕಾಯಿ ಶ್ರಾದ್ಧಕ್ಯಾಕೆ' ಎಂಬ ಗಾದೆಯು ದುಃಖದ ಸಂದರ್ಭದಲ್ಲಿ ರುಚಿದಾಸರಾಗುವುದು ತರವಲ್ಲವೆಂದು ಸೂಚಿಸುತ್ತದೆನಿಸುತ್ತದೆ.

ಸಮಬಲದ ಕ್ರಿಕೆಟ್ ತಂಡಗಳ ನಡುವಿನ ಪಂದ್ಯವು ಕಲ್ಪನೆ ಮಾತ್ರದಿಂದಲೇ ನಾಲಿಗೆಯಲ್ಲಿ ನೀರೂರಿಸುವಂತೆಯೇ ಉಪ್ಪಿನಕಾಯಿಯೂ ಹೆಚ್ಚು ನೆನಪಿಸಿಕೊಂಡರೆ ಬಾಯಿಗೆ ಪ್ಲಗ್ ಹಾಕಲು ಪ್ಲಂಬರನ್ನು ಕರೆಯಿಸುವ ಮಟ್ಟಕ್ಕೆ ನೀರೂರಿಸುವ ಶಕ್ತಿ ಹೊಂದಿದೆ. ಕ್ರಿಕೆಟ್ಟನ್ನು ಕೆಲವರು ಕಿಂಗ್ ಆಫ್ ಸ್ಪೋರ್ಟ್ಸ್ ಎಂದು ಕರೆಯುತ್ತಾರೆ. ಅಂತೆಯೇ ಉಪ್ಪಿನಕಾಯಿ ಕಿಂಗ್ ಆಫ್ ಟೇಸ್ಟ್ಸ್. ■

**ಹಗರಣ**
**ಆರೋಪ ಮುಕ್ತಿ**



"ನಮ್ಮ ದೇಶದಲ್ಲಿ ಹುಟ್ಟಕ್ಕೆ ಪುಣ್ಯ ಮಾಡಿರ್ಬೇಕೂಂದ್ರೆ. ಕಳೆದ ವರ್ಷ ಹಗರಣದ ಆರೋಪ, ಈ ವರ್ಷ ಆರೋಪ ಮುಕ್ತಿ!"



ನಾನು ಪರೀಕ್ಷೇಲಿ ಫೇಲಾದೆ ಅಂತ ತುಂಬಾ ಬೇಜಾರಾಗಿತ್ತು, ಈಗ ಅಪ್ಪ ಚುನಾವಣೇಲಿ ಸೋತಿದ್ರಿಂದ ಸಮಾಧಾನ ಆಗಿದೆ.

# ಬೆಂಡು ಖರ್ಜೂರ

ಹೆಚ್.ವಿ. ರಮೇಶ್

ಮನುಷ್ಯನಿಗೆ ಅಭ್ಯಾಸಗಳು ಇರಬೇಕು ಸಾರ್. ಅಭ್ಯಾಸಗಳು ಮೂರು ಬಗೆ; ಅಭ್ಯಾಸ, ಸದಭ್ಯಾಸ & ದುರಭ್ಯಾಸ. ಸದಭ್ಯಾಸಗಳು ಸಾಧು, ಹಾರ್ಮ್‌ಲೆಸ್. ಯಾರಿಗೂ ತೊಂದರೆ ಕೊಡದೇ ಒಳ್ಳೆಒಳ್ಳೆಯ ರೀತಿ-ರಿವಾಜುಗಳನ್ನು ಒಳಗೊಂಡು, ಕಾಲಕಾಲಕ್ಕೆ ತೊಡಗುವಂತಹ ಹ್ಯಾಬಿಟ್ಸ್. ದುರಭ್ಯಾಸಗಳ ಬಗ್ಗೆ ಹೇಳುವುದೇ ಬೇಡ. ನೀವೇನಾದರೂ ನನ್ನ ಪ್ರಬಂಧ 'ವ್ಯಸನ ಪ್ರಸಂಗ' ಓದಿದ್ದರೆ, ನನ್ನ ಜೊತೆಗೆ ಸಂಪೂರ್ಣ ಒಪ್ಪಿಗೆ ಕೊಡುತ್ತಿದ್ದಿರಿ. 'ಫೂಲ್ಲಿ ಅಗ್ರೀಡ್' ಆಗಿಬಿಡುತ್ತಿದ್ದಿರಿ. ಈ ಎರಡೂ ಅಲ್ಲದ 'ಮಧ್ಯಮ ವ್ಯಾಯೋಗ' ಇದೆ ನೋಡಿ, ಇದೇ ಸಂಕಟಕರ; ಸಂಕಟಹರ ಅಲ್ಲಾ ಸ್ವಾಮಿ, ಸಂಕಟ ಖರ. ಬೆಳಿಗ್ಗೆ ಮಾರ್ಜನ ಆದ ಕೂಡಲೇ ಒಂದು ಡೋಸ್ ಫ್ರೆಶ್ ಫಿಲ್ಟರ್ ಕಾಫಿ ಕುಡಿಯುವುದು, ತಿಂಡಿಗೆ ತಪ್ಪದೆ ಜೊತೆಯಲ್ಲಿ ಮೊಸರೋ, ಬೆಣ್ಣೆಯೋ, ತುಪ್ಪವೋ; ಕರಿದ ಐಟಂಗಳೋ ತಿನ್ನುವುದು. ಗರಿಗರಿ ದೋಸೆಯ ಮೇಲೆ ಗಟ್ಟಿ ತುಪ್ಪ ಎರೆಯುವುದು; ಜಿಲೇಬಿಯ ಮೇಲೆ ಕಾದ ಹಾಲು ಸುರಿಯುವುದು; ನಮಗೆ ಹಿತವೂ, ಸುಖವೂ, ಆನಂದದಾಯಕವೂ, ರುಚಿಕರವೂ ಆಗಿರುವ ಹಾಗೆಯೇ, ನಮ್ಮ ಹೆಚ್‌ಎಂ, ಗೊತ್ತಾಯ್ತಲ್ಲ, ಅದೇ ಹೈಕಮಾಂಡ್ ಮೇಡಂನವರಿಗೆ ಇರುಸುಮುರುಸು ಉಂಟು ಮಾಡಿ, 'ನೀ ಕೊಡೆ, ನಾ ಬಿಡೆ' ಎಂಬ 'ಗಂಡಂದಿರ', ಕ್ಷಮಿಸಿ, ಗಂಡುಪ್ರಾಣಿಗಳ ಆನಂದಕ್ಕೂ, ಮೇಡಂಗಳ ಅನಾದರಣ-ಅಸಹನೆ-ಸಿಡುಕುಗಳನ್ನು ವ್ಯಕ್ತಪಡಿಸಲು ವಿಪುಲ ಅವಕಾಶ ನೀಡುವಂತಹ ಕಾರ್ಯಗಳನ್ನು ವಿಧಿಯಿಲ್ಲದೇ ಫಾಲೋ ಮಾಡಿ... ಮನಸ್ಸಿನಲ್ಲೇ ಉರಿದುಕೊಳ್ಳುವ ಭಾಗ್ಯ ಮಾತ್ರ ಸಂಗಾತಿಗಳಿಗೆ ಮೀಸಲು.

ಇನ್ನು ಪಾರ್ಕ್‌ಗೆ ವಾಕಿಂಗ್ ಹೋದಾಗ ಸುಂದರಿಯರನ್ನು 'ಬಿಟ್ಟ ಬಾಯ ನೆಟ್ಟ ಕಣ್ಣಿನಿಂದ' ಈಕ್ಷಿಸುವುದು. ಅಕ್ಕಪಕ್ಕದ ಮನೆಯ ಚಂದದ ಹೆಂಗಸರು ಅರಸಿನ ಕುಂಕುಮಕ್ಕೆ ಬಂದಾಗ ಅವರ ಸೌಂದರ್ಯ ಸವಿಯುವುದು, ಯಾರಾದರೂ ಟೀನ್-ಏಜ್ಡ- ಬಲಿತ ಯುವತಿಯರು ಅಪ್ಪಿತಪ್ಪಿ ಯಾರದ್ದಾದರೂ ವಿಳಾಸ ಕೇಳಿ, ಮನೆಯ ಮುಂದೆ ಬಂದರೇ... ನವ ಯೌವನ ತರುಣರಂತೆ ಫೂಲ್ ಜೋಷ್‌ನಲ್ಲಿ ಅವರು ಕೇಳಿದ್ದು ಬಿಟ್ಟು ಉಳಿದೆಲ್ಲಾ ವಿವರ ಹೇಳಿ, ಜೊತೆಯಲ್ಲೇ ಹೋಗಿ ವಿಳಾಸ ತೋರಿಸಿ ಬರುವುದು; ಯಾವುದಾದರೂ ಸಮಾರಂಭಕ್ಕೆ ಹೋದಾಗ ನವಯೌವ್ವನೆಯರ ಉಡುಗೆ-ತೊಡುಗೆ ಹೊಗಳುವುದು, ಇವೆಲ್ಲಾ ಕಟ್ಟಿಕೊಂಡಂತಹ ಧರ್ಮ... ಅಲ್ಲ... ಥರಂ... ಅಲ್ಲ... 'ಡ್ರಂ' ಪತ್ನಿಗೆ ಮುಜುಗರ ತರಿಸುವಂಥ ಚೇಷ್ಟೆಗಳು.

ಒಂದು ಹಿಂದಿ ಹಾಡು 'ತುಮ್ ತೋ ಧೋಖೆ ಬಾಜ್ ಹೋ... ವಾದಾ ಕರತೇ ಹೋ ಔರ್ ಭೂಲ್ ಜಾತೇ ಹೋ' ಎನ್ನುವ ಹಾಗೆ ಇಂತಹ ಅಧಿಕಪ್ರಸಂಗಗಳು, ನಂತರ ಮನೆಯಲ್ಲಿ ಏರ್ಪಡುವ 'ಅಶಾಂತಿ ಪರ್ವ', 'ಶರಣಾಗತ' ದೃಶ್ಯ. 'ವಾಗ್ದಾನಗಳ' ವಿವರಣೆ ಇಲ್ಲಿ ಬೇಕಿಲ್ಲ, ಏಕೆಂದರೆ ಇದು ಮನೆ-ಮನೆ-ಶಯ್ಯಾಗೃಹ ನಿರ್ಬಂಧದ ಕಥೆ. 'ಜ್ಯಾದಾ ಬೋಲ್ನೇಕಾ ಜರೂರತ್ ನಹಿ'.

ಇನ್ನೊಂದು ನಿರುಪದ್ರವಿ ಹಾಫ್ ಬ್ಯಾಡ್ ಹ್ಯಾಬಿಟ್ಟು ಅಂದರೆ ಪಂಚೆಯನ್ನೋ, ಲುಂಗಿಯನ್ನೋ ಪ್ಯಾಂಟನ್ನೋ ಮೊದಲು ಬಿಚ್ಚಿ, ಟ್ರ್ಯಾಕ್ ಪ್ಯಾಂಟ್-ಚಡ್ಡಿ ಮಾತ್ರ ಉಳಿಸಿಕೊಂಡು, ತಾಳ್ಮೆಯಿಂದ ಬಿಚ್ಚಿದ ಬಟ್ಟೆ ಮಡಿಸಿ, ಅಲ್ಲಿಯವರೆಗೂ ಅರೆದಿಗಂಬರ

ವೇಷದಲ್ಲಿ ವಿರಾಜಿಸಿ – ನಂತರ ಬೇರೆ ಉಡುಪು ಸಾವಧಾನವಾಗಿ ಹುಡುಕಿ ಧರಿಸುವುದು. ಇದು ಹೈಕಮಾಂಡಿಗೆ ಖಂಡಿತಾ ಇಷ್ಟವಿಲ್ಲ. "ಎಷ್ಟು ಸಾರಿ ಬಡಕೋಬೇಕರೀ. ಮೊದಲು ಪಂಚೆ ಉಟ್ಟು ಆಮೇಲೆ ಪ್ಯಾಂಟ್ ಬಿಚ್ಚಿ ಅಂತ. ಸೊಸೆ, ಮನೆಕೆಲಸದ ಹೆಂಗಸು ನೋಡಿ ಮುಸುಮುಸು ನಗ್ತಾರ ರೀ. ನನಗೆ ಪ್ರಾಣ ಹೋದ ಹಾಗೆ ಆಗುತ್ತೆರೀ. ಹಾಗೆ ಮಾಡಬೇಡಿ, ನಿಮ್ಮ ದಮ್ಮಯ್ಯ" ಅಂತ ವಾರ್ನಿಂಗ ಕೊಡ್ತಾರೆ. ನಾನು "ಹೂಂ" ಅಂತೀನಿ, ಮರೆತುಬಿಡ್ತೀನಿ. ಮತ್ತೆ ಮೊದಲಿನದೇ ಚಟ. 'ಮಳ್ಳಿ ವಚ್ಚಾವು ಮೊದಟಿಕಿ'

ಈಗ ಈ ಪ್ರಸಂಗ ಬರೆಯುವಾಗ ಅಮೆರಿಕಾದಲ್ಲಿ ಮಗಳ ಮನೆಯಲ್ಲಿ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ವಾಸ, ಭೋಜನ ಸುಗ್ರಾಸ.  ಈ ಬದಲಾದ ಸನ್ನಿವೇಶದಲ್ಲೂ ಹಳೆಯ ಚಟಗಳು ಬೆನ್ನು ಬಿಡದೇ ಹಿಂಬಾಲಿಸುವ ಬೇತಾಳಗಳು. ನನಗೆ ಒಂದು ಧೈರ್ಯ. ನನ್ನನ್ನು "ಬಿಚ್ಚಿದ ಪಂಚೆಯ" ಅವತಾರದಲ್ಲಿ ನೋಡಿ ಮುಸಿಮುಸಿ ಹಲ್ಲು ಕಿರಿಯಲು ಸೊಸೆ ಹಾಗು ಬಿನ್ನಾಣಗಿತ್ತಿ, ಕೋಮಲಾಂಗಿ, ಕೋಮಲ ಇಲ್ಲಿ ಇಲ್ಲ. ಅದೇ ಸಮಾಧಾನ.

ಈಗ ಕ್ಲೈಮ್ಯಾಕ್ಸ್‌ಗೆ ಬರೋಣ. ನಮ್ಮ ಕಲ್ಯಾಣ ನಗರಿ ಬೆಂಗಳೂರಿನಲ್ಲಿ ರೂಢಿಸಿಕೊಂಡಿದ್ದ ದುಶ್ಚಟಗಳಲ್ಲಿ ಹಲವಾರನ್ನು ಇಲ್ಲೂ ಮುಂದುವರೆಸಿಕೊಂಡು ಬಂದಿದ್ದೆ. 'ಅಮ್ಮಾವರ ಆಗ್ರಹಕ್ಕೂ' ತುತ್ತಾಗಿದ್ದೆ. ದಿವ್ಯ ನಿರ್ಲಕ್ಷ್ಯ ತೋರಿ ಚಾಳಿ ಮುಂದುವರೆಸಿದ್ದೆ. ಅವುಗಳಲ್ಲಿ ಒಂದು, ಊಟವಾದ ನಂತರ ಬೆಳಿಗ್ಗೆ ಹಾಗೂ ರಾತ್ರಿ ಎರಡೂ ಹೊತ್ತು, ಒಂದು ತುಂಡು ಬೆಲ್ಲ  ತಿನ್ನುವುದು ಒನ್ ಅಫ್ ಮೈ ಗುಡ್ ಹ್ಯಾಬಿಟ್ಸ. ಬಿಕಾಸ್ 'ಎ ಬಿಡ್ ಆಫ್ ಬೆಲ್ಲಾ ಡಾಕ್ಟರ್ಸ ನೆಸೆಸಿಟಿಯೇ ಇಲ್ಲಾ' ಅನ್ನೊ ಗಾದೆ ಹೇಹೇ... ನಾನೇ ಕಟ್ಟಿದ್ದು, ಕೇಳಿಲ್ಲವೇ?

ನಮ್ಮ ಅಳಿಯ  ಇಂಡಿಯನ್ ಸ್ಟೋರ್ಸನಿಂದ ಅಥವಾ ಕಾಸ್ಟಕೋ ಎಂಬ ದೊಡ್ಡ ಮಾಲ್‌ನಿಂದ ಸೊಗಸಾದ ಬೆಂಡು ಖರ್ಜೂರ–ಡೆಸರ್ಟವ್ಯಾಲಿ ಡೇಟ್ಸ – ಆರ್ಗ್ಯಾನಿಕ್ ಜಾತಿಯ ಶ್ರೇಷ್ಠ ಖರ್ಜೂರದ ಪ್ಯಾಕೆಟ್ ತಂದಿದ್ದರು.  ಕವರ್ ಬಿಚ್ಚಿ ಬಾಟಲಿಗೆ ತುಂಬಿಸುತ್ತಾ ಇದ್ದರು ಮೇಮ್ ಸಾಬ್.  ಕೈ ಒಡ್ಡಿದರೆ ಮುಖ ಸಿಂಡರಿಸಿ ಎರಡು ಪೀಸ್ ಹಾಕಿದರು. "ಅಂಕಲ್, ತಗೊಳ್ಳಿ ಡ್ರೈ ಡೇಟ್ಸು. ಹೆಸರು ಡ್ರೈ ಡೇಟ್ಸು ಆದರೆ ವೆಟ್ ಆಗಿ ಸಾಫ್ಟ್ ಆಗಿ ಇರುತ್ತೆ. ಜ್ಯೂಸಿ ಆಗಿರುತ್ತೆ. ಬೆಲ್ಲಕ್ಕಿಂತ ಒಳ್ಳೆಯದು. ಒಳ್ಳೆಯ ನ್ಯೂಟ್ರಿಶನ್. ತಿನ್ನಿ" ಎಂದು ಅಳಿಯ ಶಿಫಾರ್ಸು ಬೇರೆ ಮಾಡಿದರು. ಬಾಯಿಗೆ ಹಾಕಿಕೊಂಡೆ. 'ಆಹಾ!!! ಏನು ರುಚಿ, ಏನು ಸವಿ! ವೆಟ್ ಆಗಿ, ಸಾಫ್ಟ್ ಆಗಿ, ಬೀಜರಹಿತ, ಜ್ಯೂಸಿಯಾಗಿ ಅತಿ ಮಧುರ ಸ್ನಿಗ್ಧವಾಗಿತ್ತು. ಇನ್ನೊಂದು ಪೀಸ್ ಬಾಯಿಗೆ ಹಾಕಿಕೊಂಡೆ. ಚೆನ್ನಾಗಿ ಅನ್ನಿಸಿತು. ಮತ್ತೊಂದು ಪೀಸು ಬಾಯಿಗೆ ಹಾಕಿಕೊಂಡೆ. ದಿಲ್ ಖುಷ್ ಆಯಿತು. ನನ್ನ ಶ್ರೀಮತಿಯ ಕೈಯಿಂದ ಜಾಡಿ ಕಸಿದುಕೊಂಡು ಮರದ ಬೀರುವಿನ ಡ್ರಾಯರ್‌ನಲ್ಲಿ ನನಗೆ ಸುಲಭವಾಗಿ ಸಿಗುವ ಹಾಗೆ ಇಟ್ಟುಕೊಂಡೆ. ನಂತರ ಮನಸ್ಸು ಆಕರ್ಷಣೆಗೆ ಒಳಗಾದಾಗ ಹಗಲೂ ರಾತ್ರಿ ಊಟವಾದ ಮೇಲೆ ಎರಡು ಮೂರು ದಿಲ್ ಪಸಂದ್ ಖರ್ಜೂರ್ ತಿಂದು ಬಾಯಿ ಚಪ್ಪರಿಸಿ ಲೊಟಕೆ ಹೊಡೆದು ಮಲಗುತ್ತಿದ್ದೆ.

ಆ ರಾತ್ರಿ; ಕಾಳರಾತ್ರಿಯೋ ಏನೋ ಗೊತ್ತಿಲ್ಲ. ಊಟ ಲೇಟು. ಕೆಲಸವೇ ಮುಗಿಯ ಒಲ್ಲದು. ಗಂಟೆ ರಾತ್ರಿ ಹತ್ತು ಹೊಡೆದಿತ್ತು. ಚಟ ಕೈ ಬೀಸಿ ಕರೆಯುತ್ತಿತ್ತು. ಅಳಿಯಂದಿರು 'ಅಲೆಕ್ಸಾ' ಅಮ್ಮಣ್ಣಿಗೆ ಆರ್ಡರ್ ಮಾಡಿ ದೀಪವನ್ನು 'ಡಿಮ್' ಮಾಡಿಸಿಬಿಟ್ಟರು. ಅಡುಗೆಮನೆಗೆ ಹೋಗಿ 'ಕಾಬೂಲ್ ಖರ್ಜೂರ್' ಮೆಲ್ಲುವ ಆಸೆ–ದುರಾಶೆಯಿಂದ ಬಾಟಲಿಯ ಮುಚ್ಚಳ

ತೆಗೆದು ಮೂರೊ ನಾಲ್ಕೋ ರಸರಸಮಯ ಖರ್ಜೂರ್ ಎತ್ತಿ ಬಾಯಿಗೆ ಹಾಕಿಕೊಂಡುಬಿಟ್ಟೆ ಓ! ಥಕ ಥಕ ಕುಣಿಯುವ ಹಾಗೆ ಆಗಿ ಒದ್ದಾಡಿಹೋದೆ. ಶಿವ ಶಿವಾ! ಬೆಂಡು–ಖರ್ಜೂರ ನನ್ನ ಬೆಂಡು ಎತ್ತಿಬಿಟ್ಟಿತು. ಖಾರಾ–ಉಪ್ಪು–ಹುಳಿ–ಒಗರು–ಕಹಿ–ಉರಿ, ನಾಲಿಗೆಯ ಮೇಲೆ ಬೆಂಕಿಯ ಚೆಂಡು ಉರುಳಾಡಿದ ಹಾಗೆ, ದಿಕ್ಕೆಟ್ಟುಹೋದೆ. ನನ್ನನ್ನು 'ವರ್ಚುಯಲ್' ಆಗಿ ಕೊಂದೇಬಿಟ್ಟಿತು. ಓಡಿದೆ ಸ್ವಾಮಿ... ಓಡಿದೆ. ಒಂದೇ ಉಸಿರಿಗೆ ಓಡಿದೆ ಬಚ್ಚಲ ಮನೆಗೆ; ಅಯ್ಯೋ ದೇವರೆ – ವಾಷ್‌ರೂಂಗೆ. ಸಿಂಕಲ್ಲಿ ನೀರು ಬಿಟ್ಟು ಬಾಯಲ್ಲಿ ಜಮಾಯಿಸಿದ್ದ ಜರಾಸಂಧನ ಮರಿಮಕ್ಕಳನ್ನು ಉಗಿದು ನೋಡುತ್ತೇನೆ... ರಸವೆಲ್ಲಾ ತೊಳೆದುಹೋಗಿ ಶುದ್ದ–ಶುಭ್ರ–ನಿಂಬೇಹಣ್ಣಿನ ಹೋಳುಗಳು ರಾರಾಜಿಸುತ್ತಿವೆ. ತಲೆ ತಲೆ ಚಚ್ಚಿಕೊಂಡೆ.

ಬೆಡ್‌ರೂಮಿನಲ್ಲಿ ಹಾಸಿಗೆಯ ಮೇಲೆ ಒರಗಿ, ಹೀಟಿಂಗ್ ಮ್ಯಾಟ್–ಇದೊಂದು ಪುಟ್ಟ ಉಣ್ಣೆಯ ಮಾದರಿಯ ಚಾಪೆ; ಎರಡು ಪದರಗಳ ನಡುವೆ ಒಂದು ಕರೆಂಟ್ ಕಾಯಿಲ್ ಇಟ್ಟಿದ್ದು; ಸ್ವಿಚ್ ಹಾಕಿ ತಾಪಮಾನ ಸೆಟ್ ಮಾಡಿದರೆ ಸುಖವಾದ ಉಷ್ಣಾಂಶ ಬೀರುತ್ತಾ ಇರುತ್ತದೆ. ಇಂದು ಮಾರ್ಚ ತಿಂಗಳು, ಆದರೂ ಛಳಿರಾಯ ತನ್ನ ಪ್ರತಾಪ ಕಡಿಮೆ ಮಾಡದಲೆ ದಿನೇ ದಿನೇ ಉಷ್ಣಾಂಶ ತಗ್ಗಿ–ತಗ್ಗಿ ಒಮ್ಮೊಮ್ಮೆ ಮಧ್ಯರಾತ್ರಿಯಲ್ಲಿ ಸೊನ್ನೆ ಡಿಗ್ರಿಗೆ ಇಳಿಯುವ ಈ ಸ್ಯಾನ್ ಫ್ರಾನ್ಸಿಸ್ಕೋ ಬೇ ಏರಿಯಾದಲ್ಲಿ ಕೊರೆವ ಛಳಿಗೆ ಕಾಲಿಗೆ ಶಾಖ ಕೊಟ್ಟುಕೊಳ್ಳುತ್ತಾ ಮಲಗುವುದು ಶಿವಾ...

ಹೀಗೆ ಸುಖೋಷ್ಣ ಎನ್‌ಜಾಯ್ ಮಾಡುತ್ತಾ ಮೊಬೈಲ್ ನೋಡುತ್ತಾ ಆನಂದಿಸುತ್ತಿದ್ದೆ. ನಮ್ಮ ಬೇಗಂ ಸಾಹೇಬಾ "ಏನ್ರೀ, ಏನಾಯ್ತುರೀ? ಯಾಕೆ ಹೀಗೆ ತಿಣುಕ್ತಾ ಇದ್ದಿರಿ?" ಎಂದು ಎನ್‌ಕ್ವಾಯರಿ ಮಾಡಿದರು. ಮೊದಲೇ ನನಗೆ ಉರಿ ಕಿತ್ತುಕೊಳ್ಳುತ್ತಾ ಇತ್ತು. ಧ್ವನಿ ಏರಿಸಿ "ಯಾರೇ ಖರ್ಜೂರದ ಬಾಟಲಿನ ಜಾಗದಲ್ಲಿ ಉಪ್ಪಿನಕಾಯಿ ಬಾಟಲು ಇಟ್ಟವರು? ಯಾರೇ?" ಎಂದು ಗರ್ಜಿಸಿದೆ.

"ಯಾಕೆ ರೀ? ನಾನೇ ಇದ್ರೂ ಇರಬಹುದು" ಎಂದು ಸೋ ಕೂಲಾಗಿ ಉತ್ತರಿಸಿ "ಹಿತ್ತಲಲ್ಲಿ ಸೊಗಸಾದ ನಿಂಬೆಹಣ್ಣುಗಳು ಸುರೀತಾ ಇತ್ತು. ಹೋದ ವಾರಾನೇ ಹೆಚ್ಚಿ ಉಪ್ಪು ಹಾಕಿ ಕಳೀಲಿ ಅಂತ ಬಿಟ್ಟಿದ್ದೆ. ಮಧ್ಯಾಹ್ನ ಖಾರದ ಪುಡಿ ಸೇರಿಸಿ ಕುಲುಕಿ ಬಾಟಲಿಗೆ ತುಂಬಿಸಿ ಮರದ ಬೀರುಲಿ ಇಟ್ಟಿದ್ದೆ. ನಿಮ್ಮ ಮೊಮ್ಮಗ ಆಯುಷ್ ಖರ್ಜೂರ ಕೇಳಿದ. ಕೊಟ್ಟೆ. ಈ ಗಲಿಬಿಲೀಲಿ ಬಾಟಲುಗಳು ತಾರುಮಾರು ಆಗಿರಬಹುದು. ಏನೀಗ?" ಅಂದವಳೇ ಜ್ಞಾನೋದಯ ಆದವಳ ಹಾಗೆ ತಲೆ ಆಡಿಸಿ, "ಓ! ಅರ್ಥ ಆಯ್ತು ಬಿಡಿ. ರಾಯರು ಬೆಂಡುಖರ್ಜೂರ ಅಂತ ಉಪ್ಪಿನಕಾಯಿ ಬಾಟಲಿಗೆ ಕೈ ಹಾಕಿ ತೆಗೆದು, ಮುಕ್ಕಿದ್ದಿರೀ ಅಂತ ಕಾಣುತ್ತೆ. ಮನುಷ್ಯನಿಗೆ ಇಷ್ಟು ವಯಸ್ಸಾದ ಮೇಲೂ ಇಷ್ಟೊಂದು ಚಪಲ ಇರಬಾರದು" ಎಂದು ಹೇಳಿ ಅಷ್ಟಕ್ಕೇ ಸುಮ್ಮನಿರದೆ ಕಿಸಕ್ ಎಂದು ನಕ್ಕಳು.

ಬಿದ್ದ ಪೆಟ್ಟಿಗಿಂತ ಕಂಡ ಪೆಟ್ಟು ಹೆಚ್ಚಾಯಿತು. ಮಾತು ಹೊರಡಲಿಲ್ಲ. ಸೀದ ಅಡುಗೆ ಮನೆ– ಥೂ! ಕಿಚನ್ ಒಳಗೆ ಹೋಗಿ, ಅದೇ ಮರದ ಬೀರುವಿನ ಅರೆಯಿಂದ ಬೆಲ್ಲದ ಬಾಟಲು ತೆಗೆದು, ಒಂದು ತುಂಡು ಬೆಲ್ಲವನ್ನು ತೆಗೆದುಕೊಂಡು ಚೆನ್ನಾಗಿ ಮೂಸಿ ಸ್ವಲ್ಪ ನೆಕ್ಕಿ ನೋಡಿ, ಯಾಕೆ ಅಂತಿರಾ? ನನ್ನ ಗ್ರಹಚಾರಕ್ಕೆ ಅದು ಇಂಗಿನ ಬಾಟಲು ಆಗಿರಬಾರದಲ್ಲಾ ಸ್ವಾಮೀ... ಬಾಯಿಗೆ ಹಾಕಿಕೊಂಡು ಚಪ್ಪರಿಸುತ್ತಾ, ಮೌನವಾಗಿ ಮುದುರಿಕೊಂಡು ಮಲಗಿಕೊಂಡೆ.

■

# ಶಂಖ ಊದಿ ಪ್ರೈಜು ಗೆಲ್ಲಿ!

✍ಜಯಶ್ರೀ ದೇಶಪಾಂಡೆ.

ಇತ್ತೀಚೆಗೆ ಶಾರಿ ಬಗೆಬಗೆಯ ಶಂಖಗಳನ್ನು ಖರೀದಿಸುತ್ತಿದ್ದಾಳೆ. ದೊಡ್ಡದು, ಚಿಕ್ಕದು, ಉದ್ದಮೂತಿಯ ಕೊಳವೆಯಂಥದು, ಗಿಡ್ಡಗೆ ದುಂಡುದುಂಡಗಿರುವುದು... ದಪ್ಪ ತಲೆಯ ಕುಂಬಳಕಾಯಿಯಂಥ ಶಂಖವೂ ಮನೆಗೆ ಬಂತು.

"ಏನಿದೆಲ್ಲ?" ಎಂದುಕೇಳಿದೆ.

ನನ್ನ ಕೈಗೊಂದು ಶಂಖ ತುರುಕಿ 'ಊದಿ ತೋರಿಸಿ ನೋಡೋಣ' ಎಂದಳು.

ಅರೆ! ಎಲ್ಲಾ ಬಿಟ್ಟು ಶಂಖ ಊದ್ಕೊಂಡು ಕೂರೋದೇ?

"ಯಾಕೆ ಊದಬೇಕು ಈ ಶಂಖ?" ಅಂದೆ

"ಯಾಕೆ ಅಂದರೆ ಪ್ರಾಕ್ಟೀಸ್ ಆಗೋದು ಬೇಡವೇ?"

ಅವಳ ಮಾತಿಗೆ ಏನು ಹೇಳಬೇಕೋ ತಿಳಿಯದೆ ಇದ್ದರೂ, ಬಹಳ ಹಿಂದೆ ನಮ್ಮ ಮನೆಯಲ್ಲಿ ನವರಾತ್ರಿ, ವಿಜಯದಶಮಿಯ ದಿನ ಪೂಜೆಗೆ ಬರ್ತಾ ಇದ್ದ ಪುರೋಹಿತರು ರಾವಣನನ್ನು ರಾಮ ಯುದ್ಧದಲ್ಲಿ ಗೆದ್ದ ಸಂಕೇತವಾಗಿ ದೇವರ ಮುಂದಿರ್ತಾ ಇದ್ದ ದೊಡ್ಡ ಶಂಖವನ್ನು ತೊಗೊಂಡು ಒಂದೇ ಒಂದು ಸಲ "ಪೋಂ" ಅಂತ ಊದಿ ಇಡ್ತಾ ಇದ್ದದ್ದು ನೆನಪಾಯಿತು. ಆಗ ನಾವೆಲ್ಲ ಚಿಳ್ಳೆಪಿಳ್ಳೆಗಳು. ದೇವರ ಜಗುಲಿ ಮುಟ್ಟೋ ಅವಕಾಶವೇ ಇರಲಿಲ್ಲ.

ಪುರೋಹಿತರು ಊದೋ ಶಂಖ ನೋಡಿ ಒಮ್ಮೆ ಮುಟ್ಟುವ, ಎತ್ತಿ ಊದೇಬಿಡುವ ಆಸೆ ಆಗ್ತಿತ್ತಾದರೂ, ಅಜ್ಜನ, ಅಪ್ಪನ ಏಟಿಗೆ ಹೆದರಿ ಆ ಆಸೆಗೆ ಎಳ್ಳುನೀರು ಬಿಟ್ಟಿದ್ದಿತ್ತು. ಈಗ ಶಾರಿ 'ಶಂಖ ಊದಿ' ಅಂತ ನನ್ನ ಕೈಗಿಡ್ತಾ ಇದ್ದಾಳೆ! ಪ್ರಾಕ್ಟೀಸ್ ಮಾಡ್ಕೊಳ್ಳಿ ಅಂತಲೂ ಒತ್ತಾಯ ಮಾಡ್ತಾ ಇದ್ದಾಳೆ.

"ಸರಿ. ಶಂಖ ಊದಿದರೆ ನೀನು ಅದ್ಯಾವ ಯುದ್ಧದಲ್ಲಿ ಗೆದ್ದೆ ಅಂತ ಅರ್ಥ ಹೇಳು. ಅದೂ ಅಲ್ದೇ ವಿಜಯದಶಮಿ ಮೊನ್ನೆಯೇ ಮುಗಿದುಹೋಯ್ತು, ಮರೆತುಬಿಟ್ಟೆಯಾ?" ಕುಹಕವಾಡಿದೆ.

"ಪಕ್ಕಾ ಟ್ಯೂಬ್‌ಲೈಟ್ ತಲೆ ನಿಮ್ದು ಅಂತ ಸಾಬೀತು ಮಾಡಬೇಡಿ" ಶಾರಿ ಮೂಗು ಮುರಿದಳು, 'ಇದಕ್ಕೇ ಹೇಳ್ದೆ ಎಂಟೆಂಟು ಗಂಟೆ ಟಿವಿ ನೋಡಿದ್ದು ದಂಡಕ್ಕೋ?"

"ಎಂಟು ಗಂಟೆ ಟಿವಿ ನೋಡೋದೇ? ಅದೂ ನಾನೇ? ಆಹಾ! ಶಾರಿ, ನಾನು ಅಷ್ಟು ಹೊತ್ತು ಮನೆಯಲ್ಲೇ ಇರೋಲ್ಲ. ಅಂದಮೇಲೆ ಇಲ್ಲಿ ಟಿವಿ ಮುಂದೆ ಕೂರೋರು ಯಾರೇ? ಹಾಹಾಹಾ!" ನಕ್ಕೆ ನಾನು.

"ನಿಮ್ಮ ಜೊತೆ ವಾದಿಸೋದೂ, ಕೋಣನ ಮುಂದೆ ಕಿನ್ನರಿ ಬಾರ್ಸೋದೂ ಒಂದೇ."

"ಏಯೇಯ್! ನಿನ್ನದೆಲ್ಲ ಮುಚ್ಚಿಟ್ಕೊಳ್ಳೋಕೆ ನನ್ನ ಬೈದು ಸುಖ ಇಲ್ಲ ತಿಳ್ಕೊ" ಅಂದೆ ಖುಶಿಯಾಗಿ.

"ರೀ, ಇಲ್ಲದ್ದೆಲ್ಲ ಮಾತಾಡ್ದೆ ಸುಮ್ಮನೆ ಶಂಖ ಊದಿ ತೋರಿಸಿ ನೋಡೋಣ..." ಮತ್ತದೇ ರಾಗ.

ಸುಲಭದಲ್ಲಿ ಪಟ್ಟು ಬಿಡೋ ಆಸಾಮಿ ಅಲ್ಲವಲ್ಲ ಇವಳು! ಅವಳು ಕೊಟ್ಟ ಶಂಖ ಎತ್ತಿ ಬಾಯಿಗಿಟ್ಟು ಊದಿದೆ, ಅಥವಾ ಊದಲು ಪ್ರಯತ್ನ ಮಾಡಿದೆ! ಪುರಕ್ ಅಂತ ವಿಚಿತ್ರವಾದ ಒಂದು ಶಬ್ದ ಹೊರಗೆ ಬಂತಲ್ಲದೆ ಅದರ ಒಳಗೆಲ್ಲೋ ತುಂಬಿ ಕೂತಿದ್ದ ಧೂಳಿನ ಸಮೇತ ನಾನು ಊದಿದ್ದ ಗಾಳಿ ಅಷ್ಟೇ ಜೋರಾಗಿ ರಿಟರ್ನ್ ನುಗ್ಗಿಬಂದದ್ದೇ

ಬ್ರಹ್ಮಾಂಡದಂಥ ಕೆಮ್ಮು ಸಹ ಉಕ್ಕಿಬಂತು!

"ಅಯ್ಯೋ ಏನ್ರೀ ನೀವು! ಒಂದು ಶಂಖ ಊದೋಕೂ ಗೊತ್ತಿಲ್ಲ ಅಂದ್ರೆ ಅದೇನು ಕಾಲೇಜಿನಲ್ಲಿ ಪಾಠ ಹೇಳ್ತೀರೋ ದೇವರಿಗೇ ಗೊತ್ತು. ಹೋಗ್ಲಿ ಬಿಡಿ. ಅದನ್ನ ಕೆಳಗಿಡಿ. ಬೇರೆ ಶಂಖ ಕೊಡ್ತೀನಿ" ಅಂದಳು.

ಈ ಶಾರಿಗೆ ನನ್ನ ಕೆಮ್ಮು, ಅವಸ್ಥೆಗೆ ಕನಿಕರವಾಗೋದಂತೂ ದೂರ; ನನ್ನಿಂದ ಶಂಖ ಊದಿಸಿಯೇಬಿಡಬೇಕೆಂಬ ಜಿದ್ದೇ ಹೆಚ್ಚಾಗಿದ್ದಂತೆ ಅನಿಸಬಾರದೆ ನನಗೆ?

"ಅಲ್ವೇ ಶಾರಿ, ಇಂಥ ಶಂಖಾನೇ ಊದಿಸ್ಬೇಕಂತ ಹಠ ಯಾಕೆ ನಿನಗೆ? ಬೇರೆ ಏನಾದರೂ ಊದಿದರೆ ಅಗಲ್ವಾ? ಅರ್ಥಾತ್ ನನ್ನ ಕೈಗೆ ನನ್ನ ಆ ಕೊಳಲು ಕೊಟ್ಟು ನೋಡು, ಬಾಯಿಗಿಟ್ಟ ತಕ್ಷಣ ಎಂಥಾ ಮಧುರ ರಾಗ ಹೊರಡಿಸ್ತೀನಿ" ಎಂದು ಯಾಚಿಸಿದೆ.

ಆದರೆ ಅಷ್ಟು ಮೃದುಹೃದಯದವಳಲ್ಲ ನನ್ನ ಸತಿ! ಆರಿಸಿ ಆರಿಸಿ ಇನ್ನೊಂದು ಶಂಖವನ್ನು ಕೈಗಿಟ್ಟು, "ಅದೆಲ್ಲ ಬಿಡಿ, ಇದು ನೋಡಿ, ಧೂಳೆಲ್ಲ ಒರೆಸಿ ಫಳಫಳ ಮಾಡಿ ತಂದಿದ್ದೀನಿ" ಅಂತ ಪೂಸಿ ಹೊಡೆದು, "ಇನ್ನೂ ಗೊತ್ತಾಗಿಲ್ಲವಾ? ಶಂಖ ಮಾರ್ಕಿನ ಕಿಚನ್ ಪ್ರಾಡಕ್ಟಿನವರು ಶಂಖ ಊದೋ ಸ್ಪರ್ಧೆಯಲ್ಲಿ ಗೆದ್ದರೆ, ಗೆದ್ದವರಿಗೆ ಭಾರೀ ಬಹುಮಾನ ಕೊಡ್ತೀವಿ ಎಂದು ಆಫರ್ ಕೊಡ್ತಾ ಇದ್ದಾರಲ್ಲವಾ? ನಾವೂ ಬಹುಮಾನ ಗೆಲ್ಲಬೇಕ್ರೀ... ನೀವು ನನ್ನ ಜಾಣ ಅಲ್ವಾ?" ಅಂತ ಮುದ್ದಾಗಿ ಹೇಳಿಬಿಟ್ಟರೆ ಇಲ್ಲ ಅನ್ನೋ ಮನಸ್ಸು (ಧೈರ್ಯ?) ಬಂದೀತಾ?

ಸರಿ ಅಂತ ಎರಡೂ ಕೈಯಲ್ಲಿ ಶಂಖವನ್ನು ಎತ್ತಿ ಹಿಡಿದು ಬಲಭೀಮನ ಹಾಗೆ ಮುಖವನ್ನು ಆಕಾಶದತ್ತ ಎತ್ತಿ ಶಂಖವನ್ನು ಗಟ್ಟಿಯಾಗಿ ಬಾಯಿಗೆತ್ತಿ ಹಿಡಿದು ಇದ್ದ ಶಕ್ತಿಯೆಲ್ಲಾ ಹಾಕಿ ಎರಡೂ ಕೆನ್ನೆಗಳನ್ನು ಕಡುಬಿನ ಥರ ಉಬ್ಬಿಸಿ ಗಾಳಿ ಊದಿದೆ.

ಮತ್ತದೇ 'ಪೂರ್‌ರ್‌ರ್‌ರ್ ಸ್ಸಂಕ್ಸ್ಸಸ್ಸಂಕ್' ಶಬ್ದ!

ಇನ್ನು ಆ ಶಂಖವೋ ತನಗೆ ಧ್ವನಿಯೇ ಇಲ್ಲಾನ್ನೋ ಹಾಗೆ ಬಿಮ್ಮಗೆ ನನ್ನ ಬಾಯಿ ಕಚ್ಚಿಕೊಂಡು ಕೂತುಬಿಟ್ಟಿದೆ. ಅದನ್ನು ಹೊರಗೆಳೆಯುವ ಪ್ರಯತ್ನಕ್ಕೆ ಬಿದ್ದ ಗಳಿಗೆ...

'ಇಷ್ಟು ಸಾಲದೇ?' ಅನ್ನುವ ಹಾಗೆ...

ಅದೇ ಕ್ಷಣ ಕಿಟ್ಟಿ ಎಂಬ ನನ್ನ ಭಾವಮೈದುನ ಧಡಾರನೆ ಮುಂಬಾಗಿಲು ನೂಕಿಕೊಂಡು ಬಿರುಗಾಳಿಯ ಹಾಗೆ ಒಳಗೆ ಬಂದೇಬಿಟ್ಟಿದ್ದ!

"ಓಹೋ... ಹೋ... ಹೇಹೇ... ಭಾವಾ ಏನ್ಕಥೆ! ಹೇಹೇ... ನಿಮ್ಕೈಲಿ ಆಗಲ್ಲ ಬಿಡಿ ಈ ಶಂಖ ಊದೋಕೆ" ಅಂತ ಬಿದ್ದುಬಿದ್ದು ನಕ್ಕು, ಅವನ ಜೊತೆ ಶಾರೀನೂ ಉರುಳಿಕೊಂಡು ನಕ್ಕಾಗ ನನಗೆ ಹೊತ್ತಿ ಉರಿಯದಿರದೇ... ಬಾರದೇ?

"ಲೇ... ಲೇ, ಈ ಶಂಖದ ಮಾತು ಬಿಡು, ಇವನಿದ್ದಾನಲ್ಲ ಈ ನಿನ್ನ ತಮ್ಮ, ನಾಲ್ಕು ವರ್ಷದಿಂದ ಉರುಳಾಡ್ತಾ ಇದ್ದಾನಲ್ಲ ಪೀಯೂಸಿ ಪರೀಕ್ಷೆ ಪಾಸಾಗದೆ; ಇವನು ಪಾಸಾಗ್ಲಿ ಅಂತ ನಾನು ಇಷ್ಟು ವರ್ಷದಿಂದ ಪಾಠ ಅನ್ನೋ ಶಂಖ ಹೊಡ್ಕೊಂಡೆ. ಏನಾದ್ರೂ ಆಯ್ತಾ? ಅದಕ್ಕೇ ತಿಳ್ಕೋ, ಎಲ್ಲಿ ಯಾವ ಶಂಖ ಊದಿದ್ರೂ ಪರಿಣಾಮ ನಮಗೆ ಸೊನ್ನೆಯೇ."

ನನ್ನ ಮಾತು ಮುಗಿಯುವ ಮೊದಲೇ ಅವರಿಬ್ಬರೂ ಜಂಟಿದಾಳಿಗೆ ರೆಡಿಯಾಗ್ತಾ ಇದ್ದದ್ದನ್ನು ಕಂಡು ಅಲ್ಲಿಂದ ಕಾಲ್ಕಿತ್ತೆ!

ನೀತಿ: ಯಾವುದೇ ಬಗೆಯ ಶಂಖ ಊದೋ ಮುಂಚೆ ಹತ್ತು ಸಲ ಯೋಚನೆ ಮಾಡಿ!

■

# ಬವಣೂರಿಗೊಂದು ಮಾಸ್ಟರ್ ಪ್ಲಾನ್

ಹೆಚ್. ಆರ್. ಪ್ರಭಾಕರ

ಕರುನಾಡ ರಾಜಧಾನಿ ಬವಣೂರಿನಲ್ಲಿನ ಸಂಚಾರದ ನಿರ್ವಹಣೆ ದೇಶದಲ್ಲೆಲ್ಲ ನಗೆಪಾಟಲಾಗಿರುವುದು ಎಲ್ಲರಿಗೂ ತಿಳಿದಿದೆ. ಸಂಚಾರ ವ್ಯವಸ್ಥೆಯನ್ನು ಸರಳೀಕರಣ–ಗೊಳಿಸುವ ಬಗ್ಗೆ ತಮ್ಮ ಯೋಜನೆಗಳನ್ನು ರಾಜ್ಯದ ಉಪಮುಖ್ಯಮಂತ್ರಿ ಡಾ. ವಿಷ್ಣು ಕುಮಾರ್ ಅವರು ನಮ್ಮ ವಿಶೇಷ ಬಾತ್ಮೀದಾರರೊಂದಿಗೆ ಹಂಚಿಕೊಂಡರು. ಸಂದರ್ಶನದ ಆಯ್ದ ಭಾಗಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ವಿ.ಬಾ.: ಸನ್ಮಾನ್ಯ ಉಪಮುಖ್ಯಮಂತ್ರಿಗಳಿಗೆ ನಮಸ್ಕಾರ.

ಡಾ.ವಿ.: ಬನ್ರೀ. ನೀವು ನಿನ್ನೆಯೇ ಬರ್ಬೇಕಿತ್ತಲ್ಲವೇನ್ರಿ?

ವಿ.ಬಾ.: ಸಾರ್, ನಾನು ನಿನ್ನೆ ಬೆಳಗ್ಗೇನೇ ಮನೆಯಿಂದ ಹೊರಟೆ. ತುಂಬಾ ಟ್ರಾಫಿಕ್ಕು ಸಾರ್. ಹೇಗೋ ಬಂದೆ.

ಡಾವಿ: ನಿಮ್ಮನ್ನು ನೋಡಿದರೆ ಗೊತ್ತಾಗುತ್ತೆ ರಾತ್ರಿಯೆಲ್ಲಾ ನಿದ್ದೆ ಮಾಡಿಲ್ಲಾಂತ. ಊಟಗೀಟನೂ ಮಾಡಿಲ್ಲ ಅಲ್ವೇ?

ವಿ.ಬಾ.: ಏನ್ಮಾಡೋದು ಸಾರ್. ನಮಗೆ ಕೆಲಸ ಮುಖ್ಯ, ಉಳಿದದ್ದೆಲ್ಲ ಆಮೇಲೆ. ಟ್ರಾಫಿಕ್ ಸಿಗ್ನಲ್ಲುಗಳಲ್ಲಿ ಕಡ್ಲೆಕಾಯಿ ಸಿಗುತ್ತಿತ್ತು.

(ಸಮವಸ್ತ್ರಧಾರಿಯಾದ ಸಿಬ್ಬಂದಿ ಎರೆಡು ಪ್ಲೇಟ್ ಇಡ್ಲಿ, ವಡೆ, ಮಸಾಲೆ ದೋಸೆ, ಕೇಸರಿಬಾತ್ ಮುಂತಾದುವನ್ನು ತಂದಿಡುತ್ತಾನೆ.)

ಡಾವಿ: ನನಗೆ ಎಲ್ಲ ಗೊತ್ರೀ. ನಿಮಗಾಗಿಯೇ ಬಿಸಿಬಿಸಿ ನಾಷ್ಟಾ ತರಲು ಇವರಿಗೆ ಮೊದಲೇ ಹೇಳಿದ್ದೆ. ತಿನ್ನಿ. ಹಾಗೇ ತಿನ್ನುತ್ತಾ ಸಾವಕಾಶವಾಗಿ ಮಾತಾಡೋಣ.

ವಿ.ಬಾ.: ಈ ತಟ್ಟೆಇಡ್ಲಿ ತುಂಬಾ ಚೆನ್ನಾಗಿದೆ ಸಾರ್.

ಡಾವಿ: ರೀಇವ್ರೆ, ನಿಮಗೆ ಎಐ ಗೊತ್ತೇನ್ರಿ?

ವಿ.ಬಾ.: ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಕೃತಕ ಬುದ್ಧಿಮತ್ತೆ ಅಂತಾರಲ್ಲ, ಅದಾ? ನಮ್ಮಂತಹ ದಡ್ಡರಿಗೆ ಇದೆಲ್ಲ ತಿಳಿಯುಲ್ಲ. ಇದರಿಂದ ತುಂಬ ಜನಕ್ಕೆ ಕೆಲಸ ಹೋಗುತ್ತಂತೆ ಹೌದಾ ಸಾರ್?

ಡಾವಿ: ಹಾಗೇನೂ ಇಲ್ರೀ. ಆದರೆ ಇದು ಬುದ್ಧಿವಂತರಿಗೇ ಬಿಡಿಸಲಾಗದ ಸಮಸ್ಯೆಗಳಿಗೆ ಬಹಳ ಬೇಗ ಪರಿಹಾರ ಹುಡುಕಿ ಕೊಡುವುದಂತೆ.

ವಿ.ಬಾ.: ಈಗ ವಿಷಯಕ್ಕೆ ಬರೋಣ. ನಮ್ಮ ಬವಣೂರಿನ ಟ್ರಾಫಿಕ್ ಬಗ್ಗೆ ನಿಮ್ಮ ವಿಚಾರ ಏನು ಸಾರ್?

ಡಾವಿ: ಇದು ಬಹಳ ದೊಡ್ಡ ಸಮಸ್ಯೆ ಆಗಿದೆ. ಇದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿದ್ದೇನೆ. ಅದರಲ್ಲಿ ವಿಜ್ಞಾನಿಗಳು, ಮ್ಯಾನೇಜ್‌ಮೆಂಟ್ ತಜ್ಞರು, ಕಂಪ್ಯೂಟರ್ ಪರಿಣತರು ಎಲ್ಲ ಇದ್ದಾರೆ. ನಾಲ್ಕೈದು ಮೀಟಿಂಗ್ ಮಾಡಿದರೂ ಈ ಸಮಸ್ಯೆಗೆ ಸೂಕ್ತ ಪರಿಹಾರ ಆ ಘಟಾನುಘಟಿ ಬುದ್ಧಿಜೀವಿಗಳಿಗೂ ಹೊಳೆಯಲಿಲ್ಲ. ಕೊನೆಗೆ ಅವರೆಲ್ಲ ಕೈಚೆಲ್ಲಿ ಈ ಸಮಸ್ಯೆಗೆ ಎಐನಿಂದ ಪರಿಹಾರ ದೊರೆಯಬಹುದು ಎಂದು ಸೂಚಿಸಿದರು. ಅದಕ್ಕೇ ನಿಮ್ಮನ್ನು ಕೇಳಿದ್ದು ಎಐ ನಿಮಗೆ ಗೊತ್ತಾ ಅಂತ.

ವಿ.ಬಾ.: ಇದು ದೊಡ್ಡ ಕುದುರೆ ಚೇಷ್ಟೆ. ಇದಕ್ಕೆ ಬೇಕಾಗುವ ಹಣ ಮತ್ತು ತಂತ್ರಜ್ಞಾನ ನಮ್ಮಲ್ಲಿ ಇಲ್ಲ ಎಂದು ಹೇಳುತ್ತಾರಲ್ಲ?

ಡಾವಿ: ಅದಕ್ಕೇ ನಾವು ಈ ಕೆಲಸವನ್ನು ಹೈನಾ ದೇಶದ ಕಂಪನಿಗೆ ವಹಿಸಿದ್ದೇವೆ. ಅವರು ಡೀಪ್ ಹೋಲ್ ಎಂಬ ಕೃತಕ ಬುದ್ಧಿಮತ್ತೆಯಿಂದ ಕೆಲಸ ಮಾಡುವ ಸಾಫ್ಟ್‌ವೇರ್ ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸಿದ್ದಾರೆ. ಇದು ಟ್ರಂಪಣ್ಣನ ದೇಶದ ಎಐ ಸಾಫ್ಟ್‌ವೇರ್‌ಗಿಂತ ಅಗ್ಗ. ಅವರು ಈಗಾಗಲೇ ಒಂದು ಪೂರ್ವಭಾವಿ ವರದಿಯನ್ನು ಕೊಟ್ಟಿದ್ದಾರೆ. ಬವಣೂರಿನ ಅಭಿವೃದ್ಧಿಗೆ ಅದರಲ್ಲಿ ಒಂದು ದೊಡ್ಡ ಮಾಸ್ಟರ್ ಪ್ಲಾನ್ ಇದೆ.

ವಿ.ಬಾ.: ಹೇಗಿದೆ ಸಾರ್ ವರದಿ? ನಿಮಗೆ ಇಷ್ಟ ಆಯ್ತಾ? ನಾವೂ ನೋಡಬಹುದಾ ಅದನ್ನ?

ಡಾವಿ: ವರದಿ ಸಖತ್ ಬೊಂಬಾಟಾಗಿದೆ. ಮಾಸ್ಟರ್ ಪ್ಲಾನನ್ನು ನಮ್ಮ ಎಕ್ಸ್‌ಪರ್ಟ್ ಕಮಿಟಿಯವರು ಅರ್ಥ ಮಾಡಿಕೊಳ್ಳಲು ತಿಣುಕುತ್ತಿದ್ದಾರೆ. ಇದನ್ನು ಮುಖ್ಯಮಂತ್ರಿಗಳು ನೋಡಬೇಕು, ಮಂತ್ರಿಮಂಡಲದಲ್ಲಿ ಪಾಸ್ ಆಗಬೇಕು. ಆಮೇಲಷ್ಟೇ ಪತ್ರಿಕೆಗಳಿಗೆ ಬಿಡುಗಡೆ ಆಗುತ್ತೆ.

ವಿ.ಬಾ.: ಏನ್ಸಾರ್ ಅಷ್ಟು ದೂರದಿಂದ ನನ್ನನ್ನು ಕರೆಸಿಕೊಂಡಿರಿ. ರಾತ್ರಿಯೆಲ್ಲಾ ನಿದ್ದೆಗೆಟ್ಟು ಹತ್ತು ಮೈಲಿ ಪ್ರಯಾಣ ಮಾಡಿ ಬಂದಿದ್ದೇನೆ. ಈಗ ಖಾಲಿ ಕೈಯಲ್ಲಿ ಹೋಗಬೇಕಾ?

ಡಾವಿ: ಬೇಜಾರು ಮಾಡ್ಕೋಬೇಡ್ರಿ. ಅಫಿಷಿಯಲ್ಲಾಗಿ ನಿಮಗೆ ಆ ರಿಪೋರ್ಟ್ ತೋರಿಸುಕ್ಕೆ ಆಗುಲ್ಲ. ಆದರೆ ನಾನು ನಿಮಗೆ ಅದರಲ್ಲಿರುವ ಮುಖ್ಯ ಅಂಶಗಳನ್ನು ಹೇಳುತ್ತೇನೆ. ಅದನ್ನು ನಿಮ್ಮ ಪತ್ರಿಕೆಯಲ್ಲಿ ಬರೆಯಬಹುದು. ಆದರೆ ನನ್ನ ಹೆಸರು ಎಲ್ಲಿಯೂ ಬರಬಾರದು. ನಂಬಲರ್ಹವಾದ ಮೂಲಗಳಿಂದ ಎಂದಷ್ಟೇ ಬರೆಯಿರಿ.

ವಿ.ಬಾ.: ಹಾಗೇ ಆಗಲಿ ಹೇಳಿ ಸಾರ್.

ಡಾವಿ: ಈ ರಿಪೋರ್ಟ್ ಬಹಳ ದೊಡ್ಡದು. ಮುಖ್ಯವಾದ ಅಂಶಗಳನ್ನು ಮಾತ್ರ ಹೇಳುತ್ತೇನೆ. ಹೆಚ್ಚು(ಅರ್ಥವಾಗದ!) ಪ್ರಶ್ನೆಗಳನ್ನು ಕೇಳಬೇಡಿ. ಸಂಚಾರೀ ವ್ಯವಸ್ಥೆಯ ದೃಷ್ಟಿಯಿಂದ ಬವಣೂರನ್ನು ಮೂರು ಸ್ತರಗಳಲ್ಲಿ ಅಭಿವೃದ್ಧಿ ಪಡಿಸಲಾಗುತ್ತದೆ. ಮೊದಲನೆಯದು ಭೂತಲ. ಇದು ಈಗ ನಾವು ನೀವು ಎಲ್ಲ ಮನೆಮಠ ಕಟ್ಟಿಕೊಂಡು ವಾಸ ಮಾಡುತ್ತಿರುವ ಭೂಪ್ರದೇಶ. ಇಲ್ಲಿ ವಾಹನಗಳ ದಟ್ಟಣೆ ವಿಪರೀತವಾಗಿ, ಅವುಗಳು ಬಸವನಹುಳುಗಳಂತೆ ಚಲಿಸುತ್ತಿವೆ. ಸದಾ ದುರಸ್ತಿಯಲ್ಲಿರುವ ಚರಂಡಿಗಳು, ಮಣ್ಣುಕಲ್ಲಿನ ರಾಶಿಗಳು, ಐಷಾರಾಮಿ ಕಾರುಗಳು, ಇಡ್ಲಿ, ದೋಸೆ, ಚಾಟ್ಸ್ ಇತ್ಯಾದಿಗಳನ್ನು ಉಣಬಡುಸುವ ಹೊಟೇಲ್‌ಗಳು, ಪಾದಚಾರಿ ಮಾರ್ಗಗಳನ್ನು ಆಕ್ರಮಿಸಿಕೊಂಡಿದ್ದು, ನಡೆಯುವವರಿಗೆ ಜಾಗವೇ ಇಲ್ಲದಂತಾಗಿದೆ. ವಾಹನಗಳಿಗಾಗಿ ರಸ್ತೆಗಳನ್ನು ಅಗಲ ಮಾಡಿದಂತೆ, ಪಾದಚಾರಿಗಳ ಮಾರ್ಗ ಕಿರಿದಾಗುತ್ತಿದ್ದು, ಎಷ್ಟೋ ಕಡೆ ಅದು ಸಂಪೂರ್ಣವಾಗಿ ಮಾಯವಾಗಿದೆ. ಇಂತಹ ಅವ್ಯವಸ್ಥೆಯಿಂದ ಒಂದು ಕಾಲದಲ್ಲಿ ವಿಶ್ವಪ್ರಸಿದ್ಧಿಯಾಗಿದ್ದ ನಮ್ಮ ಬವಣೂರಿಗೆ ಅಪಖ್ಯಾತಿ ಬಂದಿದೆ. ಹಾಗಾಗಿ ಭೂತಲದಲ್ಲಿ ಸಿಟಿಬಸ್ಸುಗಳು ಮತ್ತು ಟ್ರಾಮ್‌ಗಳಿಗೆ ಮಾತ್ರ ಅವಕಾಶವಿರುತ್ತದೆ. ಇವುಗಳನ್ನು ಹಿಡಿಯಲು ಯಾರೂ ಹತ್ತು ನಿಮಿಷಗಳಿಗಿಂತ ಹೆಚ್ಚು ನಡೆಯಬೇಕಾಗಿರುವುದಿಲ್ಲ ಮತ್ತು ಬಸ್ಸಿಗಾಗಿ ಹತ್ತು ನಿಮಿಷಗಳಿಗಿಂತ ಹೆಚ್ಚು ಕಾಯಬೇಕಾಗಿರುವುದಿಲ್ಲ. ಇವುಗಳಲ್ಲಿ ಪ್ರಯಾಣ ಸ್ತ್ರೀಯರಿಗಷ್ಟೇ ಅಲ್ಲ, ಎಲ್ಲರಿಗೂ

ಸಂಪೂರ್ಣ ಉಚಿತ. ಬಹಳ ಕಿರಿದಾದ ರಸ್ತೆಗಳಲ್ಲಿ ಮಾತ್ರ ಎಲೆಕ್ಟ್ರಿಕ್ ಆಟೋಗಳಿಗೆ ಓಡಾಡಲು ಅನುಮತಿ ಇರುತ್ತದೆ. ಸೈಕಲ್ಲುಗಳಿಗಾಗಿ ಮುಖ್ಯರಸ್ತೆಯ ಎರಡೂ ಬದಿಗಳಲ್ಲಿ ಕಾಯ್ದಿಟ್ಟ ಮಾರ್ಗಗಳು ಇರುತ್ತವೆ. ಭೂತಲದಲ್ಲಿ ಬೇರೆ ಯಾವುದೇ ವೈಯುಕ್ತಿಕ ವಾಹನಗಳ ಸಂಚಾರಕ್ಕೆ ಪರವಾನಗಿ ಇರುವುದಿಲ್ಲ.

ಭೂತಲದಿಂದ 50 ಅಡಿಗಳ ಕೆಳಗೆ ಅತಳ ಅಂತಸ್ತು ಇರುತ್ತದೆ. ನಮ್ಮ ದೇಹದ ರಕ್ತನಾಳಗಳಂತೆ ಅತಲ ಸ್ತರದಲ್ಲಿ ದೊಡ್ಡ ಮತ್ತು ಚಿಕ್ಕ ಸುರಂಗಗಳ ಬೃಹತ್ ಜಾಲವಿರುತ್ತದೆ. ಇವು ಖಾಸಗಿ ವಾಹನಗಳ ಸಂಚಾರಕ್ಕೆ ಮೀಸಲು. ಎರಡು ಚಕ್ರಗಳ ಮತ್ತು ನಾಲ್ಕು ಚಕ್ರಗಳ ವಾಹನಗಳು ಅವುಗಳಿಗಾಗಿ ಮೀಸಲಿಟ್ಟ ಸುರಂಗಗಳಲ್ಲಿಯೇ ಓಡಾಡಬೇಕು. ಇಲ್ಲಿಯೂ ವಿದ್ಯುತ್ ಚಾಲಿತ ವಾಹನಗಳಿಗೆ ಮಾತ್ರ ಅನುಮತಿ ಇರುತ್ತದೆ.

ಭೂತಲದಿಂದ ನೂರು ಅಡಿ ಎತ್ತರದಲ್ಲಿ ಗಗನತಲ ಇರುತ್ತದೆ. ಇದು ಮತ್ತೊಂದು ರಸ್ತೆಗಳ ಜಾಲ. ಇದು ನಗರದ ಎಲ್ಲ ವಿಮಾನ, ರೈಲು ಮತ್ತು ಬಸ್ ನಿಲ್ದಾಣಗಳನ್ನು ಹಾಗೂ ಎಲ್ಲ ಮಂತ್ರಿಮಹೋದಯರ ಹಾಗೂ ಉನ್ನತಾಧಿಕಾರಿಗಳ ಮನೆ ಮತ್ತು ಕಚೇರಿಗಳನ್ನೂ ಜೋಡಿಸುತ್ತವೆ. ಹಾಗೆಯೇ ಪಂಚತಾರಾ ಹೊಟೇಲ್‌ಗಳು, ಪಂಚತಾರಾ ಆಸ್ಪತ್ರೆಗಳು, ಪ್ರತಿಷ್ಠಿತ ಐಟಿ, ಬಿಟಿ ಕಂಪನಿಗಳಿಗೂ ಈ ಗಗನಗಾಮಿ ರಸ್ತೆಗಳು ಸಂಪರ್ಕ ಕಲ್ಪಿಸುತ್ತವೆ. ಜನಸಾಮಾನ್ಯರಿಗೆ ಇಲ್ಲಿ ಪ್ರವೇಶವಿಲ್ಲ.

ಈ ಮೂರೂ ಸ್ತರಗಳ ನಡುವೆ ವೇಗವಾಗಿ ಚಲಿಸುವ ಲಿಫ್ಟ್‌ಗಳ ಮೂಲಕ ಸಂಪರ್ಕ ಕಲ್ಪಿಸಲಾಗುವುದು. ಇವುಗಳಲ್ಲಿ ವಾಹನಗಳನ್ನೂ ಸಹ ಮೇಲೆ ಕೆಳಗೆ ಕೊಂಡೊಯ್ಯಬಹುದು.

ನಮ್ಮ ಬವಣೂರಿನ ಮತ್ತೊಂದು ಸಮಸ್ಯೆ ಕಸದ ವಿಲೇವಾರಿ. ಕಸದ ಮೇಲಿನ ತೆರಿಗೆಯನ್ನು ಎಷ್ಟೇ ಹೆಚ್ಚಿಸಿದರೂ, ಜನ ಕಸವನ್ನು ರಸ್ತೆಗಳಲ್ಲಿ ಎಸೆಯುವುದನ್ನು ಬಿಟ್ಟಿಲ್ಲ. ಮಾಸ್ಟರ್ ಪ್ಲಾನಲ್ಲಿ ಇದಕ್ಕೂ ಪರಿಹಾರ ಸೂಚಿಸಿದ್ದಾರೆ. ಅತಲದಲ್ಲಿ ನೂರಾರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಬೇಕು. ಇವು ಕಸವನ್ನು ಗೊಬ್ಬರ ಮತ್ತು ವಿದ್ಯುತ್ತನ್ನಾಗಿ ಪರಿವರ್ತಿಸುತ್ತವೆ. ಜೊತೆಯಲ್ಲೇ ಕಬ್ಬಿಣ, ತಾಮ್ರ, ಚಿನ್ನ, ಬೆಳ್ಳಿ ಮುಂತಾದ ಲೋಹಗಳನ್ನು ಬೇರ್ಪಡಿಸಿ ಮರುಬಳಕೆ ಮಾಡಲು ಸಹಾಯ ಮಾಡುತ್ತವೆ. ಇದಕ್ಕಾಗಿ ಗಗನತಲ ಮತ್ತು ಭೂತಲಗಳಿಂದ ಕಸವನ್ನು ಅತಲಕ್ಕೆ ತಲುಪಿಸಲು ದೊಡ್ಡ ಚಿಮಿಣಿಗಳ ವ್ಯವಸ್ಥೆ ಇರುತ್ತದೆ. ಮೇಲಿನಿಂದ ಚಿಮಿಣಿಯಲ್ಲಿ ಹಾಕಿದ ಕಸ ನೇರವಾಗಿ ಅತಲದ ಸಂಸ್ಕರಣಾ ಘಟಕಗಳನ್ನು ಸೇರುತ್ತದೆ. ಇದಕ್ಕೆ ಬೇಕಾದ ತಂತ್ರಜ್ಞಾನವನ್ನೂ ಹೈನಾ ದೇಶದವರೇ ಒದಗಿಸುತ್ತಾರೆ.

ವಿ.ಬಾ.: ಅದ್ಭುತವಾಗಿದೆ ಸಾರ್ ಈ ಮಾಸ್ಟರ್ ಪ್ಲಾನ್. ಇದನ್ನೆಲ್ಲಾ ಕಾರ್ಯರೂಪಕ್ಕೆ ತರಲು ಎಷ್ಟು ಹಣ ಬೇಕಾಗಬಹುದು?

ಡಾವಿ: ಲಕ್ಷಾಂತರ ಕೋಟಿ ಬೇಕಾಗಬಹುದು. ಆದರೆ ಹಣ ಮುಖ್ಯ ಅಲ್ಲಾರಿ. ಇದರಿಂದ ಲಕ್ಷಾಂತರ ಜನರಿಗೆ ಕೆಲಸ ಸಿಗುತ್ತದೆ, ಅವರಿಗೆ ಜೀವನೋಪಾಯಕ್ಕೆ ಒಂದು ದಾರಿಯಾಗುತ್ತದೆ. ಈ ಮಾಸ್ಟರ್ ಪ್ಲಾನ್ ಸಾಕಾರವಾದರೆ ನಮ್ಮ ಬವಣೂರು ಇಡೀ ವಿಶ್ವದಲ್ಲೇ ಮಾದರಿ ನಗರವಾಗುತ್ತದೆ.

ವಿ.ಬಾ.: ಸಾರ್, ಈ ಮಾಸ್ಟರ್ ಪ್ಲಾನನ್ನು ಜಾರಿಗೊಳಿಸಿದರೆ ಬವಣೂರಿನಲ್ಲಿರುವ ಅಸಂಖ್ಯಾತ ಮರಗಳ ಗತಿ ಏನಾಗುತ್ತದೆ? ಪರಿಸರವಾದಿಗಳು ಸುಮ್ಮನಿರುತ್ತಾರೆಯೇ?

ಡಾವಿ: ನೋಡ್ರಿ, ಅಭಿವೃದ್ಧಿ ಪುಕ್ಕಟೆ ಬರುವುದಿಲ್ಲ. ಆದರೆ ಪರಿಸರವಾದಿಗಳು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಅತಲ, ಭೂತಲ ಮತ್ತು ಗಗನತಲಗಳ ಎಲ್ಲ ಸುರಂಗ, ಗೋಡೆ ಮತ್ತು ಫ್ಲೈಓವರ್‌ಗಳ ಮೇಲೆ ಹಚ್ಚಹಸುರಿನ ವಿಶಾಲ ಮರಗಳ ಚಿತ್ರಗಳನ್ನು ಬರೆಸುತ್ತೇವೆ. ಋತುಮಾನಕ್ಕೆ ತಕ್ಕಂತೆ ನವನವೀನ ಚಿತ್ರಗಳನ್ನು ನೀವು ಕಾಣಬಹುದು.

ವಿ.ಬಾ.: ಸಾರ್, ನಿಮ್ಮಿಂದ ಬಹಳ ಮಾಹಿತಿ ದೊರೆಯಿತು. ನಾಲ್ಕೈದು ದಿನಗಳಲ್ಲಿ ನಮ್ಮ ಪತ್ರಿಕೆ 'ಬವಣೂರು ಸಮಾಚಾರ'ದಲ್ಲಿ ಇದು ದೊಡ್ಡ ಸುದ್ದಿಯಾಗಿ ಬರುತ್ತದೆ.


ಡಾವಿ: ನಾಲ್ಕೈದು ದಿನ ಯಾಕ್ರೀ? ನಾಳೇನೇ ಹಾಕಿ. ನಿಮ್ಮನ್ನು ಬೇಗನೆ ಮನೆಗೆ ತಲುಪಿಸಲು ಹೊರಗಡೆ ಸರ್ಕಾರಿ ವಾಹನ ಸಿದ್ಧವಾಗಿದೆ. ಆದರೆ, ಜ್ಞಾಪಕವಿರಲಿ, ನಾನು ನಿಮಗೆ ಏನೂ ಹೇಳಿಲ್ಲ.

ವಿ.ಬಾ.:(ನಗುತ್ತಾ) ಹೌದು ಸರ್. ನೀವು ನನಗೆ ಮಸಾಲೆ ದೋಸೆ, ಇಡ್ಲಿ, ಸ್ವೀಟು, ಕಾಫಿ ಅಷ್ಟೇ ಕೊಡಿಸಿದಿರಿ. ಬಹಳ ಧನ್ಯವಾದಗಳು. ನಾಳಿದ್ದಿನ ಬವಣೂರು ಸಮಾಚಾರ ಪತ್ರಿಕೆಯನ್ನು ನೋಡಲು ಮರೆಯಬೇಡಿ. ನಮಸ್ಕಾರ.

■



"ಅಪ್ಪ ಈಗ್ತಾನೆ ವಿಧಾನಸಭೇಲಿ ವಿರೋಧ ಪಕ್ಷದವರ ಪ್ರಶ್ನೆಗಳಿಗೆ ಉತ್ತರ ಹೇಳಿ ಸುಸ್ತಾಗಿ ಬಂದಿದ್ದಾರೆ. ನೀನು ಪ್ರಶ್ನೆ ಕೇಳ್ಬೇಕೊಂದ್ರೆ ಕೇಳ್ಬೇಡ ಮರಿ."



ಸರ್ಕಾರ ಈಗ ಯಾರು ಚಳವಳಿ ನಡೆಸಿದ್ರೂ ಅವರ ಬೇಡಿಕೆಗಳ್ನ ಈಡೇರಿಸ್ತಾ ಇದೆ. ಆದ್ರಿಂದ ನಾವು ಪರೀಕ್ಷೆ ಬೇಡಾಂತ ಚಳವಳಿ ಹೂಡೋಣ


# ಕ್ರಿಕೆಟ್ ಜಗತ್ತು ಮತ್ತು ಅಲ್ಲಿನ ಅಮೋಘ ಘಳಿಗೆಗಳು

ಇ.ಆರ್.ರಾಮಚಂದ್ರನ್

**ಪುಸ್ತಕ ವಿಮರ್ಶೆ: ರಾಂಕಿ ಬೆಳ್ಳೂರ್**

ತಮ್ಮ ನೆನಪಿನ ಬುತ್ತಿಯಿಂದ ಇಪ್ಪತ್ನಾಲ್ಕು ವೆರೈಟಿಯ ಮೆನು ತಯಾರಿಸಿ ಕನ್ನಡದ ಕ್ರಿಕೆಟ್ ಭಕ್ತರಿಗೆ ಮೃಷ್ಟಾನ್ನ ಉಣಬಡಿಸಿದ ಲೇಖಕರಿಗೆ–ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ! ಎಂದು ಸಾಷ್ಟಾಂಗ ನಮಿಸುವೆ !

ಬಾಲ್ಯದಿಂದಲೇ ಅವರಿಗೆ, ಅವರ ಮನೆಯ ಸದಸ್ಯರಿಗೆ ಎಷ್ಟರ ಮಟ್ಟಿಗೆ ಕ್ರಿಕೆಟ್ ಆವರಿಸಿಕೊಂಡಿತ್ತು ಎಂದು ಇ.ಆರ್. ರಾಮಚಂದ್ರನ್ (ERR) ಶುರುವಿನಲ್ಲೇ ಎರಡು ಮಾತುಗಳಲ್ಲಿ ಹೇಳಿಕೊಂಡಿದ್ದಾರೆ.




ಭಾರತದಲ್ಲಿ ಕ್ರಿಕೆಟ್ ಒಂದು ಧರ್ಮವಾದರೆ, ಇ.ಆರ್. ರಾಮಚಂದ್ರನ್ ಆ ಧರ್ಮದ ಹಿರಿಯ ಪುರೋಹಿತರ–ಲ್ಲೊಬ್ಬರು ! ಆದರೆ, ಅವರು ಕಟ್ಟುನಿಟ್ಟಾದ ನಿಯಮಗಳನ್ನು ವಿಧಿಸುವ ಬದಲಿಗೆ ವಿವರವಾದ ಸಂಶೋಧನೆ, ಹಾಸ್ಯ ಮತ್ತು ನೆನಪುಗಳೊಂದಿಗೆ ತಮ್ಮ ಪ್ರವಚನವನ್ನು ನೀಡುತ್ತಾರೆ. ERR ಎಂದಿಗೂ ಕ್ರಿಕೆಟೌ–ಪಾಸಕರಾಗಿದ್ದಾರೆ. ಅವರ 'ಕ್ರಿಕೆಟ್ ಜಗತ್ತು ಮತ್ತು ಅಲ್ಲಿನ ಅಮೋಘ ಘಳಿಗೆಗಳು' ಕೃತಿ, ಕ್ರಿಕೆಟ್ನ ಇತಿಹಾಸ, ವರ್ತಮಾನ ಮತ್ತು ನಮ್ಮ ಪ್ರಿಯ ಆಟದ ಅನಿವಾರ್ಯ ಭವಿಷ್ಯದ ಪ್ರವಾಸವನ್ನು ಕನ್ನಡ ಓದುಗರಿಗೆ ರಸಪ್ರದವಾಗಿ ಪರಿಚಯಿಸುತ್ತದೆ (ಹೌದು, ಮುಂದೆ ಬೌಲಿಂಗ್ ಮಾಡುವ ರೋಬೋಟ್ಗಳು ಮತ್ತು ವಿವಾದಾತ್ಮಕ ತೀರ್ಪು ನೀಡುವ AI ಅಂಪೈರ್ಗಳು ಕಾಣಿಸಿಕೊಳ್ಳಬಹುದು!).

ಚುರುಮುರಿ ಬ್ಲಾಗಿನ ಅಜ್ಜಿ ಸರಣಿಯ ಮೂಲಕ ಜನಪ್ರಿಯರಾದ ERR, ಈ ಕೃತಿಯಲ್ಲೂ ತಮ್ಮ ಅದೇ ತೀಕ್ಷ್ಣತೆಯನ್ನು ತಂದುಕೊಟ್ಟಿದ್ದಾರೆ. ಕ್ರಿಕೆಟ್ ಎಂದರೆ "ಇಪ್ಪತ್ತೆರಡು ಮಂದಿ ಬಿಳಿ ಪ್ಯಾಂಟ್ ಹಾಕಿಕೊಂಡು ಓಡಾಡೋದು" ಎಂದುಕೊಳ್ಳುವವರಿಗೆ ಸಹ ಇದು ಮನರಂಜನೆ ನೀಡುತ್ತದೆ. 24 ಚೆನ್ನಾಗಿ ರೂಪುಗೊಂಡ ಅಧ್ಯಾಯಗಳೊಂದಿಗೆ 240 ಪುಟಗಳ ಈ ಪುಸ್ತಕ, ಬೆಳಿಗ್ಗೆ ಎಂಟಕ್ಕೆ ತಿಂಡಿ–ಕಾಫಿ ಮುಗಿಸಿ ಮಧ್ಯಾಹ್ನ ಊಟದ ವೇಳೆಗೆ ಓದಿ ಮುಗಿಸಬಹುದಾದ ಕ್ರಿಕೆಟ್ ಕಥೆ–ದಂತಕಥೆ–ವ್ಯಕ್ತಿಚಿತ್ರ –ಸಂದರ್ಭಗಳ ಸೊಗಸಾದ ಗುಚ್ಛವಾಗಿದೆ...T20 ಓದುವ ವೇಗ ಇದ್ರೆ ಇನ್ನೂ ತ್ವರಿತ, ಟೆಸ್ಟ್ ಪಂದ್ಯದಂತೆ ಓದುವುದಾದರೆ ಇನ್ನೂ ನಿಧಾನ!

ಈ ಪುಸ್ತಕದ ವೈಶಿಷ್ಟ್ಯವೆಂದರೆ ಅದರ ಅನನ್ಯ ಅಧ್ಯಾಯ ಶೀರ್ಷಿಕೆಗಳು. ನೀವು ಡಾನ್ ಬ್ರಾಡ್ಮನ್ ಮತ್ತು ಸಚಿನ್ ತೆಂಡೂಲ್ಕರ್‌ನ್ನು "ಕ್ರಿಕೆಟ್ನ ಸಿಂಹ ಮತ್ತು ಸಿಂಹದ ಮರಿ " ಎಂದು ಕರೆಯುವುದನ್ನು ಎಲ್ಲಿ ನೋಡಬಹುದು? ಅಥವಾ ಸುನಿಲ್ ಗಾವಸ್ಕರ್, ಹನೀಫ್ ಮಹಮ್ಮದ್ ಮತ್ತು ಜಿ.ಆರ್. ವಿಶ್ವನಾಥ್ ಅವರನ್ನು "ಲಿಟ್ಲ್ ಮಾಸ್ಟರ್ಸ್" ಎಂದು ಉಲ್ಲೇಖಿಸುವುದನ್ನು? ಅನಿಲ್ ಕುಂಬ್ಳೆಯನ್ನು 10/74 ಎಂದೂ, ಜಾವಗಲ್ ಶ್ರೀನಾಥ್ ರನ್ನು 'ಮೈಸೂರು ಎಕ್ಸ್ಪ್ರೆಸ್' ಎಂದೂ ಈ ರೀತಿಯ ಸೃಜನಶೀಲ ಸ್ಪರ್ಶ ಈ ಕೃತಿಯನ್ನು ಓದುವಾಗ, ಓರ್ವ ಕ್ರಿಕೆಟ್ ಆರಾಧಕ ಅದ್ಭುತವಾದ ಕವರ್ ಡ್ರೈವ್ ಆಡಿದಂತೆ ಭಾಸವಾಗುತ್ತದೆ.

ERR ಅವರು ಈ ಪುಸ್ತಕದಲ್ಲಿ ಪುರುಷ ಕ್ರಿಕೆಟ್ ಅನ್ನು ಅಷ್ಟೇ ಅಲ್ಲದೇ, ಮಹಿಳಾ ಕ್ರಿಕೆಟ್ಗೂ ಸಮರ್ಪಕ ಪ್ರಾಮುಖ್ಯತೆ ನೀಡಿದ್ದಾರೆ–ಕರ್ನಾಟಕದ ಶಾಂತಾ ರಂಗಸ್ವಾಮಿ ಇಂದ ಮಿಥಾಲಿ ರಾಜ್ ವರೆಗೆ. ಕಾಕತಾಳೀಯವೇನೋ.. ಈ ಪುಸ್ತಕ ಬಿಡುಗಡೆ ಆದದ್ದು ಮಾರ್ಚ್ 8, ಮಹಿಳೆಯರ ದಿನದಂದು, ಜಾವಗಲ್ ಶ್ರೀನಾಥ್ ರಿಂದ, ತಾಯಿ ಚಾಮುಂಡಿಯ ತವರೂರಾದ ಮೈಸೂರಿನಲ್ಲಿ ! ಈ ಪುಸ್ತಕ ಕರ್ನಾಟಕದ ಕ್ರಿಕೆಟ್ ದಿಗ್ಗಜರನ್ನು ನೆನಪಿಸಿಕೊಂಡು, ನಮ್ಮ ಸ್ವಂತ ಆಟಗಾರರು ಮರೆಯಾಗದಂತೆ ನೋಡಿಕೊಳ್ಳುತ್ತದೆ.

ಈ ಪುಸ್ತಕವನ್ನು ಇನ್ನಷ್ಟು ವಿಶಿಷ್ಟಗೊಳಿಸುವ ಅಂಶ ಎಂದರೆ ಇದು ಕ್ರಿಕೆಟ್ ಮತ್ತು ಸಂಸ್ಕೃತಿಯನ್ನು ಹತ್ತಿರಗೊಳಿಸುತ್ತದೆ. ಹಿರಿಯ ಬರಹಗಾರ ಬಾಪು ಸತ್ಯನಾರಾಯಣ ಅವರು ಟೆಸ್ಟ್, ಒಡಿಐ ಮತ್ತು T20 ಕ್ರಿಕೆಟ್ ಅನ್ನು ಶಾಸ್ತ್ರೀಯ, ಲಘು ಮತ್ತು ಪಾಪ್ ಸಂಗೀತಕ್ಕೆ ಹೋಲಿಸಿದ್ದಾರೆ. ಅದನ್ನು ಹೀಗೂ ನೋಡಬಹುದು–ಟೆಸ್ಟ್ ಕ್ರಿಕೆಟ್ನಲ್ಲಿ ನಿಧಾನ ವಿಲಂಬ ಕಾಲ, ಒಡಿಐನಲ್ಲಿ ಸಮತೋಲನದ ಮಧ್ಯಮ ಕಾಲ, ಮತ್ತು T20ಯಲ್ಲಿ ಚುರುಕು ಧೃತ ಕಾಲ–ಈ ಕೃತಿಯನ್ನು ಓದಿದ ನಂತರ ಇದು ಸಂಪೂರ್ಣ ಅರ್ಥವಾಗುತ್ತದೆ!

ನೀವು ಕ್ರಿಕೆಟ್ ಪ್ರೇಮಿಯಾಗಿರಲಿ, ಅಥವಾ ಕೇವಲ ಕೊನೆಯ ಓವರ್ಗಳಲ್ಲಿ ಮಾತ್ರ ಆಸಕ್ತಿ ತೋರಿಸುವ ಓದುಗರಾಗಿರಲಿ, ಈ ಪುಸ್ತಕ ನಿಮಗಾಗಿ. ಹಾಸ್ಯ, ವಿವರವಾದ ಸಂಶೋಧನೆ ಮತ್ತು ಹೊಸತನದೊಂದಿಗೆ, 'ಕ್ರಿಕೆಟ್ ಜಗತ್ತು ಮತ್ತು ಅಲ್ಲಿನ ಅಮೋಘ ಘಳಿಗೆಗಳು' ಕ್ರಿಕೆಟ್ ಪ್ರೇಮಿಗಳು ಮತ್ತು ಕನ್ನಡ ಸಾಹಿತ್ಯ ಆಸಕ್ತರಿಗಾಗಿ ಕಡ್ಡಾಯ ಓದಬೇಕಾದ ಕೃತಿ. ಒಂದು ಪ್ರತಿಯನ್ನು ಪಡೆಯಿರಿ, ಬಿಸಿಬಿಸಿ ಫಿಲ್ಟರ್ ಕಾಫಿಯೊಂದಿಗೆ ಕುಳಿತು ERR ಅವರೊಂದಿಗೆ ನೆನಪಿನ ಇನ್ನಿಂಗ್ಸ್ ಆಡಿ!

■

ಪುಟ್ಟು : ನಾನು ರಾಜಕೀಯಕ್ಕೆ ಹೋಗೋಣ ಅಂತ ಇದೀನಿ.

ಕಿಟ್ಟು : ಹೌದಾ, ಅದಕ್ಕೆ ಏನು ತಯಾರಿ ಮಾಡ್ತಿದ್ಯಾ ?

ಪುಟ್ಟು : ಅದಕ್ಕೇನು ತಯಾರಿ, ಪ್ರಯತ್ನ ಏನೂ ಮಾಡಿಲ್ಲ. !

ಕಿಟ್ಟು : ಓಹ್ ವೆರಿಗುಡ್. ಈಗಾಗಲೇ ನೀನು ಅರ್ಧ ರಾಜಕೀಯಕ್ಕೆ ಹೋಗಿದ್ದೀಯಾ ..!